# ಬೃಂದಾವನ ವಾಣಿ

**ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ ಸಂಚಿಕೆ ೩೬, ಅಕ್ಟೋಬರ್ ೨೦೨೧**



KARNATAKA CULTURAL ORGANIZATION BRINDAVANA (KCOB) NJ, USA

## ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

ಸುಮಧುರ ಸ್ನೇಹ ಸಮ್ಮಿಲನ ನಮ್ಮೀ ಬೃಂದಾವನ

**ಪ್ರಿಯ ಓದುಗರೇ,**

**ಬೃಂದಾವನ ವಾಣಿಗೆ ಸ್ವಾಗತ!**

ಶರತ್ಕಾಲ ಬಂದು, ಶಾಲೆಗಳು ಪುನಃ ತೆರೆದು, ಮಕ್ಕಳು ಮತ್ತೆ ಶಾಲೆಗೆ ಹೋಗಲು ಪ್ರಾರಂಭಿಸಿದ್ದು ಮಕ್ಕಳಿಗೆ, ಮತ್ತು ಅವರಿಗಿಂತಲೂ ಹೆಚ್ಚಾಗಿ ಪೋಷಕರಿಗೆ ಸಂತಸ ತಂದಿದೆ ಎನ್ನುವುದು ಖಂಡಿತಾ ಸುಳ್ಳಲ್ಲ. ಇನ್ನು ಸದ್ಯದಲ್ಲಿಯೇ 5 ವರ್ಷದ ಮೇಲಿನ ಮಕ್ಕಳಿಗೂ ವ್ಯಾಕ್ಸೀನ್ ದೊರಕುವುದರಲ್ಲಿದೆ. ಆಮೇಲೆ ಪೋಷಕರಿಗೆ ಸ್ವಲ್ಪ ನಿರಾಳ.

ನ್ಯೂಜೆರ್ಸಿಯಲ್ಲಿ ಕೋವಿಡ್ ಬಗ್ಗೆ ನಮ್ಮ ಹೆದರಿಕೆ ಕಡಿಮೆಯಾಗಿ, ನಮ್ಮ ಸಾಮಾಜಿಕ ಕಾರ್ಯಕ್ರಮಗಳು ಮತ್ತೆ ಶುರುವಾಗುತ್ತಿರುವುದು ಕಂಡುಬರುತ್ತಿದೆ. ಭಾರತದಲ್ಲೂ 3ನೇ ಅಲೆ ಬರುವುದಿಲ್ಲ ಎಂಬ ಆಶಯವಿದೆ. ಈ ಚಾರಿತ್ರಿಕ ಪಿಡುಗಿನಿಂದ ಪ್ರಪಂಚ ಸ್ವಲ್ಪ ದಿನದಲ್ಲೇ ಆಚೆ ಬರುತ್ತದೆಂದು ಆಶಿಸೋಣ.

ಬೃಂದಾವನ ತನ್ನ ಸಹೋದರಿ ಸಂಘಗಳೊಂದಿಗೆ ಗೌರಿ ಗಣೇಶ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸಿತು. ಈಗ ತಾನೇ ನವರಾತ್ರಿ ಮುಗಿಯಿತು. ಪ್ರತಿ ನವರಾತ್ರಿಯೂ ನಮ್ಮ ಮೈಸೂರಿನ ನವರಾತ್ರಿ ಸಂಭ್ರಮವನ್ನು ನೆನಪಿಸುತ್ತದೆ. ಒಂದು ತಿಂಗಳ ಕಾಲ ಹಬ್ಬದ ವಾತಾವರಣ, ವಿಜಯದಶಮಿಯ ದಿನದ ಮೆರವಣಿಗೆಯ ಮೋಜು, ಆಹಾ! ಎಷ್ಟು ಚೆನ್ನಾಗಿರುತ್ತಿತ್ತು! ಇಲ್ಲಿ ಬೆಳೆಯುವ ಮಕ್ಕಳನ್ನು ಒಂದು ಸರ್ತಿಯಾದರೂ ನವರಾತ್ರಿ ಸಮಯದಲ್ಲಿ ಮೈಸೂರಿಗೆ ಕರೆದೊಯ್ಯಬೇಕು ಅಲ್ಲವೇ?

ಬೃಂದಾವನ ವಾಣಿಯ 36ನೇ ಸಂಚಿಕೆಯನ್ನು ನಿಮ್ಮ ಮುಂದಿಡಲು ಹರ್ಷವಾಗುತ್ತಿದೆ. ಈ ಸಂಚಿಕೆಯಲ್ಲಿ ಅನೇಕ ಆಸಕ್ತಿಪೂರ್ಣ ಲೇಖನಗಳಿವೆ. ಪ್ರತಿಭಾವಂತ ಕವಿಗಳ ಕವಿತೆಗಳಿವೆ. ನೂತನ ಪಾಕವಿಧಾನಗಳಿವೆ. ಮನಸ್ಸನ್ನು ಮುದಗೊಳಿಸುವ ಮಕ್ಕಳ ಚಿತ್ರಕಲೆಗಳಿವೆ. ಓದಿ, ನಿಮ್ಮ ಪ್ರತಿಕ್ರಿಯೆಗಳನ್ನು ನಮ್ಮೊಡನೆ ಹಂಚಿಕೊಳ್ಳಿ.


**ನಿಮ್ಮೆಲ್ಲರಿಗೂ ಮುಂಬರುವ ದೀಪಾವಳಿಯ ಶುಭಾಶಯಗಳು.**

***ನಿಮ್ಮ,***
***ಬೃಂದಾವನ ವಾಣಿ ಸಂಪಾದಕ ತಂಡ***

**ಸಂಪಾದಕ ಮಂಡಳಿ:**

**ಶ್ರೀವಿದ್ಯಾ ಪ್ರಶಾಂತ್, ಲಕ್ಷ್ಮಿ ಕೊಲಾಲ್, ಜ್ಯೋತಿ ಚಂದ್ರ, ಸತ್ಯ, ನರಸಿಂಹ ಮೂರ್ತಿ, ವಿದ್ಯಾ ಮೂರ್ತಿ, ಶೈಲಾ ಪಾಟಂಕರ್, ಪ್ರಶಾಂತ್ ಶ್ರೀನಿವಾಸ್**





**ಪ್ರಕಾಶಕರು:**

ಬೃಂದಾವನ ಕನ್ನಡ ಸಂಘ

501(3)(c) ಪಡೆದ ಚಾರಿಟಿ ಸಂಸ್ಥೆ

Karnataka Cultural Organization (KCO) Brindavana
New Jersy, USA

www.Brindavana.org



© 2021 All right reserved. No part of this newsletter may be reproduced, photocopied, or reused without prior permission from the publisher.

ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. "ಬೃಂದಾವನ ವಾಣಿ"ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು ಹಾಗೂ ಮಾಹಿತಿಗಳೆಲ್ಲವುಗಳಿಗೆ ಅವುಗಳ ಲೇಖಕರೇ ಜವಾಬ್ದಾರರು. ಅಂಕಣದಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ "ಬೃಂದಾವನ ವಾಣಿ" ಮತ್ತು ಬೃಂದಾವನ ಕನ್ನಡ ಕೂಟ ಜವಾಬ್ದಾರರಲ್ಲ. ಚಿತ್ರ ಕೃಪೆ ಅಂತರ್ಜಾಲ/ಲೇಖಕರು


ಲೇಖನಗಳನ್ನು ಕಳುಹಿಸಲು ಮತ್ತು ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: vani@brindavana.org

**ಸದಸ್ಯತ್ವ ಮಾಹಿತಿ**

ಬೃಂದಾವನ ಕನ್ನಡ ಸಂಸ್ಥೆ, ನ್ಯೂ ಜರ್ಸಿಯಲ್ಲಿ ಕನ್ನಡ ಮತ್ತು ಕನ್ನಡಿಗರ ಪರವಾದ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಚಾರಿಟೆಬಲ್ ಸಂಸ್ಥೆ. ನ್ಯೂ ಜರ್ಸಿ ಹಾಗೂ ಸುತ್ತಮುತ್ತಲಿನ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಕನ್ನಡತನವನ್ನು ಬೆಳೆಸಿ, ಪೋಷಿಸುವಂತೆ ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ. ನೀವು ಈಗಾಗಲೇ ಸದಸ್ಯರಾಗಿ ನೋಂದಾಯಿತರಾಗಿರದಿದ್ದಲ್ಲಿ ದಯವಿಟ್ಟು ಸದಸ್ಯರಾಗುವಂತೆ ಈ ಮೂಲಕ ಕೋರುತ್ತಿದ್ದೇವೆ. ವಾರ್ಷಿಕ, ದ್ವೈವಾರ್ಷಿಕ, ಅಜೀವ ಮತ್ತು ವಿದ್ಯಾರ್ಥಿ ಸದಸ್ಯತ್ವಗಳು ಲಭ್ಯ.

www.brindavana.org ಗೆ ಭೇಟಿ ಕೊಟ್ಟು, ನಿಮ್ಮ ವಿವರಗಳನ್ನು ನೀಡಿ, ಸದಸ್ಯತ್ವ ಪಡೆಯಿರಿ. ನಿಮ್ಮ ದೇಣಿಗೆ ಟ್ಯಾಕ್ಸ್ ರಹಿತ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: info@brindavana.org

# ಈ ಸಂಚಿಕೆಯಲ್ಲಿ


ಸಂಪಾದಕೀಯ...೩

ಅಧ್ಯಕ್ಷರ ನುಡಿ...೫

ಜ್ಞಾನ ಜ್ಯೋತಿ...೭

ಅರಿವಿನ ಸೊಗಡು...೯

ಈ ಹೊತ್ತಿನ ತತ್ವ...೧೩

ಸುಖ ಸಂಸಾರ...೧೫

ಕಥೆ...೧೭

ಬೃಂದಾವನದಲ್ಲಿ...೧೯

ಸಾಹಿತ್ಯ ಸಮ್ಮೇಳನ...೨೧

ನಾವಿಕೋತ್ಸವದಲ್ಲಿ...೨೪

ನದಿ ನಮನ...೨೫

ರಂಗ ನಾವಿಕ - ನಮ್ಮ ನಾಟಕ...೨೬

ನೀಲ - ನಾವಿಕ... ೨೮

ಮಂಗಳೂರು ದಸರಾ...೩೧

ಕಥಾ ಚಿಂತನ ಮಾಲಿಕೆ - 5...೩೩

ಮೂಷಿಕ ಪೂಜೆ...೩೪

9/11 ನೆನಪು...೩೫

ಕವಿ ಕಾವ್ಯ ವಿಚಾರ - 3...೩೭

ಭಾಷೆ - ವಿಮರ್ಶೆ... ೪೦

ಗುರುಭ್ಯೋ ನಮಃ...೪೧

ಯಾನ...೪೩

ಭಾವ ಲಹರಿ...೪೬

ರುಚಿ-ಅಭಿರುಚಿ...೪೭

ಕುಂಚದಿಂದ...೪೮

ಕ್ಯಾಮರಾ ಕಣ್ಣು...೫೨


*ಮೇಲಿನ ಪುಟಗಳಿಗೆ ನೇರವಾಗಿ ಹೋಗಲು, ಆಯಾ ಶೀರ್ಷಿಕೆಗಳನ್ನು ಕ್ಲಿಕ್ ಮಾಡಿ!*

*ಮುಖಪುಟದ ಚಿತ್ರ ಕೃಪೆ: ಅಂತರ್ಜಾಲ (ಮೈಸೂರಿನ ಅರಮನೆ)*



**ಆತ್ಮೀಯ ಸ್ನೇಹಿತರೇ,**

ಎಲ್ಲರಿಗೂ ನಮಸ್ಕಾರ! ಮನೆಯಿಂದ ಹೊರಗೆ ಕಾಲಿಡುತ್ತಲೇ ಮರಗಿಡಗಳ ಮೇಲೆ ಯಾರೋ ಓಕುಳಿಯನ್ನು ಚೆಲ್ಲಿಹೋಗಿರುವಂತೆ, ನಮ್ಮ ಸುತ್ತಲಿನ ವಾತಾವರಣ ಶರತ್ಕಾಲದ ಆಗಮನವಾಗಿದೆ ಎಂದು ಸಾರಿ ಹೇಳುವಂತಿದೆ. ಈ ಶರತ್ಕಾಲದಲ್ಲಿ ಪ್ರಕೃತಿಯ ಸೌಂದರ್ಯವನ್ನು ಸವಿಯುವುದು ಒಂದೆಡೆಯಾದರೆ, ಸಾಲು ಸಾಲು ಹಬ್ಬಗಳ ಸಂಭ್ರಮ, ಸವಿಯೂಟ ಮತ್ತೊಂದೆಡೆ. ಈಗಾಗಲೇ ನೀವೆಲ್ಲರೂ ನವರಾತ್ರಿಯ ಸಂಭ್ರಮವನ್ನು ನನ್ನಂತೆಯೇ ಆನಂದಿಸುತ್ತಿರುವಿರೆಂದು ಭಾವಿಸುತ್ತೇನೆ.

ಮೈಸೂರಿನಲ್ಲಿ ವೈಭವದಿಂದ ಆಚರಿಸುವ ದಸರೆಗೆ ನಾವೇನು ಕಡಿಮೆ ಇಲ್ಲವೆಂಬಂತೆ, ನಮ್ಮ ನ್ಯೂಜೆರ್ಸಿ ಕನ್ನಡಿಗರು ಈ ದೈವೀಕ ಹಬ್ಬವನ್ನು ಪಠಣ, ಪಾರಾಯಣ, ಗೊಂಬೆಯನ್ನು ಕೂರಿಸಿ, ಸ್ನೇಹಿತರ ಮನೆಗಳ ಗೊಂಬೆ ವೀಕ್ಷಣೆ ಮಾಡಿ, ರಾಸ್ ಗರ್ಬಾ ಆಡುವುದರ ಮೂಲಕ ಆಚರಿಸುತ್ತಿದ್ದಾರೆ. ಕೆಟ್ಟದರ ಮೇಲೆ ಒಳ್ಳೆಯತನವು ಮೇಲುಗೈಯಾಗಿ ಜಯ ಸಾಧಿಸುವಂತೆ, ನಾವೆಲ್ಲರೂ ನಮ್ಮ ದೌರ್ಬಲ್ಯಗಳನ್ನು ಮೆಟ್ಟಿಹಾಕಿ ನಮ್ಮ ಆಂತರಿಕ ಯುದ್ಧವನ್ನು ಜಯಿಸೋಣ.

ಬೃಂದಾವನ ಪ್ರಗತಿ ತಂಡವು, ಬೃಂದಾವನದ ಪ್ರತೀ ನಲಿವಿನ ಕಾರ್ಯಕ್ರಮದ ಜೊತೆಗೆ, ನೋವುಗಳಿಗೂ ಸ್ಪಂದಿಸಿ, ತನ್ನ ಕೈಲಾದ ಸಹಾಯ ಮಾಡುವ ಧ್ಯೇಯವನ್ನು ಹೊಂದಿದೆ. ಇತ್ತೀಚೆಗೆ ನಮ್ಮ ಪ್ರಗತಿ ಚಾರಿಟಿ ತಂಡವು ಮನೆಮಠ ಇಲ್ಲದವರಿಗೆ ಅನ್ನದಾನ ಮಾಡಲು ನ್ಯೂ ಜೆರ್ಸಿಯ ರಾಜಧಾನಿ ಟ್ರೆಂಟನ್ನಿನಲ್ಲಿರುವ "ಟ್ರೆಂಟನ್ ಸೂಪ್ ಕಿಚನ್" ಸಂಸ್ಥೆಗೆ ಹಣವನ್ನು ಸಂಗ್ರಹಿಸಿತು. ಸಂಗ್ರಹಿಸಿದ ಹಣವನ್ನು ನೀಡಲು ಹೋದಾಗ, ಆ ಸಂಸ್ಥೆಯ ಸ್ವಯಂ ಸೇವಕರನ್ನು ಭೇಟಿಮಾಡುವುದರ ಜೊತೆಗೆ, ಅವರು ಮಾಡುತ್ತಿರುವ ನಿಸ್ವಾರ್ಥ ಸೇವೆಯನ್ನು ನೋಡುವ ಅವಕಾಶವೂ ನಮ್ಮ ತಂಡಕ್ಕೆ ದೊರಕಿತು. "ಟ್ರೆಂಟನ್ ಸೂಪ್ ಕಿಚನ್" ಸಂಸ್ಥೆಯ ಆಡಳಿತ ವರ್ಗದವರು ಬೃಂದಾವನ ಕನ್ನಡಿಗರ ಉದಾರತೆಯನ್ನು ಶ್ಲಾಘಿಸಿ, ಬೃಂದಾವನ ಸಂಸ್ಥೆಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಇದ್ದವರು ಇಲ್ಲದವರಿಗೆ ಕೊಟ್ಟಾಗ ಸಿಗುವ ಆತ್ಮತೃಪ್ತಿಯ ಅನುಭವವನ್ನು ನನ್ನ ತಂಡದೊಂದಿಗೆ ನಾನೂ ಅನುಭವಿಸಿದೆ ಎಂದು ಹೇಳಲು ಸಂತೋಷವಾಗುತ್ತದೆ.

ಪ್ರಗತಿ ಚಾರಿಟಿ ತಂಡದ ಮುಂದಿನ ಧರ್ಮಕಾರ್ಯಗಳ ಯೋಜನೆಯಲ್ಲಿ ನಿಮ್ಮೆಲ್ಲರ ಸಹಕಾರವಿದೆಯೆಂದು ನಂಬಿರುತ್ತೇನೆ. ನೀವೆಲ್ಲರೂ ಗಣೇಶನ ಹಬ್ಬವನ್ನು ನಿಮ್ಮ ಸ್ನೇಹಿತರು ಮತ್ತು ಕುಟುಂಬದೊಂದಿಗೆ ಸಂಭ್ರಮದಿಂದ ಆಚರಿಸಿರುವಿರೆಂದು ಭಾವಿಸುತ್ತೇನೆ. ಬೃಂದಾವನ ಪ್ರಗತಿ ತಂಡವು ಹಬ್ಬದ ಮೊದಲು ಗಣೇಶನನ್ನು ಮನೆಯಲ್ಲೇ ತಯಾರಿಸುವ ಕಾರ್ಯಾಗಾರವನ್ನು ಏರ್ಪಡಿಸಿತ್ತು. ಗಣೇಶ ವಿನ್ಯಾಸದ ಕಾರ್ಯಾಗಾರವನ್ನು ನಮ್ಮ ಬೃಂದಾವನದ ಸದಸ್ಯರಾದ ಶ್ರೀ ರಘು ರಾಯಸಂ ಅವರ ನೇತೃತ್ವದಲ್ಲಿ ನಡೆಸಲಾಗಿತ್ತು. ಈ ವರ್ಷದ ಗಣೇಶೋತ್ಸವವನ್ನು ನಮ್ಮ ಅಕ್ಕತಂಗಿ ಕೂಟಗಳಾದ ತ್ರಿವೇಣಿ ಮತ್ತು ನವೋದಯ ಕನ್ನಡ ಕೂಟಗಳೊಂದಿಗೆ ಯೂ ಟ್ಯೂಬ್ ಮತ್ತು ಫೇಸ್ ಬುಕ್ ನೇರ ಪ್ರಸಾರದ ಮೂಲಕ ಮೂರು ಭಾಗಗಳಲ್ಲಿ ಆಚರಿಸಲಾಯಿತು.

ತ್ರಿವೇಣಿ ಸಂಘದ ಹಿರಿಯ ಸದಸ್ಯ ಹಾಗೂ ಸಂಸ್ಥೆಯ ಮಾಜಿ ಅಧ್ಯಕ್ಷರಾದ ಶ್ರೀ ಉಮೇಶ್ ಜೋಯಿಸ್ ಅವರ ಗಣೇಶನ ಪೂಜೆಯಿಂದ ಮೊದಲನೆಯ ಭಾಗ ಆರಂಭವಾಯಿತು. ಎರಡನೆಯ ಭಾಗದಲ್ಲಿ ಕರ್ನಾಟಕದ ಖ್ಯಾತ ಕಲಾವಿದರಿಂದ ಲೈವ್ ಬ್ಯಾಂಡ್ ಸಂಗೀತ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಮೂರನೆಯ ಭಾಗದಲ್ಲಿ ನಮ್ಮ ಸಹೋದರಿಯರ ಕುಟುಂಬದ ಸದಸ್ಯರಿಂದ ಸಾಂಸ್ಕೃತಿಕ ಮನರಂಜನಾ ಕಾರ್ಯಕ್ರಮಗಳು ಮೂಡಿಬಂದವು. ಮೂರೂ ತಂಡಗಳು ಸೇರಿ ಮಾಡಿದ ಈ ಕಾರ್ಯಕ್ರಮ ನನಗೊಂದು ಹೊಸ ಅನುಭವವನ್ನೇ ತಂದುಕೊಟ್ಟಿತು ಎನ್ನಲು ಹರ್ಷವಾಗುತ್ತದೆ. ಈ ಎಲ್ಲಾ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯಲು ಅವಿಶ್ರಾಂತವಾಗಿ ಶ್ರಮಿಸಿದ ಪ್ರಗತಿ ತಂಡದ ಕಾರ್ಯಕಾರಿ ಸಮಿತಿಗೆ ನನ್ನ ಮನದಾಳದ ಧನ್ಯವಾದಗಳು.

ಎಲ್ಲರಿಗೂ ನವರಾತ್ರಿ, ಕನ್ನಡ ರಾಜ್ಯೋತ್ಸವ ಹಾಗೂ ದೀಪಾಳಿಯ ಹಾರ್ದಿಕ ಶುಭಾಶಯಗಳು

**ನಿಮ್ಮ,**
**ಪದ್ಮಿನಿ ಹೇಮಂತ್**
ಅಧ್ಯಕ್ಷರು,
ಬೃಂದಾವನ ಕನ್ನಡ ಕೂಟ, ನ್ಯೂ ಜೆರ್ಸಿ

# ಬೃಂದಾವನ ಕನ್ನಡ ಕೂಟ, NJ

## ಕನ್ನಡ ರಾಜ್ಯೋತ್ಸವದ ಸಂಭ್ರಮ



"ಇಡಿಗಳಾದರೆ ಬದುಕುವೆವು , ಬಿಡಿಗಳಾದರೆ ಸಾಯುವೆವು"

ಎಂಬ ಒಗ್ಗಟ್ಟಿನ ಮಂತ್ರ ಘೋಷಿಸಿದ

**"ವೀರ ರಾಣಿ ಕಿತ್ತೂರು ಚೆನ್ನಮ್ಮ "**ನಿಗೆ ನಮ್ಮ ನಮನ

ಕಥೆ- ಶ್ರೀಮತಿ ವೀಣಾ ಮೋಹನ್ ತಂಡದವರಿಂದ

ಮತ್ತು

ಕನ್ನಡ ನಾಡ ಗೀತೆಗಳು

November 1st, 2021 @ 7pm

KCOBrindavana and



# ಶಾಶ್ವತವಲ್ಲ ಈ ಶರೀರ

ಶ್ರೀ ಯೋಗೀಂದ್ರ ಭಟ್ ಉಳಿ. ಶ್ರೀ ಕೃಷ್ಣವೃಂದಾವನ, ನ್ಯೂಜರ್ಸಿ.

ನಮಗೆ ದೇವರು ಕೊಟ್ಟ ವರ ಈ ಶರೀರ. ಆದರೆ ಸ್ವಭಾವತಃ ಇದು ನಶ್ವರ. ಸ್ವಾಧೀನದಲ್ಲಿ ಇರುವ ತನಕ ಮಾತ್ರ ಸಾಧನೆಗೆ ಅವಕಾಶ.

ಎಲ್ಲರ ದೇಹಕ್ಕೂ ಇರುವುದು ಎರಡೇ ಅವಸ್ಥೆಗಳು. ಬೆಳೆಯುವುದು ಮತ್ತು ನಶಿಸುವುದು. ಬಾಲ್ಯದಿಂದ ಯೌವನದವರೆಗಿನದ್ದು ಬೆಳೆಯುವ ದೇಹವಾದರೆ, ಮುಂದೆ ವಾರ್ಧಕ್ಯದ ಕೊನೆಯ ಅವಧಿಯ ತನಕದ್ದು ನಶಿಸುವ ಶರೀರ. 'ಶೀರ್ಯತೇ ಇತಿ ಶರೀರಂ'. ಅನುದಿನವೂ ಹುಟ್ಟಿ ಸಾಯುವ ಸೂರ್ಯನಂತೆ.

ಹೊಂಬೆಳಕಿನ ತಂಪು ಕಿರಣಗಳೊಂದಿಗೆ ಮೆಲ್ಲನೆ ಉದಯಿಸಿ, ಅಂಧಕಾರವನ್ನು ಗೆದ್ದು ಬಂದ ಸೂರ್ಯ ಮಧ್ಯಾಹ್ನದ ಹೊತ್ತಿಗೆ ಬಾನಂಗಳದಲ್ಲಿ ದೇದೀಪ್ಯಮಾನನಾಗಿ ಮೆರೆದುನಿಂತ. ನಂತರ ನಿಧಾನವಾಗಿ ಕಳೆಗುಂದುತ್ತಾ ಬಂದು ಸಂಜೆಯ ಹೊತ್ತಿಗೆ ಮತ್ತದೇ ಕತ್ತಲಿನ ಹಿತ್ತಿಲಿನಲ್ಲಿ ಹೇಳ ಹೆಸರಿಲ್ಲದಂತೆ ಮರೆಯಾಗಿ ಹೋದ!

ಮುಂಜಾವಿನ ಹೊತ್ತು ಹೆಮ್ಮೆಯಿಂದರಳಿ ತಲೆಯೆತ್ತಿ ನಿಂತ ಮಲ್ಲಿಗೆಯ ಹೂವು, ಕಮ್ಮನೆಯ ಕಂಪನ್ನು ಬೀರಿ ಮೆರೆದಾಡಿದರೇನು ಬಂತು? ಸಂಜೆಯ ಹೊತ್ತಿಗೆ ಕಳೆಗುಂದಿ ಬಿಸಿಲ ಬೇಗೆಗೆ ಬಾಡಿ ಬಳಲಿ ನಿತ್ರಾಣವಾಗಿ ನೆಲವನ್ನು ಸೇರಿಬಿಟ್ಟಿತು!

ಅರಳಿದ ಹೂವು ಹಸನಾಗಿರುವಾಗಲೇ ಮುಡಿಯನ್ನೇರಬೇಕು. ಬಾಡಿದ ಮೇಲೆ ಬಾಳು ವ್ಯರ್ಥ.

ಸಾಧನೆಗೆಂದು ಸಿಕ್ಕಿದ ಈ ದೇಹದ ವ್ಯವಸ್ಥೆಯೂ ಹೀಗೆಯೇ ತಾನೆ? ಏನು ಮಾಡಿದರೇನು? ಎಷ್ಟು ಮೆರೆದಾಡಿದರೇನು? ಒಂದಷ್ಟುದಿನ ಎಲ್ಲೆಂದರಲ್ಲಿ ಹರಿದಾಡಿದ ಹೆಸರು ಈ ಶರೀರದ ಅವಸಾನವಾಗುತ್ತಲೇ ಮರೆಯಾಗಿ ಹೋಗುತ್ತದೆ.

ಆದರೂ ಒಳ್ಳೆಯ ಸಾಧನೆಯನ್ನು, ಜ್ಞಾನೋಪದೇಶವನ್ನು ಮತ್ತು ಪರೋಪಕಾರವನ್ನು ಮಾಡಿದವರ ನೆನಪು ಮಾತ್ರ ಸಜ್ಜನ ಪರಂಪರೆಯ ನೆನಪಿನಂಗಳದಲ್ಲಿ ಹಸನಾಗಿ ಉಳಿಯುತ್ತದೆ. ಸಾಕಷ್ಟು ಸೊರಗಿ ಒಣಗಿ ಉದುರಿ ಹೋದರೂ ಕಂಪು ಸೂಸುತ್ತಲೇ ಇರುವ ಸುರಗಿ ಹೂವಿನಂತೆ.

ಸಾಧನೆಗೆಂದೇ ದೊರಕಿದ ಈ ಶರೀರವನ್ನು ಚೆನ್ನಾಗಿ ಬಳಸಿಕೊಳ್ಳಬೇಕು. ಜೊತೆಗೆ ಅಮೂಲ್ಯವಾದ ನಮ್ಮ ಆಯುಷ್ಯದ ಕ್ಷಣಗಳನ್ನು ಕೂಡ.

ಈ ದೇಹವನ್ನೇ ನೆಚ್ಚಿಕೊಂಡು ನಿಂತಿರುವುದು ನಮ್ಮ ಸಾಧನೆಯ ಬದುಕು. ಹೀಗಾಗಿ ಅದನ್ನು ಚೆನ್ನಾಗಿ ಸಂರಕ್ಷಿಸಿಕೊಳ್ಳುವುದು ನಮ್ಮ ಕರ್ತವ್ಯ. ನಮ್ಮ ಶರೀರದ ಸ್ವಚ್ಛತೆ, ಆಹಾರ, ವಿಶ್ರಾಂತಿಗಳಿಗೆ ಅವಕಾಶವನ್ನು ನಾವೇ ಕಲ್ಪಿಸಿಕೊಳ್ಳಬೇಕು. ನಿರ್ಲಕ್ಷಿಸಬಾರದು.

ದೇಹದ ಮೇಲೆ ಅಭಿಮಾನ ಬೇಕು. ಆದರೆ ಅದು ಅತಿಯಾಗಬಾರದು. ಕಪಿಲಾಂ ದರ್ಪಣಂ ಭಾನುಂ ಪ್ರಾತಃ ಪಶ್ಯೇತ್ ...... ಮುಂಜಾನೆಯೆದ್ದೊಮ್ಮೆ ಕನ್ನಡಿಯಲ್ಲಿ ಮುಖ ನೋಡುವುದು ಶುಭಲಕ್ಷಣವಂತೆ. ಕನ್ನಡಿಯೆದುರೇ ಕಾಲ ಕಳೆಯುವುದು ಅತಿರೇಕದ ಅವಲಕ್ಷಣ.

ಸಾಧಿಸುವುದಿದ್ದರೆ ಶಾಶ್ವತವಾಗಿ ಉಳಿಯುವುದನ್ನು ಸಾಧಿಸಬೇಕು. ಅದು ಸಾರ್ಥಕ. ಸಿಕ್ಸ್ ಪ್ಯಾಕ್ , ಮೇಕಪ್ ಅಂದುಕೊಂಡು ಕ್ಷಣಿಕ ಮತ್ತು ಕ್ಷುಲ್ಲಕ ಸಂತೋಷಕ್ಕಾಗಿ ನಡೆಸುವ ದೇಹದಂಡನೆ ಕೇವಲ ಹುಚ್ಚುತನ. ಕಡಲ ತೀರದ ಮರಳಲ್ಲಿ ಕಟ್ಟಿದ ಮನೆಯಂತೆ. ಬಹುಕಾಲ ಉಳಿಯುವುದಿಲ್ಲ. ಅಲೆಬಂದಾಗ ಅಳಿದುಹೋಗುತ್ತದೆ.

ದೇಹದ ಸ್ವಾಸ್ಥ್ಯದ ಹೆಸರಿನಲ್ಲಿ ನಡೆಸುವ ಆಸನ ವ್ಯಾಯಾಮಗಳೂ ಮಿತಿಯಲ್ಲಿರಬೇಕು. ಹೆಚ್ಚಾದರೆ ಅದೂ ಅನಾಹುತಕ್ಕೆ ಕಾರಣವಾಗುತ್ತದೆ.

ಕೇವಲ ಯೋಗ, ಆಸನ, ಪ್ರಾಣಾಯಾಮಗಳಲ್ಲಿನ ಪ್ರಾವೀಣ್ಯವೇ ಬದುಕಿನ ಉದ್ದೇಶವಲ್ಲ. ಆರೋಗ್ಯವಾಗಿ ಬದುಕಲು ಯೋಗ ಬೇಕು. ಪ್ರಾಣಾಯಾಮವೂ ಬೇಕು. ಆದರೂ, ಚೆನ್ನಾಗಿ ಬದುಕಿ ಸಾಧಿಸುವುದೇನನ್ನು ಎನ್ನುವುದೇ ಮುಖ್ಯವಲ್ಲವೇ?

ಆರೋಗ್ಯವಂತ ದೇಹವೆನ್ನುವುದು ಒಳ್ಳೆಯ ಕಾರು ಇದ್ದ ಹಾಗೆ. ಚೆನ್ನಾಗಿ ತೊಳೆದು ಧೂಳು ವರಸಿ ಅಂದವಾಗಿ ಇಟ್ಟುಕೊಂಡರಷ್ಟೇ ಸಾಕೇ? ಕಾರಿನ ಮುಖ್ಯ ಉದ್ದೇಶ ಪ್ರಯಾಣವೇ ತಾನೆ? ಸಾಕಷ್ಟು ದೂರ ಪ್ರಾಯಾಣಿಸಲು ಅನುಕೂಲವಾಗುವಂತೆ ಕಾರನ್ನು ಚೆನ್ನಾಗಿ ಇಟ್ಟುಕೊಳ್ಳಬೇಕು ಮತ್ತು ಮುಖ್ಯವಾಗಿ ಕಾರನ್ನು ಪ್ರಯಾಣಕ್ಕೋಸ್ಕರ ಸಮರ್ಪಕವಾಗಿ ಬಳಸಿಕೊಳ್ಳಬೇಕು.

ದೇವರಿತ್ತ ಈ ದೇಹವನ್ನು ಚೆನ್ನಾಗಿ ದುಡಿಸಿಕೊಳ್ಳಬೇಕು. ಸಾಧ್ಯವಾದಷ್ಟು ಶ್ರಮಪಟ್ಟು ಜ್ಞಾನಸಂಪಾದನೆ ಮಾಡಿಕೊಳ್ಳಬೇಕು. ಉಪವಾಸ, ತಪಸ್ಸು, ಧ್ಯಾನ, ಪರೋಪಕಾರಗಳು ಕಷ್ಟಸಾಧ್ಯವೆಂದು, ಕೇವಲ ವ್ಯರ್ಥಾಲಾಪಗಳಿಂದ, ತಾತ್ಕಾಲಿಕ ಆನಂದಗಳಿಂದ ಸಮಯ ಕಳೆದರೆ ಅಮೂಲ್ಯ ಬದುಕನ್ನು ಅನಗತ್ಯವಾಗಿ ವ್ಯರ್ಥ ಮಾಡಿಕೊಂಡಂತೆ. ಮಳೆಗಾಲದಲ್ಲಿ ಕೊಡೆ ಹಾಳಾಗುತ್ತದೆಂದು ಕಂಕುಳಲ್ಲಿಟ್ಟುಕೊಂಡು ನಡೆಯುವ ಮೂರ್ಖನಂತೆ.

ಈ ಶರೀರವನ್ನು ಹೆಚ್ಚಾಗಿ ನೆಚ್ಚಿಕೊಳ್ಳಲು ಹೋಗಬಾರದು. ಪ್ರಯಾಣಕ್ಕೆ

ಬಳಸುವ ಬಸ್ಸಿನಂತಿರಬೇಕು. ಬಸ್ಸು ಎಷ್ಟು ಸುಂದರ, ಸುಖಕರವಾಗಿದ್ದರೂ ಅದರ ಜೊತೆಗಿನ ಬಾಂಧವ್ಯ ನಿಲ್ದಾಣ ತಲುಪುವ ತನಕ ಮಾತ್ರ. ಸ್ವಾದಿಷ್ಟ ತಿನಿಸುಗಳನ್ನು ನಿರ್ಲಿಪ್ತನಾಗಿ ಮಾರುವ ವ್ಯಾಪಾರಿಯಂತೆ. ಮುಂಜಾವಿನಿಂದ ಸಂಜೆಯ ತನಕ ಎಷ್ಟು ಸಾಧ್ಯವೋ ಅಷ್ಟು ವ್ಯಾಪಾರ ಮಾಡಬೇಕು. ಮುಂದೆ ಕತ್ತಲಾದಾಗ ಅಂಗಡಿಗೆ ಬಾಗಿಲು ಹಾಕಿ ಮನೆಗೆ ನಡೆಯಬೇಕು. ಅದಷ್ಟೇ ಅವನ ಧ್ಯೇಯ. ರುಚಿಗೆ ಮರುಳಾಗಿ ಮೈಮರೆತನೆಂದರೆ ಸಂಪಾದನೆ ಸಾಧ್ಯವಿಲ್ಲ.

ಬೆಳೆಯುವ ಹಂತದಲ್ಲೇ ನಮ್ಮ ಶಾರೀರಿಕ ಸಾಧನೆಗಳು ಪ್ರಾರಂಭವಾಗಬೇಕು. ಅದಕ್ಕೆ ಬಾಲ್ಯದಲ್ಲಿಯೇ ಪೋಷಕರು ಮಕ್ಕಳನ್ನು ಮಾನಸಿಕವಾಗಿ ಎಚ್ಚರಗೊಳಿಸಬೇಕು. ಇದು ನಶ್ವರವೆಂಬ ಸತ್ಯವನ್ನು ಅವರಿಗೂ ಮನದಟ್ಟಾಗಿಸಬೇಕು. ಸಮಯದ ಮೌಲ್ಯವನ್ನು , ಬಳಸಿಕೊಳ್ಳುವ ಬಗೆಯನ್ನು ಬದುಕಿನ ಆರಂಭದಲ್ಲೇ ಕಲಿಸಿಕೊಡಬೇಕು.



ಕೇವಲ ಹೊರನೋಟದಿಂದ ಗುಣವನ್ನು ಗುರುತಿಸಲು ಬರುವುದಿಲ್ಲ. ಶರೀರದ ಗಾತ್ರ, ಆಕಾರ, ಬಣ್ಣ ಎಲ್ಲವೂ ದೈವದತ್ತ. ಜಗತ್ತಿನಲ್ಲಿ ಯಾರಿಗೂ ನನ್ನ ಶರೀರ ಹೀಗೇ ಇರಬೇಕು ಎನ್ನುವ ಆಯ್ಕೆಗೆ ಅವಕಾಶವಿಲ್ಲ. ದೇವರು ಕೊಟ್ಟದ್ದು.

ಎಲ್ಲ ಶರೀರದಲ್ಲೂ ಪ್ರತ್ಯೇಕ ಹೃದಯವಿದೆ. ಪ್ರತಿ ಹೃದಯದಲ್ಲೂ ಭಗವಂತನಿದ್ದಾನೆ. 'ಈಶ್ವರಃ ಸರ್ವಭೂತಾನಾಂ ಹೃದ್ದೇಶೇ'. ಆದ್ದರಿಂದ ಎಲ್ಲರ ದೇಹವೂ ದೇವರಿರುವ ಪ್ರತ್ಯೇಕ ಗರ್ಭಗುಡಿ. ನಾವು ನಮ್ಮನ್ನು ಪ್ರೀತಿಸುವಂತೆ ಎಲ್ಲರನ್ನೂ ಪ್ರೀತಿಸಬೇಕು. ಗೌರವಿಸಬೇಕು.

ರೂಪ ಮತ್ತು ಯೌವನ. ಇವೆರಡೂ ನಮ್ಮನ್ನು ಮೈಮರೆಸುವ ಮರೀಚಿಕೆಗಳು. ಮರುಳಾಗದಿರೋಣ.



## ನಿರಂತರ ಅಂತರ

ಈ ಮನಗಳ ನಡುವೆ ಇರುವುದೊಂದು ಅಂತರದ ಸೇತುವೆ
ಇವರು ಆ ದಾರಿ ಕ್ರಮಿಸಲು ಶಕ್ತರಲ್ಲ
ದೂರದಲ್ಲಿ ಅಸ್ಪಷ್ಟ ಆಕೃತಿಗಳು ಇದ್ದಾವು
ಅಶಕ್ತ ಮನಗಳಿವು ಅಪರೂಪದ ಊರಿನವ!

ಪ್ರೀತಿ ಸಂಪ್ರೀತಿಗಳು ಬಹಿರ್ಗತವಾಗಲಿ
ಸಾಧನೆಯ ಹಾದಿ ಈ ವಾಸಿಗಳಿಗೆ ಅತಿದೂರ
ಅಂತರ್ ಬಾಹ್ಯಚಕ್ಷುಗಳು ಕುರುಡಾಗಿವೆ
ನೋಟ - ಒಳನೋಟ ಎಲ್ಲ ಶೂನ್ಯ ಸಂಪಾದನೆ!

ಕಾರ್ಯಪ್ರವೃತ್ತಿ ಇವರ ದಿಶೆಯಲ್ಲಿಲ್ಲ
ಶ್ರಮಿಕ ಜೀವಿಗಳ ಶ್ರಮದ ಬೆವರಹನಿ
ಜೀವನ ಜಿಗುಪ್ಸೆ ಬಾಳಿನ ಪಾಠವಾಗಿರಬಹುದು
ಮನಗಳು ಸ್ವಚ್ಛ ಕಾರ್ಯದಲಿ ತೊಡಗುವುದು ವ್ಯರ್ಥ!

ಸಂಚಲನಗೊಂಡ ಅನುಭವಗಳು
ಪರಾಭವಗೊಂಡು ಸೊರಗಿ ಕಂಗಾಲಾದ
ಜೀವನ್ಮುಖಿಗಳ ಫಲಿತ ಯೋಚನಾ
ಗೋಡೆಗಳು ಕುಸಿದು ಜೀವ ಕಸಿದ ಆ ಅಂತರ.....!

-ಡಾ. ಹರಿಕುಮಾರ್ -ಬೆಂಗಳೂರು





# ಪತಞ್ಜಲಿ ಯೋಗ ಸೂತ್ರ: ಸಮಾಧಿ ಪಾದ ಸೂತ್ರ 7-9

ಅನನ್ತ ಅಮ್ಬುಗ

**ಅಪ್ಪೊ ದೀಪೋ ಭವ - ನಿನಗೆ ನೀನೇ ಬೆಳಕಾಗು -ಭಗವನ್ ಬುದ್ಧ**

**ಯೋಗೇನ ಚಿತ್ತಸ್ಯ ಪದೇನ ವಚಾಮ್ ಮಲಮ್ ಶರೀರಸ್ಯ ಚ ವೈದ್ಯಕೇನ ಯೋಪಾಕರೋತ್ತಮ್ ಪ್ರವರಮ್ ಮುನೀನಾಮ್ ಪತಞ್ಜಲಿಂ ಪ್ರಾಞ್ಜಲಿರಾನತೋಸ್ಮಿ**

**ಅದ್ವೇಷ್ಟಾ ಸರ್ವಭೂತಾನಾಂ ಮೈತ್ರ: ಕರುಣ ಏವ ಚ ನಿರ್ಮಮೋ ನಿರಹಂಕಾರ: ಸಮದು:ಖಸುಖ: ಕ್ಷಮೀ -**

**ಯಾ**ರಲ್ಲಿಯೂ ದ್ವೇಷವಿರದೆ, ಎಲ್ಲರಲ್ಲಿಯೂ ಮೈತ್ರಿ ಮತ್ತು ಕರುಣಭಾವವಿಟ್ಟುಕೊಂಡು, ನನ್ನದೆಮ್ಬ ಮಮಕಾರವಿರದೆ, ಅಹಙ್ಕಾರವನ್ನು ತೊರೆದು, ಸುಖದು:ಖದಲ್ಲಿ ಸಮಭಾವವಿಟ್ಟು ಎಲ್ಲರನ್ನೂ ಕ್ಷಮಿಸುವ ಗುಣಹೊನ್ದತಕ್ಕದ್ದು. ಭಗವಾನ್ ಕೃಷ್ಣ - ಭಗವದ್ಗೀತೆ ಭಕ್ತಿಯೋಗ ಯೋಗ ಶ್ಲೋಕ 13

ಣ ಹಿ ವೇರೇನ ವೇರಾನಿ ಸಮ್ಮಂತೀಧ ಕುದಾಚನಂ ಅವೇರೇನ ಚ ಸಮ್ಮಂತಿ ಏಸ ಧಮ್ಮೋ ಸನಾತನೋ - ದ್ವೇಷವನ್ನು ದ್ವೇಷದಿನ್ದ ಗೆಲ್ಲಲಾಗುವುದಿಲ್ಲ, ದ್ವೇಷವನ್ನು ಪ್ರೀತಿ ಮತ್ತು ಕರುಣೆಯಿನ್ದ ಮಾತ್ರ ಗೆಲ್ಲಲು ಸಾಧ್ಯ. ಇದೇ ಸನಾತನ ಧರ್ಮ. ಭಗವಾನ್ ಬುದ್ಧ - ಧಮ್ಮಪದ ಯಮಕವಗ್ಗ ಸೂತ್ರ 5

### ಮುನ್ನುಡಿ

ಹಿನ್ದಿನ ಸಞ್ಚಿಕೆಯಲ್ಲಿ, ಮನಸ್ಸಿನ ವೃತ್ತಿಗಳನ್ನು ನಿರ್ವೃತಿಗೊಳಿಸದಿದ್ದಾಗ ಪುರುಷನ/ಆತ್ಮದ ಸ್ಥಿತಿಯು ಹೇಗಿರುತ್ತದೆ, ಎನ್ದು ನೋಡುತ್ತಾ, ಪ್ರಮಾಣ, ವಿಪರ್ಯಯ, ವಿಕಲ್ಪ, ನಿದ್ರೆ ಮತ್ತು ಸ್ಮೃತಿಗಳೆಮ್ಬ ಐದು ತರಹದ ವೃತ್ತಿಗಳೆನ್ನು ನೋಡಿದೆವು. ಆ ಚರ್ಚೆಯಲ್ಲಿ, ಸಾಙ್ಖ್ಯ-ಯೋಗದ ರಸಜ್ಞತ್ವದಲ್ಲಿ(alchemy), ಯೋಗವಾಗಬೇಕಾದರೆ, ಮನಸ್ಸಿನ ಎಲ್ಲ ವೃತ್ತಿಗಳನ್ನು (activities of the mind) , ಒಳ್ಳೆಯ ವೃತ್ತಿ, ಕೆಟ್ಟ ವೃತ್ತಿಗಳೆಮ್ಬ ( ಕ್ಲಿಷ್ಟ ಅಥವಾ ಅಕ್ಲಿಷ್ಟ) ಪರಿಚ್ಛೇದವಿಲ್ಲದೆ(discrimination) ,ಯಾವುದೇ ರೀತಿಯ ಪರ್ಯುದಾಸವಿಲ್ಲದೇ (exception), ಎಲ್ಲ ವೃತ್ತಿಗಳನ್ನು ನಿರೋಧಿಸಬೇಕೆನ್ನೂ ನೋಡಿದ್ದೆವು - ಇದು ಏಕೆನ್ದರೆ, ಸಾಙ್ಖ್ಯ-ಯೋಗದ ದೃಷ್ಟಿಯಲ್ಲಿ, ಮನಸ್ಸಿನಲ್ಲಿ ವೃತ್ತಿಗಳು ಇರುವತನಕ, ಮನಸ್ಸಿನ ಚೇಷ್ಟೆಗಳು ಇರುವತನಕ, ಪುರುಷನು/ಆತ್ಮವು ತನ್ನ ಸ್ವಸ್ವರೂಪದಲ್ಲಿ ಇರಲು ಸಾಧ್ಯವಿಲ್ಲ. ಮನಸ್ಸಿನ ವೃತ್ತಿಗಳೆಲ್ಲವೂ ಪ್ರಕೃತಿಯಾದುದರಿನ್ದ, ಪುರುಷ-ಪ್ರಕೃತಿಯ ವಿಯೋಗವೇ ಯೋಗ. ಹಾಗಾದರೆ!, ಯೋಗವಾಗಬೇಕಾದರೆ, ಮನಸ್ಸಿನಲ್ಲಿ ನಡೆಯುವ ಒಳ್ಳೆಯ ವೃತ್ತಿಗಳೆನ್ದು ಕರೆಯಲ್ಪಡುವ, ದೇವರ ಬಗ್ಗೆ ಚಿನ್ತನೆ/ಪ್ರಾರ್ಥನೆ, ಮತ್ತೊಬ್ಬರ ಬಗ್ಗೆ ಒಳಿತನ್ನು ಯೋಚಿಸುವುದು, ಆಧ್ಯಾತ್ಮಿಕ ವಿಷಯಗಳ ಬಗ್ಗೆ ಚಿನ್ತನೆ, ಪರಾಮರ್ಶೆ ಮಾಡುವುದು ಇತ್ಯಾದಿಗಳೂ ನಿಲ್ಲಿಸಬೇಕೆ?! ಇದೊನ್ದು ವಿದಗ್ಧವಾದ(intriguing) ಪ್ರಶ್ನೆ. ಈ ಪ್ರಶ್ನೆಯ ಉತ್ತರವನ್ನು ಸಾಙ್ಖ್ಯ-ಯೋಗದ ಉಪಾಧಿಯಲ್ಲಿ(point of view) ನೋಡುವಾಗ, ಬೇರೆ ದರ್ಶನಗಳನ್ನು, ನನಗೆ ಭಕ್ತಿ ಅನ್ದರೆ ಇಷ್ಟ, ಜ್ಞಾನವೆನ್ದರೆ ಇಷ್ಟ, ನಮ್ಮ ಆಚಾರ್ಯರು, ಭಕ್ತಿಯೇ ಶ್ರೇಷ್ಠವೆನ್ದು ಘೋಷಿಸಿದ್ದಾರೆ, ಜ್ಞಾನವೇ ಶ್ರೇಷ್ಠವೆನ್ದು ಘೋಷಿಸಿದ್ದಾರೆ ಅನ್ನುವನ್ತಹಾ ಅಭಿಪ್ಲವತೆಯಲ್ಲಿ(approach) , ನೋಡಿದರೆ, ನಮ್ಮ ಬಞ್ಚರತೆಯನ್ನು (dishonesty) ತೋರಿಸುವುದಲ್ಲದೇ, ಆಚಾರ್ಯರಿಗೂ ಅವಮಾನ ಮಾಡಿ, ಬೇರೆ ದರ್ಶನಗಳಿಗೂ ಅವಮಾನ ಮಾಡಿದನ್ತಾಗುತ್ತದೆ. ಸಾಙ್ಖ್ಯ-ಯೋಗದ ಈ ನಿಲುವನ್ನು, ಈ ದರ್ಶನದ ಅನ್ತರ್ನೇಮಿಯಲ್ಲಿ (circumference) ಅಜಿಹ್ಮವಾಗಿ(honest) ಮುನ್ದೆ ಬರುವ ಎಲ್ಲಾ ಸಞ್ಚಿಕೆಗಳಲ್ಲೂ ನೋಡೋಣ - ಇದಕ್ಕೆ ಪೂರಕವಾಗಿ, ಈ ಸಞ್ಚಿಕೆಯಲ್ಲಿ ಪ್ರತ್ಯಕ್ಷ, ವಿಪರ್ಯಯ ಮತ್ತು ವಿಕಲ್ಪಗಳೆಮ್ಬ ಮೂರು ವೃತ್ತಿಗಳನ್ನು ನೋಡಿ, ಈ ವೃತ್ತಿಗಳು ಮನಸ್ಸಿನಲ್ಲಿ ಆಗುವ, ಬರುವ ಪ್ರಚರ್ಯವನ್ನು ನೋಡೋಣ.

### ಅಥ ಸಮಾಧಿ ಪಾದ:

ಸೂತ್ರ 7: ಪ್ರತ್ಯಕ್ಷಾನುಮಾನಾಗಮಾ: ಪ್ರಮಾಣಾನಿ । ಸೂತ್ರ 8: ವಿಪರ್ಯಯೋಮಿಥ್ಯಾಜ್ಞಾನಮತದ್ರೂಪಪ್ರತಿಷ್ಠಮ್ । ಸೂತ್ರ 9: ಶಬ್ದಜ್ಞಾನಾನುಪಾತೀ ವಸ್ತು ಶೂನ್ಯೋ ವಿಕಲ್ಪ:

### ಅರ್ಥಗತಿ:

**ಸೂತ್ರ 7:** ಪ್ರತ್ಯಕ್ಷ = ಪ್ರತಿ+ಅಕ್ಷ, ಕರ್ಮೇನ್ದ್ರಿಯಗಳಿಗೆ ( ದೃಷ್ಟಿ, ಶ್ರವಣ, ಸ್ಪರ್ಶ, ರಸ ಮತ್ತು ಗನ್ಧ) ಸಮ್ಬನ್ಧ ಪಟ್ಟದ್ದು, ಅವುಗಳಿನ್ದ ನೇರವಾದ ನಿಭಾಲನ(direct perception) ಅನುಮಾನ = ಅನು + ಮಾನ (methodical measurement, i.e. inference) ಆಗಮ = ಆ + ಗಮ (ದಾರಿಯ ಕಡೆ ಹೋಗುವುದು. ದಾರಿ ಎನ್ದರೆ ಬೇರೆಯವರು ಹಾಕಿಕೊಟ್ಟಿರುವ ದಾರಿ - ಶಾಸ್ತ್ರ, ಆಪ್ತವಾಕ್ಯ ಇತ್ಯಾದಿ - established knowledge) ಪ್ರಮಾಣಾನಿ = ಪ್ರಮಾಣಗಳು

**ಸೂತ್ರ 8:** ವಿಪರ್ಯಯ = ಪರ್ಯಯ = ಭ್ರಮೆ (confusion) ವಿ = ವಿಶಿಷ್ಟವಾದ. ವಿಪರ್ಯಯ = ಮತಿ ಭ್ರಮಣವು/ತಪ್ಪು ಗ್ರಹಿಕೆಯು/ಪ್ರಮಾದಿಕವು, ಮಿಥ್ಯಾ-ಜ್ಞಾನಮ್ = ತುಲ್ಯಕುಲ್ಯವಾದ (relative knowledge) ಅತದ್ರೂಪ = "ಆ" ರೂಪವಲ್ಲದ, ನಿಜ ಸ್ವರೂಪಕ್ಕೆ ಯೋಜನೆ (alignment) ಇಲ್ಲದ ಜ್ಞಾನದಿನ್ದ, ಪ್ರತಿಷ್ಠಮ್ = ಪ್ರತಿಷ್ಠಿತಗೊಳ್ಳುತ್ತದೆ, ಶಾಲೀನಗೊಳ್ಳುತ್ತದೆ (gets ingrained)

**ಸೂತ್ರ 9:** ಶಬ್ದಜ್ಞಾನಾನುಪಾತೀ = ಅನುಸಾರವಾಗಿ ಶಬ್ದಜ್ಞಾನದ ಮೇಲೆ ಅನುಕವಾಗಿದ್ದರೆ (when only verbal knowledge is depended on ) ವಸ್ತುಶೂನ್ಯ = ನಿಜವಾದ ಸ್ವರೂಪದ (ಸ್ವರೂಪ ಜ್ಞಾನದ) ಅತ್ಯಯದಿನ್ದ (in the absence of the knowledge of the real nature) , ವಿಕಲ್ಪ: = ಭಾವಿತವಾದ ಗೃಹಿಕೆ (imagined understanding) ಉಣ್ಟಾಗುತ್ತದೆ

## ವಿವತ್ತಿ

**ಸೂತ್ರ 7: ಪ್ರತ್ಯಕ್ಷಾನುಮಾನಾಗಮಾ: ಪ್ರಮಾಣಾನಿ**

ಸನಾತನ ಧರ್ಮಕ್ಕೆ ಸೇರಿದ ಎಲ್ಲ ದರ್ಶನಗಳನ್ನು (ಪೂರ್ವಮೀಮಾಮ್ಸೆ, ವೇದಾನ್ತ(ಅದ್ವೈತ) , ಬೌದ್ಧ, ಜೈನ, ವಿಶಿಷ್ಟಾದ್ವೈತ, ದ್ವೈತ, ಸಾಙ್ಖ್ಯ, ಯೋಗ, ನ್ಯಾಯ, ವೈಶೇಷಿಕ, ಚಾರ್ವಾಕ, ಇತ್ಯಾದಿ) ಹಲವಾರು ರೀತಿಯಲ್ಲಿ ವಿಙ್ಗಡಿಸಲಾಗಿದೆ -ಕೆಲವು (ಮಾತ್ರ) ವಿಙ್ಗಡಣೆಗಳು ತಾತ್ವಿಕ ತಳಹದಿಯ ಮೇಲೆ ಸರಿಯಾಗಿದ್ದರೆ, ಮಿಕ್ಕೆಲ್ಲ ವಿಙ್ಗಡಣೆಗಳು, ಇತಿಹಾಸ ಪ್ರೇರಿತ ತಪ್ಪು ಗ್ರಹಿಕೆಗಳು ಮತ್ತು ಯಹೂದ್ಯ ಮತಗಳ ಪ್ರಚಾರ ಮತ್ತು ಪ್ರಭಾವಗಳಿನ್ದ ವಿಙ್ಗಡಿಸಲಾಗಿದೆ. ಇನ್ತಹ ಸರಿಯಾದ ವಿಙ್ಗಡಣೆಗಳಲ್ಲಿ, ಪ್ರಮಾಣಗಳ (epistemology or means for knowledge, proof) ಮೇಲೆ ವಿಙ್ಗಡಣೆಯೂ ಒನ್ದು. ಭಾರತೀಯ ದರ್ಶನಗಳಲ್ಲಿ ಒಟ್ಟಾರೆ ಆರು ಪ್ರಮಾಣಗಳಿದ್ದು (ಪ್ರತ್ಯಕ್ಷ, ಅನುಮಾನ, ಉಪಮಾನ, ಅರ್ಥಾಪತ್ತಿ, ಅನುಪಲಬ್ಧಿ ಮತ್ತು ಆಗಮ/ಶಬ್ದ), ಪೂರ್ವಮೀಮಾಮ್ಸೆ ಮತ್ತು ವೇದಾನ್ತಗಳೆರಡೇ ( ಅದ್ವೈತ) ಈ ಆರೂ ಪ್ರಮಾಣಗಳನ್ನು ಒಪ್ಪಿಕೊಳ್ಳುತ್ತವೆ; ಮಿಕ್ಕೆಲ್ಲ ದರ್ಶನಗಳು ಆರರಲ್ಲಿ ಕೆಲವೊನ್ದನ್ನು ಮಾತ್ರ ಸ್ವೀಕರಿಸುತ್ತವೆ - ಈ ದಿಶೆಯಲ್ಲಿ, ಯೋಗ ದರ್ಶನವು ಈ ಸೂತ್ರದಲ್ಲಿ ಹೇಳಿರುವ ಹಾಗೆ, ಪ್ರತ್ಯಕ್ಷ, ಅನುಮಾನ ಮತ್ತು ಆಗಮಗಳೆಮ್ಬ ಮೂರು ಪ್ರಮಾಣಗಳನ್ನು ಮಾತ್ರ ಒಪ್ಪುತ್ತದೆ. ಪ್ರಮಾಣ, ಅನ್ದರೆ, ಜ್ಞಾನವನ್ನು ಸಮ್ಪಾದಿಸುವ ನೈಗಮವು ಕೂಡಾ ಮನಸ್ಸಿನ ಒನ್ದು ವೃತ್ತಿ. ಯೋಗವಾಗಬೇಕಾದರೆ, ಜ್ಞಾನ ಸಮ್ಪಾದನೆಯ ಕ್ರಿಯೆಯೂ ನಿಲ್ಲಬೇಕು - ಈ ಮೂರು ಪ್ರಮಾಣಗಳನ್ನು ನೋಡೋಣ -

ಪ್ರತ್ಯಕ್ಷ - ಪ್ರತಿ ಅಕ್ಷ ಅನ್ದರೆ, ಅಕ್ಷ - ಕರ್ಮೇನ್ದ್ರಿಯಗಳು, ಪ್ರತಿ - ಸಮ್ಬನ್ಧಪಟ್ಟದ್ದು; ಪ್ರತ್ಯಕ್ಷವೆನ್ದರೆ, ಕರ್ಮೇನ್ದ್ರಿಯಗಳ ಮೂಲಕ, ಮನಸ್ಸು ತಾನು ಸ್ವೀಕರಿಸಿದ ( ನೋಡಿದಾಗ, ಕೇಳಿಸಿಕೋಣ್ಡಾಗ, ಶಿಙ್ಘಗೊಣ್ಡಾಗ - (smelled) ಮುಟ್ಟಿದಾಗ ಇತ್ಯಾದಿ) ಜ್ಞಾನವು ( ಅನುಭವವು), ಸ್ವೀಕರಿಸಿದ ವಸ್ತುವಿನ ನಿಜವಾದ ಲಕ್ಷಣಗಳಿಗೆ ಹೊನ್ದಿಕೊಣ್ಡಿದೆಯೇ ಇಲ್ಲವೇ ಎಮ್ಬುದನ್ನು ಬುದ್ಧಿಯ ತರ್ಕ ಮತ್ತು ವಿಶ್ಲೇಷಣದ ಸಹಾಯದಿನ್ದ ಮಾಡುತ್ತದೆ, ಆಗುತ್ತದೆ. ಇದನ್ನು ಒನ್ದು ಉದಾಹರಣೆಯಿನ್ದ ನೋಡೋಣ. ಮನಸ್ಸು ಕಣ್ಣಿನ ಮೂಲಕ ಒನ್ದು ಎಮ್ಮೆಯನ್ನು ನೋಡಿತೆನ್ದುಕೊಳ್ಳೋಣ. ಎಮ್ಮೆಯನ್ನು ನೋಡಿದಾಗ, ಮೊದಲಿಗೆ ಎಮ್ಮೆಗೂ , ಉದಾಹರಣೆಗೆ ಆನೆಗೂ( ಹಿನ್ದೆ ಆನೆಯನ್ನು ನೋಡಿದ್ದರೆ) ಅಥವಾ ಮತ್ಯಾವುದೇ ಪ್ರಾಣಿ/ವಸ್ತುವಿಗೂ ಇರುವ ಸಮಾನ ಗುಣಗಳನ್ನು ಬುದ್ಧಿಯ ಸಹಾಯದಿನ್ದ ಪ್ರಕ್ಷೀಣಗೊಳಿಸಿ (eliminate)ನನ್ತರ ಎಮ್ಮೆಗೆ ಸೇರಿದ ವ್ಯಕ್ತವಾದ ಗುಣಗಳನ್ನು ಅವಧಾರಣೆ ಮಾಡಿಕೊಣ್ಡು ( ಬುದ್ಧಿಯ ಸಹಾಯದಿನ್ದ) ನೋಡಿದ್ದು ಎಮ್ಮೆಯೇ ಎನ್ದು ಪ್ರಮಾಣಿಸಿಕೊಳ್ಳುತ್ತದೆ - ಇದೇ ಪ್ರ್ಯತ್ಯಕ್ಷ ಪ್ರಮಾಣ. ಪ್ರತ್ಯಕ್ಷ ಪ್ರಮಾಣವನ್ನು ಜ್ಞಾನಾರ್ಜನೆಗೆ ಬೇಕಾದ ಸಾಧನವಾದರೂ, ಇದೂ ಒನ್ದು ಮನಸ್ಸಿನ ವೃತ್ತಿಯಾದುದರಿನ್ದ(activity of the mind) ಯೋಗ ಸಾಧನೆಯಾಗಬೇಕಾದರೆ, ಯೋಗದ ಸ್ಥಿತಿಯನ್ನು ತಲುಪಬೇಕಾದರೆ, ಮೇಲ್ನೋಟಕ್ಕೆ ಎಷ್ಟೇ ಅವಿಸವಾಗಿ ಪ್ರಸ್ತುತವಾಗಿದ್ದರೂ(seemingly relevant) ಮನಸ್ಸಿನ ಈ ಆಯಾಸ (effort) ನಿಲ್ಲಬೇಕು!

ಅನುಮಾನ - ಪ್ರತ್ಯಕ್ಷದಲ್ಲಿ ಮನಸ್ಸು ಕರ್ಮೇನ್ದ್ರಿಯಗಳ ಮೂಲಕ ವಸ್ತು-ವಿಷಯಗಳ ಬಗ್ಗೆ ವ್ಯಪದೇಶಗಳನ್ನು (information) ಸ್ವೀಕರಿಸಿ, ಆ ವಸ್ತು ಯಾವುದು ಎಮ್ಬ ಜ್ಞಾನವನ್ನು ಪಡೆದರೆ, ಅನುಮಾನವೆಮ್ಬ ಪ್ರಮಾಣದಲ್ಲಿ ನಡೆಯುವ ಪ್ರಕ್ರಿಯೆ ಭಿನ್ನವಾದುದು. ಇಲ್ಲಿ ಗಮನಿಸಬೇಕಾದ ಸಙ್ಗತಿಯೆನ್ದರೆ, ಸಮ್ಪ್ರಾದಿಕವಾಗಿ ಅನುಮಾನ ಪದವನ್ನು,(doubt) ಎಮ್ಬ ಅರ್ಥದಲ್ಲಿ, (I doubt him, he doubts me) ಬಳಸುತ್ತೇವೆ. ಅನುಮಾನವೆನ್ದರೆ(doubt) ಅಲ್ಲ. ಆಙ್ಗ ಭಾಷೆಯಲ್ಲಿ ಅನುಮಾನಕ್ಕೆ ಬಳಸುವ ಪದ inference. ಅನುಮಾನದ ಪ್ರಕ್ರಿಯೆಯನ್ನು ಪ್ರಚಲಿತವಾದ ಒನ್ದು ಉದಾಹರಣೆಯೊಡನೆ ನೋಡೋಣ - ದೂರದ ಬೆಟ್ಟದ ಮೇಲೆ ಹೊಗೆಯಾಡುತ್ತಿದೆ; ಹೊಗೆ ಇದ್ದಾಗ ಬೆಙ್ಕಿ ಇರಲೇಬೇಕು, ಆದುದರಿನ್ದ ಆ ಬೆಟ್ಟದಲ್ಲಿ, ಬೆಙ್ಕಿ ಇದೆ - ಇದು ಅನುಮಾನ. ಅನುಮಾನದ ಪ್ರಕ್ರಿಯೆ. ನ್ಯಾಯ ದರ್ಶನವು ಅನುಮಾನದ ಪ್ರಕ್ರಿಯೆಯನ್ನು ಸುವಿಸ್ತಾರವಾಗಿ ನಿರ್ಬ್ರವೀತಿಸುತ್ತದೆ(explain) . ಪ್ರತಿಯೊನ್ದು ಅನುಮಾನದ ಕ್ರಿಯೆಯು, ಐದು ಋಜುಲೇಖವಾದ ಸೋಪಾನಗಳನ್ನೊಳಗೊಣ್ಡಿದೆ,(linear steps) 1. ಪ್ರತಿಜ್ಞಾ - ಇಲ್ಲಿ, ದ್ರಷ್ಟುವು, ಯವುದೋ ಒನ್ದು ವಿಷಯವನ್ನು, ಇದು ಹೀಗೇ ಎನ್ದು ಘೋಷಿಸುತ್ತಾನೆ - ಬೆಟ್ಟದಲ್ಲಿ ಬೆಙ್ಕಿ ಇದೆ. 2. ಹೇತು - ಇಲ್ಲಿ ಮೇಲೆ ಮಾಡಿದ ಉದ್ಗಾರಕ್ಕೆ ಕಾರಣವನ್ನು ಕೊಡುತ್ತಾನೆ - ಬೆಟ್ಟದಲ್ಲಿ ಹೊಗೆ ಕಾಣುತ್ತಿದೆ, ಆದ್ದರಿನ್ದ ಬೆಙ್ಕಿ ಇದೆ. 3.ಉದಾಹರಣೆ - ಕಾಗದಕ್ಕೆ ಬೆಙ್ಕಿ ಹಚ್ಚಿದಾಗ, ಬೆಙ್ಕಿಯ ಜೊತೆಗೆ ಹೊಗೆಯೂ ಬರುತ್ತದೆ, ಬಚ್ಚಲ ಮನೆಯಲ್ಲಿ ಸೌದೆ ಹಚ್ಚಿದಾಗ ಹೊಗೆಯೂ ಬರುತ್ತದೆ. 4. ಉಪನಯ - ಹತ್ತಿರ ತರುವುದು ಅನ್ದರೆ, ಬೆಟ್ಟದಲ್ಲಿ ಹೊಗೆ ಬರುತ್ತಿದೆ ಅನ್ನುವ ವಿಷಯವನ್ನು ಪುನಹ ಉದಾಹರಣೆಯ ಭೂಮಿಕೆಯಲ್ಲಿ ನೋಡಿ. 5.ನಿಗಮನ - ಪುನಹ ವಿಷಯವನ್ನು ಪ್ರಮಾಣ ಪಡಿಸುವುದು - ಬೆಟ್ಟದಲ್ಲಿ ಹೊಗೆ ಕಾಣುತ್ತಿರುವುದರಿನ್ದ, ಅಲ್ಲಿ ಬೆಙ್ಕಿ ಇದೆ. ಇಷ್ಟೆಲ್ಲಾ ಪ್ರಕ್ರಿಯೆಗಳಿರುವ ಅನುಮಾನವು ಮನಸ್ಸಿನ ಒನ್ದು ವೃತ್ತಿ. ಯೋಗ ಸಾಧನೆಯಾಗಬೇಕಾದರೆ, ಮನಸ್ಸಿನ ಈ ಆಯಾಸ ನಿಲ್ಲಬೇಕು.

ಆಗಮ - ಆಗಮ ಎನ್ದರೆ, ದಾರಿಯ ಕಡೆ ಹೋಗುವುದು, ಬೇರೆಯವರು ಹಾಕಿಕೊಟ್ಟ ದಾರಿಯನ್ನು ಹಿಡಿದು ಹೋಗುವುದು, ಶಾಸ್ತ್ರ, ಆಪ್ತವಾಕ್ಯ ಇತ್ಯಾದಿ ಎನ್ದು ಈ ಮೊದಲೇ ಹೇಳಿದ್ದೆವು. ಇಲ್ಲಿ ಗಮನಿಸಬೇಕಾದುದೆನ್ದರೆ, ಬೇರೆಯವರು ಹಾಕಿಕೊಟ್ಟ ದಾರಿಯಲ್ಲಿ ಹೋಗುವುದೆನ್ದರೆ ಸಹೇಲಮವಾಗಿ(blindly) ಆ ದಾರಿಯಲ್ಲಿ ಹೋಗುವುದೆನ್ದಲ್ಲ. ಆಪ್ತವಾಕ್ಯದಲ್ಲಿ ಆಪ್ತವೆನ್ನುವುದಕ್ಕೆ ನಾವು ಸಾಮಾನ್ಯವಾಗಿ ಬಳಸುವ ಹತ್ತಿರದವರು (dear)ಎಮ್ಬ ಅರ್ಥವಿರದೇ, ಅದರ ನಿಜವಾದ ಅರ್ಥಕ್ಕೆ ಬಹಳ ಆರಣವಿರುತ್ತದೆ(depth). ಆಗಮವೆಮ್ಬ ಶಬ್ದವನ್ನು, ಯಾವುದು ಆಗಮ ಅಥವಾ ಆಪ್ತವಾಕ್ಯವಾಗುತ್ತದೆ ಎಮ್ಬುದನ್ನು ನ್ಯಙ್ಘವಾದ (deep)ಅರ್ಥದಲ್ಲಿ ಆಗಮ/ಆಪ್ತವಾಕ್ಯವನ್ನು ನೋಡೋಣ.

ಆಪ್ತ ಎನ್ನುವ ಶಬ್ದ, ಆಪ್ ಅನ್ನುವ ಧಾತುವಿನಿನ್ದ ಬನ್ದಿದ್ದು. ಆಪ್ ಎನ್ದರೆ, ಗಳಿಸುವುದು, ಅನ್ವೃಧತಿ(accomplish)ಎಮ್ಬ ಅರ್ಥಗಳಿರುವ ಶಬ್ದ. ಆಪ್ತನಾಗಬೇಕಾದರೆ, ಮೂರು ಗುಣಗಳನ್ನು ಆಪ್ತಿಗೊಳಿಸಿಕೊಣ್ಡಿರಬೇಕು. ಈ ಮೂರು ಗುಣಗಳೆನ್ದರೆ, (1) ತತ್ವ ದರ್ಶನ - ಅನ್ದರೆ, ಸ್ವಾನುಭವದ ಮೂಲಕ ತತ್ವ ಅನ್ದರೆ ಪರಮಾರ್ಥವನ್ನು ತಿಳಿದಿರಬೇಕು (2) ಕಾರುಣ್ಯ - ಬರೇ ದಯೆ (empathy) ಸಾಲದು, ಜೊತೆಗೆ ಕರುಣೆ (compassion) ಅನ್ದರೆ, ಮತ್ತೊಬ್ಬರ ದು:ಖವನ್ನು ಹೋಗಲಾಡಿಸುವ ಕೆಲಸವನ್ನು ಮಾಡುವ ಪ್ರಯುಕ್ತಿ ಮತ್ತು ಶಕ್ತಿ ಇರಬೇಕು (3) ಕರಣಪಾತವ - ಮನಸ್ಸು ಮತ್ತು ದೇಹ ಶಕ್ತಿಭರಿತವಾಗಿದ್ದು ಅದನ್ನು, ಮತ್ತೊಬ್ಬರ ಜ್ಞಾನವೃದ್ಧಿ ಮತ್ತು ದು:ಖ ಶಮನಕ್ಕೆ ಉಪಯೋಗಿಸುವನ್ತಿರಬೇಕು. ಈ ಮೂರೂ ಗುಣಗಳಿರುವ ವ್ಯಕ್ತಿ

ಆಪ್ತನೆನ್ನಿಸಿಕೊಳ್ಳುತ್ತಾನೆ. ಈತನ ವಾಕ್ಯ ಆಪ್ತವಾಕ್ಯ ಅಥವಾ ಆಗಮವಾಗುತ್ತದೆ. ಆಪ್ತಿಗಳನ್ನು, ಆಪ್ತರನ್ನು ಸಹೇಲಮವಾಗಿ ಪ್ರತಿವೇತಿಸಬಾರದೆನ್ನದರೆ(accept) ಆಪ್ತರು ಹೇಗೆ ಆಪ್ತಿಗಳಾದರೆನ್ನು ನೋಡಬೇಕು. ಅವರು ಮತ್ತೊಬ್ಬರನ್ನು ಸಹೇಲಮವಾಗಿ ಪ್ರತಿವೇತಿಸಿದರೇ ಅಥವಾ ಸ್ವಂತ ಪರಿಶ್ರಮದಿನ್ದ ಶ್ರವಣ-ಮನನ-ನಿಧಿಧ್ಯಾಸನದನ್ತಹಾ ಪ್ರಕ್ರಿಯೆಗಳ ಮೂಲಕ ಅನ್ವೀಕ್ಷಣದ (inquiry/enquiry)ಮೂಲಕ ಪಾರಮಾರ್ಥದ ಜ್ಞಾನ-ಅನುಭವವನ್ನು ಪಡೆದರೇ? ಎಮ್ಬುದು ಬಹಳ ಮುಖ್ಯವಾದ ಪ್ರಶ್ನೆ. ಈ ಪ್ರಶ್ನೆಗೆ ಉತ್ತರ ಭಗವಾನ್ ಬುದ್ಧನು ತನ್ನ ಕಲಮ ಸುತ್ತದಲ್ಲಿ ತತ್ವದ ಜ್ಞಾನ-ಅನುಭವ ಹೇಗೆ ಗಳಿಸಬೇಕೆನ್ನು ನಮಗೆ ಈ ರೀತಿ ಹೇಳುತ್ತಾನೆ - ಮಾ ಅನುಸ್ಸವೇನ ( ಯಾರೋ ಹೇಳಿದರೆಮ್ಬ ಮಾತ್ರಕ್ಕೆ ಸ್ವೀಕರಿಸಬಾರದು), ಮಾ ಪರಮ್ಪರಾಯ (ಪರಮ್ಪರೆಯಿನ್ದ ಬನ್ದದ್ದೆಮ್ಬ ಮಾತ್ರಕ್ಕೆ ಸ್ವೀಕರಿಸಬಾರದು), ಮಾ ಇತಿಕ್ರಿಯಾಯ ( ಬಹಳ ಜನ ಒಪ್ಪಿದ್ದಾರೆಮ್ಬ ಮಾತ್ರಕ್ಕೆ ಸ್ವೀಕರಿಸಬಾರದು),ಮಾ ಫೀಟಕ ಸಮ್ಪದಾನೇನ ( ಪುಸ್ತಕಗಳಲ್ಲಿ ಬರೆದಿದೆ ಎಮ್ಬ ಮಾತ್ರಕ್ಕೆ ಸ್ವೀಕರಿಸಬಾರದು), ಮಾ ತಕ್ಕು ಹೇತು ( ತರ್ಕಬದ್ಧವಾಗಿದೆ ಎಮ್ಬ ಮಾತ್ರಕ್ಕೆ ಸ್ವೀಕರಿಸಬಾರದು), ಮಾ ನ್ಯಾಯ ಹೇತು (ಬರೇ ಅನುಮಾನದ ಮೂಲಕ ಸ್ವೀಕರಿಸಬಾರದು), ಮಾ ಆಕಾರ ಪರಿವಿತಕ್ಕೇನ ( ಬರೇ ನೋಡುವುದಕ್ಕೆ ಸರಿಯಾಗಿದೆ ಎಮ್ಬ ಮಾತ್ರಕ್ಕೆ ಸ್ವೀಕರಿಸಬಾರದು), ಮಾ ದಿತ್ತಿ ನಿಜ್ಝಾನ ಖನ್ತೀಯ ( ಚೆನ್ನಾಗಿ ಯೋಚನೆ ಮಾಡಿದ್ದೇನೆ ಎಮ್ಬ ಮಾತ್ರಕ್ಕೆ ಸ್ವೀಕರಿಸಬಾರದು), ಮಾ ಭಬ್ಬ ರೂಪತಾಯ (ಹೀಗೂ ಇರಬಹುದೆಮ್ಬ ಮಾತ್ರಕ್ಕೆ ಸ್ವೀಕರಿಸಬಾರದು). ಅನ್ದರೆ ಇವೆಲ್ಲವನ್ನೂ ಬಿಟ್ಟು ಆಪ್ತರು ತಮ್ಮ ಜ್ಞಾನವನ್ನು ತಮ್ಮ ಸ್ವನ್ತ ಅನುಭವದಿನ್ದ ಮಾತ್ರ ಪಡೆದುಕೊಣ್ಡಿರಬೇಕು. ಹೀಗೆ ಪಡೆದ ಜ್ಞಾನ ಮಾತ್ರ ಆಪ್ತವಾಕ್ಯವಾಗುತ್ತದೆ, ಆಗಮವಾಗುತ್ತದೆ. ಯೋಗ ಸಾಧನೆಯಾಗಬೇಕಾದರೆ, ಆಗಮವೆಮ್ಬ ಪ್ರಮಾಣದ ಮೂಲಕ ಜ್ಞಾನ-ಅನುಭವವೂ ನಿಲ್ಲಬೇಕು. ಏಕೆನ್ದರೆ, ಇವೆಲ್ಲವೂ ಮನಸ್ಸಿನ ಚೇಷ್ಟೆಗಳು

**ಸೂತ್ರ 8: ವಿಪರ್ಯಯೋಮಿಥ್ಯಾಜ್ಞಾನಮತದ್ರೂಪಪ್ರತಿಷ್ಠಮ್:** ಪ್ರಮಾಣವೆಮ್ಬ ವೃತ್ತಿಯನ್ನು ನೋಡಿದ ಮೇಲೆ, ವಿಪರ್ಯಯ ಎಮ್ಬ ಮನಸ್ಸಿನ ವೃತ್ತಿಯನ್ನು ನೋಡೋಣ. ಮೇಲೆ ಅರ್ಥಗತಿಯಲ್ಲಿ, ವಿಪರ್ಯಯವು ಅನ್ದರೆ ಮತಿಭ್ರಮಣವು, ತಪ್ಪು ಗ್ರಹಿಕೆಯು, ಮಿಥ್ಯಾಜ್ಞಾನದಿನ್ದ ಅನ್ದರೆ, ನಾವು ಪಡೆದ ಜ್ಞಾನವು, ಆ ಜ್ಞಾನಕ್ಕೆ ಬುನಾದಿಯಾಗಿರುವನ್ತಹಾ ತಥ್ಯಕ್ಕೂ ಅಥವ ಋತಕ್ಕೂ (reality) ಪಕ್ತಿಬದ್ಧತೆ ಇಲ್ಲದಿರುವುದು (alignment). ಇದನ್ನು ಒನ್ದು ಉದಾಹರಣೆಯಿನ್ದ ನೋಡೋಣ. ನಮಗೆ ಭೂಮಿಯ ಮೇಲೆ ನಿನ್ತಾಗ ಸೂರ್ಯನು ಪೂರ್ವದಲ್ಲಿ ಉದಯಿಸಿ ಪಶ್ಚಿಮದಲ್ಲಿ ಮುಳುಗುತ್ತಾನೆಮ್ಬ ಅನುಭವವಾಗುತ್ತದೆ. ಈ ಅನುಭವವು ಭೂಮಿಯ ದಕ್ಷಿಣ ಮತ್ತು ಉತ್ತರ ಧ್ರುವಗಳಲ್ಲಿ ಬೇರೆಯಾಗಿದ್ದರೂ, ಈ ಅನುಭವವು ಸೂರ್ಯನು ನಿಜವಾಗಿಯೂ ಹುಟ್ಟುವುದೂ ಇಲ್ಲ ಮತ್ತು ಮುಳುಗುವುದೂ ಇಲ್ಲ ಎಮ್ಬ ಋತಕ್ಕೆ ಪಕ್ತಿಬದ್ಧವಾಗಿಲ್ಲದಿರುವುದರಿನ್ದ ಈ ಅನುಭವವು, ಜ್ಞಾನವು ಮಿಥ್ಯಾ ಜ್ಞಾನ. ಇದೂ ಮನಸ್ಸಿನ ಒನ್ದು ವೃತ್ತಿ. - ಇಲ್ಲಿ ಮಿಥ್ಯಾ ಎಮ್ಬ ಪದವನ್ನು ಬಳಸಿರುವುದರಿನ್ದ ಈ ಪದದ ಅರ್ಥವನ್ನು ಮತ್ತು ಅದರ ಜೊತೆಗೆ ಸತ್ಯ ಮತ್ತು ಮಾಯೆಯ ಅರ್ಥವನ್ನೂ ತಿಳಿದುಕೊಣ್ಡರೆ, ಈ ಸೂತ್ರದ ಸರಿಯಾದ ಅರ್ಥವನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಮೊದಲನೆಯದಾಗಿ, ಮಿಥ್ಯ ಎನ್ದರೆ, ನಿಜವಲ್ಲದ್ದು ಎಮ್ಬ ಅರ್ಥಗಳಿನ್ದ ಹೊರಬರಬೇಕು. ಹಾಗಾದರೆ, ಮಿಥ್ಯಾ ಎನ್ದರೇನು? ಮಿಥ್ಯೆಗೂ ಮಾಯೆಗೂ ಏನು ವ್ಯತ್ಯಾಸ? ಗುದಪಾದರ ಮಣ್ಡೂಕ್ಯ ಉಪನಿಷತ್ತಿಗೆ ಬರೆದಿರುವ ವಿವರಣೆಯಾದ ಮಣ್ಡೂಕ್ಯ ಕಾರಿಕೆಯಲ್ಲಿ ಮಿಥ್ಯೆ ಮತ್ತು ಮಾಯೆಗೆ ವ್ಯತ್ಯಾಸಗಳನ್ನು ಈ ರೀತಿ ವರ್ಣಿಸಲಾಗಿದೆ - ಮಿಥ್ಯೆ ಎನ್ದರೆ, "ಸಪ್ರಯೋಜನತಾ ತೇಷಾಂ ಸ್ವಪ್ನೇ ವಿಪ್ರತಿಪದ್ಯತೇ ತಸ್ಮಾದಾದ್ಯಂತವತ್ತ್ವೇನ ಮಿಥ್ಯೈವ ಖಲು ತೇ ಸ್ಮೃತಾಃ" ಇದರ ಸಾರಾಂಶ, ಯಾವುದೋ ಒನ್ದು ಅನುಭವ, ಯಾವುದೋ ಒನ್ದು ಹೇತುವನ್ನು ಸಪರ್ಯುಗೊಳಿಸುವ (serving a purpose), ಒನ್ದು ಪದಾರ್ಥದ ಮೇಲೆ ಅವಲಮ್ಬಿತವಾದ ಕರ್ಮೇನ್ದ್ರಿಯಗಳ ಮೂಲಕ ಆಗುವ ಅನುಭವ (an experience thorough sense perception of an object, serving a particular purpose), ಈ ಅನುಭವವು ಜಾಗ್ರತಾವಸ್ಥೆಯಲ್ಲಿ ಆಗಿದ್ದಲ್ಲಿ, ಈ ಅನುಭವದ ಪ್ರಯೋಜನವು ಸ್ವಪ್ನಾವಸ್ಥೆಯಲ್ಲಿ ತನ್ನ ಗುರ್ವರ್ಥತ್ವವನ್ನು (relevance) ಕಳೆದುಕೊಳ್ಳುತ್ತದೆ. ಇದು ವಿಲೋಮತೆಯಲ್ಲಿ ಕೂಡಾ ನಿಜ (true vice-versa as well) ಮತ್ತು, ಎರಡೂ ಅನುಭವಕ್ಕೂ ( ಜಾಗ್ರತೆ ಮತ್ತು ನಿದ್ರಾವಸ್ಥೆಯಲ್ಲಿ) ಆರಮ್ಭ ಮತ್ತು ಅನ್ತ್ಯವೆರಡೂ ಇದ್ದಲ್ಲಿ, ಇದು ಮಿಥ್ಯೆಯಾಗುತ್ತದೆ. ಒನ್ದು ಸಣ್ಣ ಉದಾಹರಣೆಯಿನ್ದ ಇದನ್ನು ಅರ್ಥಮಾಡಿಕೊಳ್ಳೋಣ. ಜಾಗ್ರತಾವಸ್ಥೆಯಲ್ಲಿ ಹಸಿವಾದಾಗ ಊಟ ಮಾಡಿದರೆ , ಹಸಿವಿನ ಹೋಗಲಾಡಿಕೆ ಎಮ್ಬ ಹೇತುವಿನ ಸುಪರ್ಯದ ಈ ಅನುಭವಕ್ಕೆ, ಆರಮ್ಭವೂ ಇದೆ, ಅನ್ತ್ಯವೂ ಇದೆ. ಸ್ವಪ್ನದಲ್ಲಿ ಹಸಿವಾದಾಗ ಸ್ವಪ್ನದಲ್ಲಿ ಊಟಮಾಡುವ ಅನುಭವಕ್ಕೂ ಆರಮ್ಭ ಮತ್ತು ಅನ್ತ್ಯವಿರುತ್ತದೆ. ಆದರೆ! ಜಾಗ್ರತಾವಸ್ಥೆಯಲ್ಲಿ ಮಾಡಿದ ಊಟ ಸ್ವಪ್ನದ ಹಸಿವನ್ನು ಹೋಗಲಾಡಿಸುವುದಿಲ್ಲ. ಸ್ವಪ್ನದಲ್ಲಿ ಮಾಡಿದ ಊಟ ಜಾಗ್ರತಾವಸ್ಥೆಯಲ್ಲಿನ ಹಸಿವನ್ನು ಹೋಗಲಾಡಿಸುವುದಿಲ್ಲ. ಆದ್ದರಿನ್ದ, ಆಗಿದ್ದ ಹಸಿವು ಮತ್ತು ಅದನ್ನು ಹೋಗಲಾಡಿಸಲು ಮಾಡಿದ ಊಟ ಮತ್ತು ಅದರ ಅನುಭವ ಎರಡೂ, ಎರಡು ಅವಸ್ಥೆಯಲ್ಲಿಯೂ ( ಜಾಗ್ರತ ಮತ್ತು ಸ್ವಪ್ನ) ನಿಜವಾಗಿದ್ದರೂ, ಆ ಎರಡು ಅನುಭವವೂ ಅವುಗಳ ನೀವೃತಿಗಳ ಮೇಲೆ ಅವಲಮ್ಬಿತವಾಗಿರುತ್ತದೆ(these two experiences are dependent on their respective realms)ಈ ಅನುಭವಗಳೆರಡೂ ಸಾಪೇಕ್ಷವಾದ(dependent) ಅನುಭವ. ಆದುದರಿನ್ದ ಇದು ಆಪೇಕ್ಷಿಕವಾದ ಅನುಭವ ಕೂಡಾ(relative experience) ನಿಪರೇಕ್ಷವಾದ ಅನುಭವವಲ್ಲ (not an absolute experience). ಆದುದರಿನ್ದ ಮಿಥ್ಯೆ ಅನ್ದರೆ, ಆಪೇಕ್ಷಿಕವಾದ ಅನುಭವ (relative experience). ಇದು ಸುಳ್ಳಲ್ಲ, ಸೂರ್ಯನು ಪೂರ್ವದಲ್ಲಿ ಹುಟ್ಟುತ್ತಾನೆಮ್ಬ ಅನುಭವ ಸುಳ್ಳಲ್ಲ ಆದರೆ, ಅದು ಬೇರೊನ್ದರ ಮೇಲೆ ಅವಲಮ್ಬಿತವಾದ - ಭೂಮಿಯ ಮೇಲೆ ನಿನ್ತಿರುವುದರ ಮೇಲೆ ಅದರಲ್ಲೂ ಎಲ್ಲಿ ನಿನ್ತಿದ್ದೇವೆ ಎಮ್ಬುದರ ಮೇಲೆ ಅವಲಮ್ಬಿತವಾಗಿರುತ್ತದೆ - ಉತ್ತರ ಮತ್ತು ದಕ್ಷಿಣ ಧ್ರುವಗಳಲ್ಲಿ ಸೂರ್ಯ ಪೂರ್ವದಲ್ಲಿ ಹುಟ್ಟುವುದಿಲ್ಲ.

ಇನ್ನು ಮಣ್ಡೂಕ್ಯ ಕಾರಿಕೆಯಲ್ಲಿ ಮಾಯೆಯ ಸ್ಥಾಪನವನ್ನು(definition) ನೋಡೋಣ. ಕಾರಿಕೆಯಲ್ಲಿ, ಮಾಯೆಯನ್ನು, ಆದಾವಂತೇ ಚ ಯನ್ನಾಸ್ತಿ ವರ್ತಮಾನೇಪಿ ತತ್ತಥಾ ವಿತಥೈಃ ಸದೃಶಾಃ ಸಂತೋವಿತಥಾ ಇವ ಲಕ್ಷಿತಾಃ, ಎನ್ದು, ಯಾವುದು ಪ್ರಾರಮ್ಭದಲ್ಲಿ ಇರುವುದಿಲ್ಲವೋ, ಮಧ್ಯದಲ್ಲಿಯೂ ಇರುವುದಿಲ್ಲವೋ ಮತ್ತು ಕೊನೆಯಲ್ಲಿಯೂ ಇರುವುದಿಲ್ಲವೋ ಅದು ಮಾಯೆ. ಇಲ್ಲಿ ಮಾಯೆಗೂ ಮಿಥ್ಯೆಗೂ ಎರಡು ಪ್ರಮುಖ ವ್ಯತ್ಯಾಸಗಳಿವೆ. ಒನ್ದು ಮಿಥ್ಯೆಗೆ ಅನಿದೃಶವಾಗಿ(unlike) ಮಾಯೆಗೆ ಕರ್ಮೇನ್ದ್ರಿಯಗಳ ಅವಲಮ್ಬನೆ ಇರಬೇಕೆನ್ದಿಲ್ಲ ( ಇರಲೂ ಬಹುದು, ಇಲ್ಲದೇ ಪೂರ್ಣತಹ ಮನಸ್ಸಿನ ಅನುಭವವಾಗಿರಲೂಬಹುದು) ಮತ್ತು ಯಾವುದೇ ಪದಾರ್ಥದ ಅವಲಮ್ಬನೆ ಇರುವುದಿಲ್ಲ - ಒನ್ದು ಉದಾಹರಣೆಯಿನ್ದ ನೋಡೋಣ. ಮೊಲದ ಕೊಮ್ಬು

ಎಮ್ಬ ಒನ್ದು ಕಾಲ್ಪನಿಕ ಅನುಭವ ಮಾಯೆಯ ಒನ್ದು ಉದಾಹರಣೆ. ಇಲ್ಲಿ ಕೊಮ್ಬಿರುವ ಮೊಲ ಮಾಯೆಯ ಅನುಭವದ ಪ್ರಾರಮ್ಭದಲ್ಲಿಯೂ ವಸ್ತುತಹ ಇಲ್ಲ, ಮಧ್ಯದಲ್ಲಿಯೂ ಇಲ್ಲ ಮತ್ತು ಕೊನೆಯಲ್ಲಿಯೂ ಇಲ್ಲ. ಕೊಮ್ಬಿರುವ ಮೊಲದ ಸಾಧ್ಯತೆ ಅಸಾಧ್ಯವಾದರೂ ಮಾಯೆಯ ಕಾರಣದಿನ್ದ ಕರ್ಮೇನ್ದ್ರಿಯಗಳ ಸಹಾಯವಿಲ್ಲದೇ ಮನಸ್ಸು ಅದನ್ನು ಅನುಭವಿಸಬಹುದು - ಮಿಥ್ಯೆಯ ಉದಾಹರಣೆಯಲ್ಲಿ, ಕರ್ಮೇನ್ದ್ರಿಯಗಳ ಮೂಲಕ, ಸೂರ್ಯ ಪೂರ್ವದಲ್ಲಿ ಹುಟ್ಟುವುದನ್ನು ಅನುಭವಿಸುತ್ತೇವೆ.

ಮಿಥ್ಯೆ ಮತ್ತು ಮಾಯೆಯನ್ನು ನೋಡಿದ ಮೇಲೆ, ಸತ್ಯ ಮತ್ತು ಋತಗಳನ್ನು ನೋಡದ್ದಿದ್ದರೆ, ಕಾರ್ಯ ಪೂರ್ಣವಾಗುವುದಿಲ್ಲ. ಸತ್ಯವೆನ್ದರೆ, ಸಾಮಾನ್ಯವಾಗಿ ಕಣ್ಡದ್ದನ್ನು ಕಣ್ಡನ್ತೆ ಹೇಳುವುದು, ಇದ್ದದ್ದನ್ನು ಇದ್ದನ್ತೆ ಹೇಳುವುದು, ಆದದ್ದನ್ನು ಆದನ್ತೆ ಹೇಳುವುದು ಎಮ್ಬ ಅರ್ಥ ಮತ್ತು ವ್ಯಾಖ್ಯಾನವನ್ನು ಕೊಡುತ್ತೇವೆ. ಸೂರ್ಯನು ಪೂರ್ವದಲ್ಲಿ ಹುಟ್ಟುತ್ತಾನೆನ್ದು ಕಣ್ಡದ್ದನ್ನು ಹಾಗೆಯೇ ಹೇಳಿದರೆ, ಅದು ಮಿಥ್ಯೆಯೆನ್ದು ಈಗಾಗಲೇ ಹೇಳಿರುವುದರಿನ್ದ, ಕಣ್ಡದ್ದನ್ನು ಕಣ್ಡನ್ತೆ ಹೇಳಿದರೆ ಅದು ಸತ್ಯವಾಗಲಾರದಲ್ಲವೇ?! ಮಹಾಭಾರತದಲ್ಲಿ ಧರ್ಮರಾಯ ಅಶ್ವತ್ಥಾಮ ಹತಃ ಕುಞ್ಜರಹ ಎನ್ದಾಗ ಆದದ್ದನ್ನು ಆದನ್ತೆಯೇ ಹೇಳಿದನಲ್ಲವೇ? ಹಾಗಾದರೆ, ಅವನದೇಕೆ ಅಸತ್ಯವಾಯಿತು? (ಕೃಷ್ಣನು ಶಙ್ಖವನ್ನು ಊದುವುದಕ್ಕೂ ಧರ್ಮರಾಯ ಅಸತ್ಯವನ್ನು ನುಡಿದನೆನ್ನುವುದಕ್ಕೂ ಸಮ್ಬನ್ಧವಿಲ್ಲ). ಸತ್ಯವೆನ್ದರೇನು ಎಮ್ಬುದನ್ನು ಛಾನ್ದೋಗ್ಯ ಉಪನಿಷತ್ತು ಚೆನ್ನಾಗಿ ಹೀಗೆ ವಿವರಿಸುತ್ತದೆ - ತಾನಿ ಹ ವಾ ಏತಾನಿ ತ್ರೀಣ್ಯಕ್ಷರಾಣಿ ಸತೀಯಮಿತಿ ತದ್ಯತ್ಸತ್ತದಮೃತಮಥ ಯತ್ತಿ ತನ್ಮರ್ತ್ಯಮಥ ಯದ್ಯಂ ತೇನೋಭೇ ಯಚ್ಛತಿ ಯದನೇನೋಭೇ ಯಚ್ಛತಿ ತಸ್ಮಾದ್ಯಮಹರಹರ್ವಾ ಏವಂವಿತ್ಸ್ವರ್ಗಂ ಲೋಕಮೇತಿ. ಸತ್ಯ ಅನ್ನುವ ಪದದಲ್ಲಿ ಮೂರು ಅಕ್ಷರಗಳಿವೆ, ಸ, ತೀ ಮತ್ತು ಯಮ್, ಸ ಎನ್ನುವುದು ಪರಮಾರ್ಥ ತತ್ತ್ವ ಅಥವ ಋತ ಅಥವಾ ನಿರಪೇಕ್ಷ ತತ್ತ್ವ (independent entity), ತೀ ಎನ್ನುವುದು ಮರ್ತ್ಯ (mortal)ತತ್ತ್ವ ಅಥವ ಸಾಪೇಕ್ಷ ತತ್ತ್ವ (dependent entity), ಯಮ್ ಎನ್ನುವುದು ಇವೆರಡನ್ನೂ ಸೇರಿಸುವ ಒನ್ದು ಸೇತು. ಇದನ್ನು ಮೇಲೆ ಉಪಯೋಗಿಸಿದ ಸೂರ್ಯ ಪೂರ್ವದಲ್ಲಿ ಹುಟ್ಟುವ ಉದಾಹರಣೆಯಿನ್ದ ನೋಡೋಣ. ಸೂರ್ಯ ಭೂಮಿಗೆ ಸಮ್ಬನ್ಧ ಪಟ್ಟನ್ತೆ ಹುಟ್ಟುವುದೂ ಇಲ್ಲ ಮುಳುಗುವುದೂ ಇಲ್ಲವೆಮ್ಬುದು ಈ ಉದಾಹರಣೆಯ ಪ್ರಸಙ್ಗದಲ್ಲಿ ಋತ, ಅಥವಾ ನಿರಪೇಕ್ಷ ತತ್ತ್ವ ಅಥವಾ ಪಾರಮಾರ್ಥ ತತ್ತ್ವ - ಇದು ಸ ಶಬ್ದವನ್ನು ಸೂಚಿಸುತ್ತದೆ. ಭೂಮಿಯ ಮೇಲೆ ನಿನ್ತಾಗ ಸೂರ್ಯ ಪೂರ್ವದಲ್ಲಿ ಹುಟ್ಟುತ್ತಾನೆಮ್ಬ ಅನುಭವ ತೀ ಶಬ್ದವನ್ನು ಸೂಚಿಸುತ್ತದೆ. ಆದರೆ, ಇಲ್ಲಿ, ಆದ ಅನುಭವಕ್ಕೂ, ಇರುವ ಋತಕ್ಕೂ ಯಮ್ ಸೇತುವಿಲ್ಲದ್ದಿದ್ದ ಕಾರಣ, ಈ ಅನುಭವವು ಸತ್ಯದ ಅನುಭವವಾಗುವುದಿಲ್ಲ. ಧರ್ಮರಾಯನಿಗಾದದ್ದು ಇದೇ. ಅಲ್ಲಿ, ಅಶ್ವತ್ಥಾಮನೆಮ್ಬ ಆನೆ ಸತ್ತದ್ದಾದರೂ, ಸತ್ತದ್ದು ಋತವಾದರೂ, ಅದನ್ನು ಧರ್ಮರಾಯ ಹಾಗೆಯೇ ಹೇಳಿದ್ದಾದರೂ, ಅಲ್ಲಿ ಆನೆ ಸತ್ತಿದೆ ಎನ್ದು ಹೇಳುವ ಉದ್ದೇಶವಾಗಿರದೇ, ದ್ರೋಣಾಚಾರ್ಯರಿಗೆ, ಕೃಷ್ಣನ ಸಹಾಯದಿನ್ದ, ಅವನ ಮಗನಾದ ಅಶ್ವತ್ಥಾಮ ಸತ್ತು ಹೋದನೆಮ್ಬ ನಮ್ಬಿಕೆಯನ್ನು ಹುಟ್ಟಿಸುವುದರಿನ್ದ, ಅಲ್ಲಿ ಯಮ್ ಸೇತುವಿಲ್ಲದ್ದಿದ್ದ ಕಾರಣ ಅದು ಅಸತ್ಯವಾಯಿತು - ವಿಪರ್ಯಯವೂ ಮನಸ್ಸಿನ ಒನ್ದು ಕ್ರಿಯೆಯಾದುದರಿನ್ದ, ಯೋಗವಾಗಬೇಕಾದರೆ, ಅದೂ ನಿಲ್ಲಬೇಕು.

**ಸೂತ್ರ ೯: ಶಬ್ದಜ್ಞಾನಾನುಪಾತೀ ವಸ್ತು ಶೂನ್ಯೋ ವಿಕಲ್ಪಃ**: ಬರೇ ಶಬ್ದ ಜ್ಞಾನದ ಮೇಲೆ ಅವಲಮ್ಬಿತವಾಗಿ ಆ ಶಬ್ದ-ಜ್ಞಾನದ ಹಿನ್ದೆ ಇರಬೇಕಾದ, ಆ ಶಬ್ದ-ಜ್ಞಾನವು ಪಕ್ತಿಬದ್ಧವಾಗಬೇಕಾಗಿರುವ (aligned) ವಸ್ತು ಅಥವಾ ವಿಷಯವು ಇಲ್ಲದಿರುವಾಗ ಉಣ್ಟಾಗುವ ಗ್ರಹಿಕೆಯೇ ವಿಕಲ್ಪವೆಮ್ಬ ಮನಸ್ಸಿನ ವೃತ್ತಿ. ಯೋಗವಾಗಬೇಕಾದರೆ ಈ ವೃತ್ತಿ ಹೋಗಬೇಕು. ವ್ಯವಹಾರದಲ್ಲಿ ಈ ವೃತ್ತಿಗೊನ್ದು ಉದಾಹರಣೆಯೆನ್ದರೆ, ನಾವು ಮತ್ತೊಬ್ಬರ ಮೇಲೆ ಕೇಳುವ, ಮಾಡುವ ಪ್ರಜಲ್ಪನೆ (gossip). ಇದನ್ನು ಇನ್ನೂ ಆಳ-ಎತ್ತರದಲ್ಲಿ ನೋಡೋಣ.

ಇಲ್ಲಿ ವಿಕಲ್ಪವೆಮ್ಬ ಶಬ್ದವನ್ನು ಉಪಯೋಗಿಸಿರುವುದರಿನ್ದ, ವಿಕಲ್ಪ ಅಥವಾ ಭಾವಿತವಾದ ಗ್ರಹಿಕೆ ಮತ್ತು ವಿಪರ್ಯಯ, ಅನ್ದರೆ ತಪ್ಪು ಗ್ರಹಿಕೆಯ ವ್ಯತ್ಯಾಸವನ್ನು ತಿಳಿದುಕೊಳ್ಳಬೇಕು(knowing the difference between wrong understanding and understanding based on imagination). ಅದ್ವೈತದಲ್ಲಿ ಕತ್ತಲೆಯಲ್ಲಿ ಹಗ್ಗವನ್ನು ನೋಡಿ ಹಾವೆನ್ದು ತಿಳಿದು ಹೆದರುವ ಉದಾಹರಣೆಯನ್ನು ಇಲ್ಲಿ ನೋಡೋಣ. ಇಲ್ಲಿ ಹಾವೆನ್ದು ತಿಳಿಯುವುದು ತಪ್ಪು ಗ್ರಹಿಕೆ, ವಿಕಲ್ಪವಲ್ಲ. ತಪ್ಪು ಗ್ರಹಿಕೆಯಲ್ಲಿ, ನಿಜವಾದ ವಸ್ತು/ಸ್ವರೂಪವಿರುತ್ತದೆ. ಆದರೂ, ಮನಸ್ಸು ಮೊದಲು ಹಗ್ಗವಿರಬಹುದೆಮ್ಬುದನ್ನು, ಅಲ್ಲಗಳೆದು, ತನ್ನ ಮೇಲೆ ಹಾವೇ ಎನ್ದು ನಿರ್ಯುಹ (projection)ಅಥವಾ ಆರೋಪ (superimposition)ಮಾಡಿಕೊಳ್ಳುತ್ತದೆ; ಇದಕ್ಕೆ ಕಾರಣ ಅವಿದ್ಯೆ, ಅವಿದ್ಯೆಯಿನ್ದಾಗುವ ಕಲಿಲ ಅಥವಾ ಸಙ್ಕರ(confusion). ಬೆಳಕು ಹತ್ತಿದಾಗ, ಅವಿದ್ಯೆ ಮತ್ತು ಕಲಿಲವು ನಾಶವಾಗಿ ನಿಜವಾಗಿಯೂ ಇದ್ದದ್ದು ಹಗ್ಗವೆನ್ದು ಗೊತ್ತಾಗುತ್ತದೆ - ಇದು ತಪ್ಪುಗ್ರಹಿಕೆ. ವಿಕಲ್ಪದಲ್ಲಿನ ಪ್ರಕ್ರಿಯೆ ತಪ್ಪು ಗ್ರಹಿಕೆಗಿನ್ತ ಸಾನ್ತರ್ಯವಾಗಿರುತ್ತದೆ(different). ವಿಕಲ್ಪದಲ್ಲಿ, ಮನಸ್ಸು ಯಾವುದೋ ಒನ್ದು ವಾಸ್ತವತೆಯನ್ನು ನಿರ್ಯುಹ ಮಾಡುವಾಗ, ಆ ನಿರ್ಯುಹವು ಯಾವ ಒನ್ದು ತತ್ತ್ವದ ಮೇಲಾಗಲಿ, ಅಥವ ವಸ್ತುವಿನ ಮೇಲಾಗಲಿ ಆಧಾರಿತವಾಗಿರುವುದಿಲ್ಲ, ಆದ್ದರಿನ್ದ ಅಲ್ಲಿ, ಅವಿದ್ಯೆ ಇದೆ, ಅವಿದ್ಯೆ ಹೋಗಿ ವಿದ್ಯೆ ಬನ್ದಾಗ ಸರಿಯಾದುದು ಗೊತ್ತಾಗುತ್ತದೆ ಎನ್ನುವುದಲ್ಲ. ಇಲ್ಲಿ ವಸ್ತುವಿನ ಶೂನ್ಯತೆ ಅಥವಾ ಅಸಮ್ನಿಧಿ (absence)ಇರುವುದರಿನ್ದ, ಇಲ್ಲಿ ವಸ್ತುವಿನ ಅನುಭವವೂ ಇರುವುದಿಲ್ಲ (ಉದಾಹರಣೆಗೆ, ಹಗ್ಗವನ್ನು ನೋಡಿ ಹಾವಿನ ಇರುವಿಕೆಯಿನ್ದಾಗುವ ಭಯದ ಅನುಭವ). ಇದಕ್ಕೆ ಒನ್ದು ಉದಾಹರಣೆಯೆನ್ದರೆ, "ದೇವರು ನಮ್ಮನ್ನು ಕಾಪಾಡುತ್ತಾನೆ" ಎಮ್ಬ ಒನ್ದು ಶಬ್ದ ಜ್ಞಾನ. ಸಾಙ್ಖ್ಯ-ಯೋಗ ದರ್ಶನದ ನಿಲುವಿನಿನ್ದ ನೋಡಿದಾಗ, "ದೇವರು ನಮ್ಮನ್ನು ಕಾಪಾಡುತ್ತಾನೆ" ಎಮ್ಬುದು, ಬರೇ ಶಬ್ದಜ್ಞಾನದ ಮೇಲೆ ಆಧಾರಿತವಾಗಿದ್ದು, ಇದೊನ್ದನ್ನೇ ಆಧಾರವಾಗಿಟ್ಟುಕೊಣ್ಡು, ನಮ್ಮ ಮನಸ್ಸು, ನಮ್ಮನ್ನು ದೇವರು ಕಾಪಾಡುತ್ತಾನೆ ಎಮ್ಬ ಭಾವಿತವಾದ ಗ್ರಹಿತೆಯನ್ನು ಆರೋಪಗೊಳಿಸುತ್ತದೆ. ಇಲ್ಲಿ ನಿಜವಾಗಿಯೂ ಸಾಙ್ಖ್ಯ-ಯೋಗ ದರ್ಶನದ ಪ್ರಕಾರ, ದೇವರು ಅನುದ್ಯೋಗಿ (nonactive)ಅಥವಾ ಉದಾಸೀನ(inert)ಆದುದರಿನ್ದ ಕಾಪಾಡಲು ಸಾಧ್ಯವೇ ಇಲ್ಲ. ಆದುದರಿನ್ದ "ದೇವರು ಕಾಪಾಡುತ್ತಾನೆ" ಎಮ್ಬುದು ಶಬ್ದ ಜ್ಞಾನದ ಮೇಲೆ ಮಾತ್ರ ಅವಲಮ್ಬಿತವಾದ, ವಸ್ತು ಶೂನ್ಯದ ಕಾರಣದಿನ್ದ, ಮನಸ್ಸಿನಲ್ಲಾಗುವನ್ತಹಾ ವಿಕಲ್ಪ; ಇದು ಒನ್ದು ವೃತ್ತಿ; ಯೋಗವಾಗಬೇಕಾದರೆ, ಇನ್ತಹಾ ವೃತ್ತಿಗಳು ನಿಲ್ಲಬೇಕು.

**ಓಂ ತತ್ ಸತ್**

**ಅರಿವಿನ ಸೊಗಡು**:ಅರಿವೇ ಬನ್ಧು, ಅರಿಯೂ ಬನ್ಧು, ನೀ ಬನ್ಧು ತಾ ಬನ್ಧು ಎನ್ದು ಬೆಮ್ಬತ್ತಿ ಬನ್ದ ಬನ್ಧನಗಳಲ್ಲಿ, ಅರೆ ಬೆನ್ದ ಎನ್ನಾತ್ಮದ ಪ್ರಹರಿಗಳೇ ನಿಜವಾದ ಬನ್ಧು

**- ಲೋಕ ಶಙ್ಕರ**



# ಎಲ್ಲೆಲ್ಲೂ ಜಲಪ್ರಳಯ

**ಸತೀಶ್ ಹೊಸನಗರ,** ನ್ಯೂ ಜರ್ಸಿ

**ಈ** ನೀರಿಗೆ ಅದೇಕೆ ನಮ್ಮ ಸಂಸ್ಕೃತಿಯ ಪರಿಭಾಷೆಯಲ್ಲಿ ಅಷ್ಟೊಂದು ಪದಗಳಿವೆ ಎಂದು ಸಮಜಾಯಿಶಿ ಸಿಕ್ಕಿದ್ದು, ಒಂದು ತಿಂಗಳ ಹಿಂದೆ ನಾವೆಲ್ಲ ಒಂದು ರೀತಿಯಲ್ಲಿ ಹರಿಕೇನ್ ಐಡಾ (Ida) ಕೃಪಾಕಟಾಕ್ಷಕ್ಕೆ ಸಿಕ್ಕು ಬದುಕಿದೆಯಾ ಬಡಜೀವವೇ ಎಂದುಕೊಂಡಾಗ. ಕೆಲವೇ ಗಂಟೆಗಳ ಅವಧಿಯಲ್ಲಿ ಸುಮಾರು ಹತ್ತು ಇಂಚು (25 ಸೆ.ಮೀ) ಅಷ್ಟು ಮಳೆ ಹೊಡೆದಾಗ, ಇಂತಹ ಒಂದು ನೈಸರ್ಗಿಕ ಪ್ರಕೋಪವನ್ನು ಬರೀ "ಮಳೆ" ಎಂದಾಗಲೀ, "ನೀರು" ಎಂದಾಗಲೀ ಕರೆದುದೇ ಆದರೆ, ನಾವು ಅದಕ್ಕೆ ಸಲ್ಲಿಸುವ ಮರ್ಯಾದೆಯಲ್ಲಿ ಕೊಂಚ ಊನವಾದಂತೆಯೇ ಸರಿ!

ಆಗಸ್ಟ್ ಕೊನೆಯಲ್ಲಿ ಮತ್ತು ಸೆಪ್ಟೆಂಬರ್ ಮೊದಲ ದಿನಗಳಲ್ಲಿ ಅಮೇರಿಕದ ಹತ್ತು ರಾಜ್ಯಗಳ ಜನರಿಗೆ ನೀರು ಕುಡಿಸಿದ ಮಹಾ ಚಂಡಮಾರುತ, ಐಡಾ, ನಾವೆಲ್ಲರೂ ನಿರೀಕ್ಷಿಸಿದ್ದಕ್ಕಿಂತಲೂ ಹೆಚ್ಚು ಹಾನಿಯನ್ನು ಮಾಡಿತು. ಸುಮಾರು ಇಪ್ಪತ್ತೊಂದು ವರ್ಷಗಳ ನಂತರ (ಹರಿಕೇನ್ ಫ್ಲಾಯ್ಡ್ 1999) ನಮ್ಮೆಲ್ಲರ ನಿರೀಕ್ಷೆಗಿಂತಲೂ ಹೆಚ್ಚು ರಭಸದಿಂದ ಮಳೆಯನ್ನು ಸುರಿಸಿ, ಅದೂ ಸಾಲದು ಎಂಬಂತೆ ಕೆಲವು ಕಡೆ ಬಿರುಗಾಳಿ ಮತ್ತು ಸುಂಟರಗಾಳಿಗಳ ಜೊತೆಗಿನ ಸಾಂಗತ್ಯದಿಂದ ಅನೇಕ ಸಾವು-ನೋವುಗಳಿಗೆ ಕಾರಣವಾಯಿತು. ಈ ಎರಡು ದಶಕಗಳಲ್ಲಿ ನ್ಯೂ ಜರ್ಸಿಯ ಹೈವೇಗಳಲ್ಲಿ ಇಷ್ಟೊಂದು ವಾಹನಗಳು ತೇಲುವ ಹಾಗೆ ನಾವು ನೋಡಿರುವುದು ಇದೇ ಮೊದಲನೆಯ ಸಲ!

ಈ ಐಡಾ ತಂದ ಜಲಪ್ರಳಯ ಹೇಗಿತ್ತೆಂದರೆ, ಎಲ್ಲೆಲ್ಲೂ ನೀರು! ಕಾರಿನ ವಿಂಡ್‌ಶೀಲ್ಡ್ ಮೇಲೆ ಸುರಿಯುತ್ತಿದ್ದ ದಪ್ಪನೆ ಹನಿಗಳು. ವೈಪರು ಹಾಕಲಿ, ಬಿಡಲಿ - ಮುಂದೆ ಏನೂ ಕಾಣದಂತಿರುವ ಸನ್ನಿವೇಶ. ಎಲ್ಲ ರಸ್ತೆಗಳೂ ತತ್ಕಾಲಕ್ಕೆ ಬಂದ್ ಆಗಿ, ಅನೇಕ ಕಾರುಗಳು ಮಕ್ಕಳ ಆಟಿಕೆಯ ದೋಣಿಯಂತಾಗಿತ್ತು! ಆಕಾಶದ ಅಧಿಪತ್ಯವನ್ನು ಆ ದಿನಕ್ಕೆ ಕಸಿದುಕೊಂಡೆವೆಂಬಂತೆ ಬಾನಿನಲ್ಲಿ ಹಿಗ್ಗುತ್ತಿದ್ದ ಕ್ರೂರ ಕಾರ್ಮೋಡಗಳು ಎಲ್ಲಕಡೆಗೆ ಕೊಚ್ಚಿಕೊಂಡು ಹೋಗುತ್ತಿದ್ದರೂ, ನಿರ್ದಾಕ್ಷಿಣ್ಯವಾಗಿ ಮಳೆಯನ್ನು ಸುರಿಸುತ್ತಿದ್ದವು. ನದಿ, ತೊರೆ, ಒರತೆ, ಸಮುದ್ರಗಳನ್ನೆಲ್ಲ ಒಂದು ಮಾಡಿ ಬಿಡುತ್ತೇನೆ ಎಂದು ಯಾವುದೋ ಭಗೀರಥನಂತಹ ಋಷಿಯ ಭಯಂಕರ ತಪಸ್ಸಿನ ಫಲವೇನೋ ಎಂದು ಕೆಲವೊಮ್ಮೆ ಯೋಚಿಸುವಂತಾಯ್ತು. "ದಾಟು" ಕಾದಂಬರಿಯಲ್ಲಿ ಅರ್ಚಕ ವೆಂಕಟರಮಣಯ್ಯ ಕೊನೆಯಲ್ಲಿ ಹೇಳುತ್ತಾರಲ್ಲ - "ನೀರು ಶಾಂತವಾಗಿದ್ದರೆ ಬಿಂಬಗಳು. ಪ್ರಳಯಜಲದಲ್ಲಿ ಬಿಂಬವೂ ಇಲ್ಲ, ಬಿಂಬಿಯೂ ಇಲ್ಲ" ಎನ್ನುವ ಮಾತು ನೆನಪಾಯಿತು!

***

ಚಂಡಮಾರುತಗಳ ಸೀಝನ್ ಎಂದೇ ಇಲ್ಲಿ ಜೂನ್ 1 ರಿಂದ ನವೆಂಬರ್ 30ರ ವರೆಗೆ ಗುರುತಿಸಿಕೊಂಡ ನಾವೆಲ್ಲ, ಪ್ರತೀ ವರ್ಷ ಒಂದಿಷ್ಟು ಹರಿಕೇನ್‌ಗಳು ಈ ದೇಶದುದ್ದಕ್ಕೂ ಹಾವಳಿಯನ್ನು ಮಾಡುವುದನ್ನ ನೋಡಿದ್ದೇವೆ. ಇಲ್ಲಿನ ಒಂದು ವ್ಯವಸ್ಥೆಯಲ್ಲಿ ಪ್ರತಿಯೊಂದು ಹರಿಕೇನ್‌ಗಳನ್ನು ಅದರ ವೇಗ ಮತ್ತು ವಿಸ್ತಾರದ ಮೇಲೆ ಕೆಟಗರಿ ಒಂದರಿಂದ ಐದರವರೆಗೆ ಅವುಗಳನ್ನು ಅಳೆಯಲಾಗುತ್ತದೆ. ಗಾಳಿಯ ವೇಗ ಹೆಚ್ಚಾದಂತೆ, ಕೆಟಗರಿಗಳ ಸಂಖ್ಯೆ ಹೆಚ್ಚಾಗಿ ಅವುಗಳು ಸುರಿಸುವ ಮಳೆ, ನಂತರದ ಪ್ರವಾಹ ಇವೆಲ್ಲವನ್ನೂ ಅಳೆದು ನೋಡಿದರೆ, ಪ್ರತಿಯೊಂದರ "ಪ್ರಭಾವ" ಗೊತ್ತಾಗುತ್ತದೆ. ಈ ಪ್ರಭಾವವನ್ನು ಜನರ ಆಸ್ತಿ ಹಾನಿಯ ಲೆಕ್ಕದಲ್ಲಿ, ಊರು-ರಾಜ್ಯಗಳಿಗೆ, ಅವುಗಳ ಮೂಲ ಸೌಕರ್ಯಗಳ (infrastrucutre) ಮೇಲೆ ಆದ ಪರಿಣಾಮದಿಂದ ಹತ್ತಾರು ಬಿಲಿಯನ್ ಡಾಲರುಗಳಲ್ಲಿ ಅಳೆಯಬಹುದು. ಆದರೆ, ಹೆಚ್ಚಿನ ಜನರು ಮುಂಜಾಗರೂಕರಾಗಿರುವುದರಿಂದ, ಜೀವಹಾನಿ ವಿಷಯದಲ್ಲಿ ಇಂತಹ ಚಂಡಮಾರುತಗಳ ಪ್ರಭಾವ ಕಡಿಮೆ. ಆದರೆ, ಐಡಾ ವಿಚಾರದಲ್ಲಿ ಹಾಗಾಗಲಿಲ್ಲ. ನಮ್ಮ ನ್ಯೂ ಜರ್ಸಿ ರಾಜ್ಯದಲ್ಲೇ ಸಾಕಷ್ಟು ಸಾವುಗಳು ಸಂಭವಿಸಿದವು. ಅನೇಕ ಕುಟುಂಬಗಳು ತಮ್ಮದೆಲ್ಲವನ್ನೂ ಕಳೆದುಕೊಂಡು ಬೀದಿಗೆ ಬಿದ್ದವು.



ನಾವು ಮೊದಲಾಗಿದ್ದರೆ, ಯಾವುದಾದರೊಂದು ನ್ಯೂಸ್ ನೆಟ್‌ವರ್ಕನ್ನಾದರೂ ನೋಡಿಕೊಂಡು ಮುಂಬರುವ ಹವಾಮಾನದ ಬಗ್ಗೆ ಜಾಗರೂಕರಾಗಿರುತ್ತಿದ್ದೆವು. ಈಗಿನ ಸೋಶಿಯಲ್ ಮೀಡಿಯಾವನ್ನು ಅವಲಂಬಿಸಿದ ನ್ಯೂಸ್ "ನೆಟ್‌ವರ್ಕ್"ಗಳ ಹಾವಳಿಯಲ್ಲಿ ಸ್ಥಳೀಯ ಮಾಹಿತಿ, ಮುಂಜಾಗರೂಕತೆಯ ಕ್ರಮ ಇವೆಲ್ಲ ಅಷ್ಟೊಂದು ವೇಗವಾಗಿ ದೊರಕುತ್ತಿಲ್ಲ. ತಿಳಿಯಬೇಕಾದ ಜನರಿಗೆ ಸರಿಯಾದ ಮಾಹಿತಿ ಸಿಗುತ್ತಿಲ್ಲ ಎನ್ನುವುದು ನನ್ನ ಅಭಿಪ್ರಾಯ. ನಮ್ಮ ಮೊಬೈಲ್ ನೆಟ್‌ವರ್ಕ್‌ಗಳ ಸಹಾಯದಿಂದ ಈಗೆಲ್ಲ ಮುಂಬರುವ ಪ್ರವಾಹ, ಮಳೆ, ಚಂಡಮಾರುತ, ಸುಂಟರಗಾಳಿಗಳ ಬಗ್ಗೆ ತ್ವರಿತವಾಗಿ ಹಾಗೂ ಮುಂಚಿತವಾಗಿ ಮಾಹಿತಿ ಸಿಗುವುದಾದರೂ, ಹರಿಕೇನ್ ಐಡಾ ಬರುವುದಕ್ಕಿಂತ ಮೊದಲು ನಮಗೆ ಸಿಕ್ಕ ವಾರ್ನಿಂಗ್‌ಗಳು ಕಡಿಮೆಯೇ ಎನ್ನಬಹುದು. ಆದರೆ, ಒಮ್ಮೆ ಈ ಮೊಬೈಲ್ ಅಲರ್ಟ್‌ಗಳು ಆರಂಭವಾದ ನಂತರ ಪ್ರತಿ ಗಂಟೆಗೊಂದರಂತೆ ಬಂದ ಮೆಸೇಜುಗಳು ತಕ್ಕಮಟ್ಟಿಗೆ ವಾರ್ನಿಂಗ್ ಮತ್ತು ಅಪ್‌ಡೇಟ್‌ಗಳನ್ನು ಕೊಡಲಾರಂಭಿಸಿದ್ದು ನಿಜಕ್ಕೂ ಸಹಾಯವಾಯಿತು.



ನಮ್ಮ ನ್ಯೂ ಜೆರ್ಸಿಯ ಅನೇಕ ಭಾಗಗಳು ಸಮುದ್ರ ಮಟ್ಟದಲ್ಲೇ ಇರುವುದರಿಂದ ಅದರಲ್ಲೂ ಆಗಸ್ಟ್ ಕೊನೆಯ ವಾರದ ದಿನಗಳಲ್ಲಿ ಹೆಚ್ಚಿನ ಮಳೆ ಇದ್ದುದರಿಂದ ಬಿಡುವಿಲ್ಲದೇ ಸುರಿದ ಧಾರೆಯ ನೀರು ಎಲ್ಲಿಗೆ ಹೋಗುವುದಕ್ಕೂ ಜಾಗವಿಲ್ಲದೇ ಹೆಚ್ಚಿನ ಪ್ರದೇಶಗಳು ಜಲಾವೃತವಾದವು. ಅನೇಕ ರಸ್ತೆಗಳು ಸಂಚಾರಕ್ಕೆ ಯೋಗ್ಯವಿಲ್ಲದಂತಾದವು. ಈಗಾಗಲೇ ಶಾರ್ಟೇಜಿನಲ್ಲಿ ಸಿಕ್ಕಿರುವ ಆಟೋಮೊಬೈಲ್ ಇಂಡಸ್ಟ್ರಿಗೆ ಗಾಯದ ಮೇಲೆ ಬರೆ ಎಳೆದಂತೆ ಅನೇಕ ಹೊಸ ಮತ್ತು ಹಳೆಯ ವಾಹನಗಳೂ ಹಾಳಾಗಿ ಹೋದವು. ಎಲ್ಲಕ್ಕಿಂತ ಮುಖ್ಯವಾಗಿ ತಮ್ಮ ಮನೆಯವರನ್ನು, ಬಂಧುಗಳನ್ನು ಕಳೆದುಕೊಂಡ ಅನೇಕ ಕುಟುಂಬಗಳ ರೋಧನ ಇನ್ನೂ ಕಣ್ಣ ಮುಂದೆ ಕಟ್ಟಿದಂತಿದೆ.

***

ಈ ಭೂಮಿಯ ಮುಕ್ಕಾಲು ಭಾಗವನ್ನು ಆವರಿಸಿಕೊಂಡಿರುವ ನೀರಿಗೆ ಹೋಲಿಸಿದರೆ ನಾವೆಲ್ಲ ಬದುಕುವ ಭೂ ಭಾಗ ಬಹಳ ಚಿಕ್ಕದು. ಒಮ್ಮೊಮ್ಮೆ ಈ ಭೂಮಿ ಸುತ್ತುವುದರಿಂದ ಹರಿಕೇನುಗಳು ಹೆಚ್ಚುತ್ತವೆಯೋ ಅದರ ಬದಲಿಗೆ ಈ ಭೂಮಿ ನಿಂತಲ್ಲೇ ನಿಂತಿದ್ದರೆ ಹೇಗಿತ್ತು ಎನ್ನುವ ಆಲೋಚನೆಗಳೂ ಬರುತ್ತವೆ. ಒಂದು ಸಮೀಕ್ಷೆಯ ಪ್ರಕಾರ ಈ ಭೂಮಿ ತನ್ನ ಕಕ್ಷೆಯ ಮೇಲೆ ಸುತ್ತುವ ವೇಗ ವರ್ಷದಿಂದ ವರ್ಷಕ್ಕೆ ಹೆಚ್ಚಿ ಅದರ ಪರಿಣಾಮವೆಂಬಂತೆ ಹೆಚ್ಚುತ್ತಿರುವ ಹರಿಕೇನುಗಳು ಮತ್ತು ಅವುಗಳ ವೇಗಕ್ಕೂ ಕತೆ ಕಟ್ಟಲಾಗುತ್ತಿದೆ. ಇನ್ನೊಂದು ಕಡೆ, ಈ ಭೂಮಿ ಸುತ್ತುವುದನ್ನೇನಾದರೂ ನಿಲ್ಲಿಸಿಬಿಟ್ಟರೆ ಇಡೀ ಭೂಮಂಡಲವನ್ನೇ ನೀರು ಆಕ್ರಮಿಸಿಕೊಂಡರೂ ಅತಿಶಯವಲ್ಲ. ಭೂಮಿಯ ಚಲನೆ ಇರಲಿ, ನಮ್ಮ ಒಂಟಿ ಉಪಗ್ರಹ ಚಂದ್ರನದ್ದೂ ಈ "ನೀರಿನ ಚಲನೆ"ಯಲ್ಲಿ ಮಹಾ ಪ್ರಭಾವವಿದೆ! ಒಂದು ವೇಳೆ, ಈ ಚಂದ್ರನೇ ಇಲ್ಲದಿದ್ದರೆ ಭೂಮಿ ತನ್ನ ಕಕ್ಷೆಯಲ್ಲಿ ಓರೆಯಾಗಿರುತ್ತಿರಲಿಲ್ಲವೇನೋ? ಅಂತಹ ಭೂಮಿಯಲ್ಲಿ ಎಲ್ಲ ಸೀಜನ್ನುಗಳು ಒಂದೇ ರೀತಿಯಾಗಿ ಕಂಡು ಅದು ಸಪ್ಪೆಯಾಗಿ ಬಿಡಬಹುದು. ಈ ಹರಿಕೇನುಗಳ ವೇಗವನ್ನು, ಗಾಳಿಯ ವೇಗ ಮತ್ತು ದಿಕ್ಕುಗಳನ್ನು ನಿಖರವಾಗಿ ಅಳೆಯುವ ನಾವು, ನಮ್ಮನ್ನು ಹೊತ್ತಿರುವ ಭೂಮಿಯೂ ಸುತ್ತುತ್ತಿದೆ ಎನ್ನುವುದನ್ನು ಮರೆಯುತ್ತೇವೆ. ಗಂಟೆಗೆ ಒಂದು ಸಾವಿರ ಮೈಲು ವೇಗದಲ್ಲಿ ಸುತ್ತುವ ಈ ಭೂಮಿ ತನ್ನ ಸುತ್ತಲಿನ ಗಾಳಿಯನ್ನು ಹೊತ್ತು ತಿರುಗುವುದರಲ್ಲಿ ವಿಶೇಷವಾದರೂ ಏನು?! ಒಟ್ಟಿನಲ್ಲಿ ಈ ಪಂಚಭೂತಗಳಲ್ಲಿ ಒಂದು ಅನ್ಯೋನ್ಯವಾದ ನಂಟಿದೆ. ಭೂಮಿ, ನೀರು, ಗಾಳಿ, ಅಗ್ನಿ, ಆಕಾಶ - ಇವೆಲ್ಲವೂ ಒಂದಕ್ಕೊಂದು ಹೊಂದಿಕೊಂಡೇ ಇರುತ್ತವೆ, ಬರುತ್ತವೆ. ಈ ಪುಕ್ಕಟೆಯಾಗಿ ಸಿಗುವ ಸಂಪನ್ಮೂಲಗಳಲ್ಲಿ ಎಂದೂ ಯಾವುದೂ ಹೆಚ್ಚಾಗಬಾರದು, ಯಾವುದೂ ಕಡಿಮೆ ಆಗಬಾರದು!



***

ನಾವು, ಒಂದು ಅಗಾಧವಾದ ವಿಶ್ವದಲ್ಲಿನ ಹಲವು ಸೌರವ್ಯೂಹಗಳಲ್ಲಿ ಒಂದಾದ ನಮ್ಮ ಸೂರ್ಯನ ಕುಟುಂಬದ ಅನೇಕ ಗ್ರಹಗಳಲ್ಲಿ ಸುಮಾರು ನಾಲ್ಕು ಸಾವಿರ ಮೈಲು ತ್ರಿಜ್ಯ (ರೇಡಿಯಸ್) ಇರುವ ಮಧ್ಯಮ ಗಾತ್ರದ ಗ್ರಹವೊಂದರಲ್ಲಿ ಸೂಕ್ಷ್ಮವಾಗಿ ನೋಡಿದರೆ ಸಿಗುವ ಧೂಳಿನ ಕಣದಷ್ಟು ಚಿಕ್ಕವರು. ನಾವೇ ಎಲ್ಲ, ನಮ್ಮಿಂದ ಎಲ್ಲ ಎನ್ನುವ ಹುಚ್ಚನ್ನು ಬಿಟ್ಟು ಇನ್ನಾದರೂ ನಮ್ಮ ಸುತ್ತಲನ್ನು ಗೌರವಿಸುವುದನ್ನು ಕಲಿಯಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಪುಕ್ಕಟೆ ಸಿಗುವ ಸಂಪನ್ಮೂಲಗಳನ್ನು ಗೌರವಿಸುವುದಷ್ಟೇ ಅಲ್ಲ, ಪೂಜಿಸಬೇಕು ಎನ್ನುವುದು ಈ ಹೊತ್ತಿನ ತತ್ವ!



# ಗಂಡ ಹೆಂಡತಿ

**ಟಿ. ಆರ್. ಮಂಜುನಾಥ,** *ಬೆಂಗಳೂರು*

**ಗಂ**ಡು, ಹೆಣ್ಣು ಇಷ್ಟಪಟ್ಟೋ, ಪ್ರೀತಿಸಿಯೋ ಇಲ್ಲ ಹಿರಿಯರ ನಿರ್ಧಾರದಂತೆಯೋ ಮದುವೆ ಆಗುತ್ತಾರೆ. ನಂತರ ಗಂಡು ಹೆಣ್ಣು ದಂಪತಿಗಳಾಗಿ ತಮ್ಮ ಸಂಸಾರ ಜೀವನವನ್ನು ಪ್ರಾರಂಭಿಸುತ್ತಾರೆ. ಇಬ್ಬರೂ ಬೆಳೆದು ಬಂದ ಸನ್ನಿವೇಶ ಬೇರೆ ಇರುತ್ತದೆ. ಇಬ್ಬರ ವ್ಯಕ್ತಿತ್ವದಲ್ಲೂ ಅಭಿರುಚಿಯಲ್ಲೂ ವ್ಯತ್ಯಾಸ ಇರಬಹುದು. ಆದರೆ ಮದುವೆಯಾದ ಒಂದೆರಡು ವರುಷ ಜೀವನದ ಹೊಸ ಅನುಭವದಲ್ಲಿ, ಉನ್ಮಾದದಲ್ಲಿ ಎಲ್ಲವೂ ಸುಂದರವಾಗಿ ಕಾಣುತ್ತದೆ. ಆದರೆ ನಂತರ ಇಬ್ಬರಿಗೂ ಇನ್ನೊಬ್ಬರ ನ್ಯೂನತೆಗಳು ಕಂಡು ಬರುತ್ತವೆ. ಸಾಕು ಪ್ರಾಣಿಗಳು, ಗಿಡಮರಗಳು, ಸುಂದರ ಪರಿಸರ, ಸ್ವಚ್ಛತೆ, ಮಾತು ಹೀಗೆ ಹತ್ತು ಹಲವು ವಿಷಯಗಳಲ್ಲಿ ಅಭಿಪ್ರಾಯ ಭೇದವಿರಬಹುದು. ಆಗ ಒಬ್ಬರು ಇನ್ನೊಬ್ಬರ ನ್ಯೂನತೆಯನ್ನು ತೆಗಳದೆ, ಹಂಗಿಸದೆ ಅನುಸರಿಸಿಕೊಂಡು ಹೋಗುವ ಪ್ರಯತ್ನ ಮಾಡಬೇಕು. ಅಂದರೆ ಪರಸ್ಪರ ಹೊಂದಾಣಿಕೆ, ಪ್ರೀತಿ ವಿಶ್ವಾಸ ಇನ್ನು ಮುಂದೆ ಬಹಳ ಮುಖ್ಯವಾಗುತ್ತದೆ. ಅದಕ್ಕೆ ಹಳ್ಳಿಯಲ್ಲಿ ಒಂದು ಗಾದೆ ಇದೆ. "ಹೆಂಡತಿ ಮಂಕರಿ, ಗಂಡ ಗುದ್ದಲಿ, ಇಬ್ಬರೂ ಸೇರಿ ಕೆಲಸಮಾಡಿ ಬೀಜ ಬಿತ್ತರೆ ಬೆಳೆ ಬರುತ್ತದೆ" ಎಂದು. ಕೆಲವರು ಹೊಂದಿಕೊಳ್ಳದೆ ತಮ್ಮ ಸಂಸಾರವನ್ನು ನರಕ ಮಾಡಿಕೊಳ್ಳಬಹುದು. ಹೆಚ್ಚಿನವರು ಹೊಂದಿಕೊಂಡು ಸುಖವಾಗಿರುತ್ತಾರೆ. ಹೊಂದಿಕೊಳ್ಳದ ಸಂಸಾರದ ಕೆಲವು ವ್ಯಂಗ್ಯ ಚಿತ್ರಗಳು ಇಲ್ಲಿವೆ.







ಕೆಲವೊಮ್ಮೆ ಯಾವುದೋ ಸಂದರ್ಭ ಬದಲಾವಣೆ ತರಬಹುದು. ಇಂತಹುದೇ ಸಂದರ್ಭ ಎಂದು ಹೇಳಲು ಆಗುವುದಿಲ್ಲ. ಬದಲಾದಾಗ ಗೊತ್ತಾಗುತ್ತದೆ. ಅಂತಹ ಒಂದು ಸನ್ನಿವೇಶದ ಕಥೆ ಇಲ್ಲಿದೆ.

ಗಂಡ ಹೆಂಡತಿ ಇಬ್ಬರೂ ಕೆಲಸಕ್ಕೆ ಹೋಗುವ ಒಂದು ಸಂಸಾರ. ಮದುವೆಯಾಗಿ 4 ವರುಷವಾಗಿತ್ತು. ಹೆಂಡತಿ ಕೆಲಸಕ್ಕೆ ಹೋಗಿ ಬಂದು ನಂತರ ಮನೆಗೆ ಬೇಕಾದ ಸಾಮಾನು ತರುವುದು, ಅಡುಗೆ ಮಾಡುವುದು, ಬಟ್ಟೆ ಒಗೆಯುವುದು, ಮನೆ ಶುಭ್ರವಾಗಿಡುವುದು, ಹೀಗೆ ಮನೆಯ ಎಲ್ಲ ಕೆಲಸಗಳನ್ನು ತಾನೇ ಶ್ರದ್ಧೆಯಿಂದ ಮಾಡುತ್ತಿದ್ದಳು. ಗಂಡನಿಗೆ ಅದು ಅವಳ ಕೆಲಸ ಎಂಬ ಭಾವನೆ. ಅವನ ಎಲ್ಲ ಕೆಲಸಗಳನ್ನು ಮದುವೆಗೆ ಮುಂಚೆ ಅವನ ತಾಯಿ ಮಾಡುತ್ತಿದ್ದಳು. ಆದರೂ ಹೆಂಡತಿಯ ಮೇಲೆ ಆಗಾಗ ಸಿಡಿಮಿಡಿಗೊಳ್ಳುವುದು, ಬೇಸರಗೊಳ್ಳುವುದು ಇತ್ತು. ಆದರೆ ಹೆಂಡತಿ ಇವಕ್ಕೆಲ್ಲಾ ಬೇಸರ ಪಡುತ್ತಿರಲಿಲ್ಲ. ಒಮ್ಮೆ ಗಂಡ ಹೆಂಡತಿಗೆ ಹೇಳಿದ 'ನಾವು ಸಂಸಾರ ನಡೆಸುತ್ತ 4 ವರ್ಷವಾಯಿತು. ನಿನಗಿಷ್ಟವಾಗುವಂತಹ ಕೆಲವು ಸಂಗತಿಗಳು ನನ್ನಲ್ಲಿವೆ. ಹಾಗೆಯೇ ನನಗಿಷ್ಟವಾಗುವಂತಹ ಕೆಲವು ಸಂಗತಿಗಳು ನಿನ್ನಲ್ಲಿವೆ. ನಾವು ಅದರ ಬಗ್ಗೆ ಪರಸ್ಪರ ಚರ್ಚಿಸೋಣ' ಎಂದ.

ಹೆಂಡತಿಗೆ ಆಶ್ಚರ್ಯವಾಯಿತು. ಆದರೂ ಅದನ್ನು ತೋರಿಸದೆ, 'ನಾವು ಚರ್ಚಿಸುವ ಮೊದಲು ಅವುಗಳ ಒಂದು ಪಟ್ಟಿ ಮಾಡೋಣ. ನೀವು ನಿಮ್ಮ ಪಟ್ಟಿ ಮಾಡಿ. ನಾನು ನನ್ನ ಪಟ್ಟಿ ಮಾಡುತ್ತೇನೆ. ಆಮೇಲೆ ಅದನ್ನು ಓದಿ ಚರ್ಚಿಸೋಣ ಹಾಗೂ ಪರಿಹಾರ ಕಂಡುಕೊಳ್ಳೋಣ.'ಎಂದಳು.

ನಂತರ ಗಂಡ ಹೆಂಡತಿ ಇಬ್ಬರೂ ಕೆಲಸಕ್ಕೆ ಹೋದರು. ಗಂಡ ಆಫೀಸಿನಲ್ಲಿ ಎಲ್ಲ ವಿಷಯಗಳ ಪಟ್ಟಿ ಮಾಡಿದ. ಅದು ಸುಮಾರು ಐದಾರು ಪುಟಗಳಷ್ಟಾಯಿತು. ಚಿಕ್ಕ ಚಿಕ್ಕ ವಿಷಯಗಳನ್ನು ಅದರಲ್ಲಿ ಬಿಡದೆ ಸೇರಿಸಿದ್ದ. ಕೆಲಸ ಮುಗಿಸಿ ಬೇಗನೆ ಮನೆಗೆ ಬಂದ.ಹೆಂಡತಿ ಸಹ ಒಂದು ಕಾಗದವನ್ನು ತನ್ನ ಪರ್ಸಿನಲ್ಲಿರಿಸಿಕೊಂಡು ಸಂಜೆ ಮನೆಗ ಬಂದಳು. ಗಂಡ ಮುಖ ತೊಳೆದು ಬಂದ ನಂತರ ಹೆಂಡತಿ ಅವನಿಗೆ ಕುಡಿಯಲು ಕಾಫಿ ಕೊಟ್ಟಳು. ನಂತರ ಗಂಡ ಬಹಳ ಉತ್ಸಾಹದಿಂದ ಹೆಂಡತಿಗೆ ಹೇಳಿದ 'ಈಗ ಓದೋಣವೇ?'



ಹೆಂಡತಿ ಹೇಳಿದಳು 'ಆಯಿತು.ಮೊದಲು ನೀವು ಬರೆದಿದ್ದನ್ನು ಓದಿ. ನಂತರ ನನ್ನ ಸರದಿ' ಎಂದಳು. ಸರಿ. ಗಂಡ ಹೆಂಡತಿಯಿಂದಾದ ಎಲ್ಲ ಚಿಕ್ಕ ಪುಟ್ಟ ತಪ್ಪುಗಳನ್ನು ಓದತೊಡಗಿದ. ನಡುನಡುವೆ ಹೆಂಡತಿ ಮುಖ ನೋಡುತ್ತಿದ್ದ.

'ಇವರು ಇದ್ಯಾವುದನ್ನು  ಮರೆತಿಲ್ಲವಲ್ಲ' ಎಂದು ಅಂದು ಕೊಂಡ ಅವಳ ಕಣ್ಣಲ್ಲಿ ನೀರು ಬಂತು. ಇನ್ನೇನು ಗಂಡನ ಪಟ್ಟಿ ಓದಿ ಮುಗಿಯಿತು ಅನ್ನುವ ಹೊತ್ತಿಗೆ ಹೆಂಡತಿ ತನ್ನ ಪರ್ಸಿನಿಂದ ಒಂದು ಕಾಗದ ತೆಗೆದಳು. ಆಗ ಗಂಡ ಹೇಳಿದ "ಈಗ ನೀನು ನಿನ್ನ ಪಟ್ಟಿಯನ್ನು ಓದು'



ಆಗ ಹೆಂಡತಿ ಹೇಳಿದಳು 'ನಾನು ಓದುವುದು ಬೇಡ. ನನ್ನ ಪತ್ರವನ್ನು ನೀವೇ ಓದಿ' ಎಂದು ಹೇಳಿ ತನ್ನ ಕಾಗದವನ್ನು ಗಂಡನಿಗೆ ಕೊಟ್ಟಳು. ಆತ ಅದನ್ನು ಬಿಡಿಸಿ ನೋಡಿದಾಗ ಅದು ಖಾಲಿಯಾಗಿತ್ತು. ಅದರಲ್ಲಿ ಏನನ್ನೂ ಬರೆದಿರಲಿಲ್ಲ. ಆತನಿಗೆ ಆಶ್ಚರ್ಯವಾಗಿ ಕೇಳಿದನು 'ಅರೆ ಇದು ಖಾಲಿ ಕಾಗದ. ನೀನು ಏನೂ ಬರದೇ ಇಲ್ಲವಲ್ಲ'

ಅದಕ್ಕೆ ಹೆಂಡತಿ ಹೇಳಿದಳು  'ಈ ಕಾಗದ ಎಷ್ಟು ಶುದ್ಧವಾಗಿದೆಯೋ ನನ್ನ ಮನಸ್ಸು ಅಷ್ಟೇ ಶುದ್ಧವಾಗಿದೆ. ನಿಮ್ಮ ಯಾವ ತಪ್ಪನ್ನು ನನ್ನ ಮನಸ್ಸಿನಲ್ಲಿ ಇಟ್ಟಿಲ್ಲ. ನಿಮ್ಮ ಎಲ್ಲ ತಕರಾರುಗಳನ್ನು ನಾನು ಪ್ರೀತಿಯಿಂದ ಸ್ವೀಕರಿಸುತ್ತಿದ್ದೆ. ಅದ್ದರಿಂದ ನನಗೆ ನಿಮ್ಮ ಬಗ್ಗೆ ಏನೂ ಬರೆಯಲಿಕ್ಕಿಲ್ಲ.' ಇದನ್ನು ಕೇಳಿದ ಗಂಡನಿಗೆ  ಆಘಾತವಾಯಿತು.

ಆಗ ಹೆಂಡತಿ 'ನಾನು ಈ ಮನೆಗೆ ಬಂದ ನಂತರ ಆಫೀಸಿನ ಕೆಲಸದ ಜೊತೆಗೆ ಮನೆಯ ಎಲ್ಲ ಕೆಲಸಗಳನ್ನು ಮಾಡಿ ನಿಮ್ಮ ಎಲ್ಲ ಬೇಕು-ಬೇಡಗಳನ್ನು ಪೂರೈಸುತ್ತಿದ್ದೇನೆ. ಇದಕ್ಕಾಗಿ ನಿಮ್ಮಿಂದ ಯಾವ ಸಹಾಯವನ್ನು ಪಡೆಯುತ್ತಿಲ್ಲ. ಜೊತೆಗೆ ಎಲ್ಲ ಖರ್ಚನ್ನು ನನ್ನ ಸಂಬಳದಿಂದ ನಿಭಾಯಿಸುತ್ತಿದ್ದೇನೆ. ಸಂಸಾರ ಹೇಗೆ ನಡೆಯುತ್ತಿದೆ ಎಂಬ ಕಲ್ಪನೆಯೂ ನಿಮಗಿದ್ದಂತಿಲ್ಲ. ಅದು ನೀವು ನಿಮ್ಮ ತಾಯಿಯ ಮುದ್ದಿನ ಮಗನಾಗಿ ಬೆಳೆದದ್ದರಿಂದ ಆದುದು. ಅದು ನಿಮ್ಮ ಅಥವಾ ನಿಮ್ಮ ತಾಯಿಯ ತಪ್ಪಲ್ಲ. ಎಲ್ಲ ತಾಯಂದಿರು ತಮ್ಮ ಗಂಡು ಮಕ್ಕಳನ್ನು ಸಾಕುವುದೇ ಹೀಗೆ. ಅದಕ್ಕೆ ನನ್ನ ತಾಯಿಯೂ ಹೊರತಲ್ಲ. ಅದರ ಕಲ್ಪನೆ ನನಗಿತ್ತು. ಆದ್ದರಿಂದ ಅದನ್ನು ತೂಗಿಸಿಕೊಂಡು ಹೋಗುತ್ತಿದ್ದೇನೆ.  ನನಗೆ ನನ್ನ ತಾಯಿ ಕೊಟ್ಟ ತರಬೇತಿ ಇದು' ಎಂದು ಹೇಳಿದಳು

ಆಗ ಗಂಡನಿಗೆ ತನ್ನ ತಪ್ಪಿನ ಅರಿವಾಗಿ, ತನ್ನ ವರ್ತನೆ ಬಗ್ಗೆ ಬಹಳ ಬೇಸರವಾಯಿತು. ಅವನು ಹೆಂಡತಿಯನ್ನು ಬಿಗಿದಪ್ಪಿಕೊಂಡು ಹೇಳಿದ 'ನನ್ನನ್ನು ಕ್ಷಮಿಸು. ನಿನ್ನ ದೊಡ್ಡತನ ನನಗೆ ತಿಳಿಯಲಿಲ್ಲ. ನನ್ನ ಕಣ್ಣು ತೆರೆಸಿದ ದೇವತೆ ನೀನು. ಇನ್ನು ಮುಂದೆ ನಿನಗೆ ಸಹಾಯಕನಾಗಿ ನಿನ್ನಂತೆ ಇರಲು ಪ್ರಯತ್ನಿಸುತ್ತೇನೆ'.



ಈ ಕಥೆ ಓದಿ ತಪ್ಪು ಗಂಡಸರು ಮಾತ್ರ ಮಾಡುತ್ತಾರೆಂದು ತೀರ್ಮಾನಕ್ಕೆ ಬರಬೇಡಿ.  ಹೆಂಗಸರು ಮಾಡುತ್ತಾರೆ. ಗಂಡನನ್ನು ಹೀಯಾಳೀಸುವುದು, ಗಂಡನಿಗೆ ಬಯ್ಯುವುದು, ಗಂಡನ ಮೇಲೆ ದಬ್ಬಾಳಿಕೆ ನಡೆಸುವುದು, ಅನಾವಶ್ಯಕವಾಗಿ ಗಂಡನನ್ನು ಅನುಮಾನಿಸುವುದು ಎಷ್ಟೋ ಮನೆಗಳಲ್ಲಿ ನಡೆಯುತ್ತಿರುತ್ತದೆ. ಅವರೆಲ್ಲ ಒಮ್ಮೆ ತಾನು ಯಾರನ್ನು ಹೀಯಾಳಿಸುತ್ತಿದ್ದೀನಿ, ಬಯ್ಯುತಿದ್ದೀನಿ, ಯಾರ ಮೇಲೆ ದಬ್ಬಾಳಿಕೆ ನಡೆಸುತ್ತಿದ್ದೀನಿ, ಯಾರನ್ನು ಅನುಮಾನಿಸುತ್ತಿದ್ದೀನಿ ಎಂದು ಯೋಚಿಸಿದರೆ, ಅದು ಅವರ ಸಂಸಾರದ ಸದಸ್ಯರನ್ನೆ.  ಇದರಿಂದ ಯಾವ ಪ್ರಯೋಜನವೂ ಇಲ್ಲ. ಬೇರೆಯವರು ನಿಮ್ಮ ಸಂಸಾರವನ್ನು ಹಿಂದಿನಿಂದ ಅಪಹಾಸ್ಯಮಾಡಲು ಅವಕಾಶ ಮಾಡಿಕೊಡುತ್ತೀರಿ.

ಇನ್ನು ತನ್ನ ಮಗಳು ಅಳಿಯನನ್ನು ಗುಲಾಮನಾಗಿಡಬೇಕು ಹಾಗೂ ಮಗ ಹೆಂಡತಿಯನ್ನು ಗುಲಾಮಳಂತಿಡಬೇಕು ಎಂದು ಬಯಸುವ ತಂದೆ-ತಾಯಿಯರು ಇರುವವರೆಗೆ ಈ ತರಹದ ಘಟನೆಗಳು ನಡೆಯುತ್ತವೆ. ಇದು ತಪ್ಪು.  ಮದುವೆಯಾದ ಹೆಣ್ಣು ಗಂಡು ತಮ್ಮ ಸಂಸಾರವನ್ನು ತಾವೇ ರೂಪಿಸಿ ಕೊಳ್ಳಬೇಕು. ಇಲ್ಲಿ ಗಂಡ ಹೆಂಡತಿ, ಯಾರಿಗೆ ಯಾರೂ ಗುಲಾಮರಲ್ಲ. ಒಬ್ಬರು ಇನ್ನೊಬ್ಬರನ್ನು ಗೌರವಿಸಬೇಕು. ಪ್ರೀತಿಸಬೇಕು. ಸಹಕರಿಸಬೇಕು. ಆಗಲೇ ಅವರ ಸಂಸಾರ ಸುಖಮಯವಾಗುವುದು. ಯಾರೂ ಸರ್ವ ಸಮರ್ಥರಲ್ಲ. ಅದು ಭಗವಂತನಿಗೆ ಮಾತ್ರ ಸಾಧ್ಯ. ಇದನ್ನು ಎಲ್ಲರೂ ಅರಿತಿರಬೇಕು.

ಮನೆ ಸ್ವರ್ಗವಾಗಬೇಕಾದರೆ ಮನೆಯವರೆಲ್ಲರೂ ಪ್ರೀತಿ ವಿಶ್ವಾಸದಿಂದಿರಬೇಕು. ಅರಿತು ನಡೆವ ಸತಿಯಿರೆ ಸ್ವರ್ಗಕ್ಕೆ ಕಿಚ್ಚು ಹಚ್ಚೆಂದು ಸರ್ವಜ್ಞ ಹೇಳಿದ. ಆದರೆ ಈ ಕಾಲಕ್ಕೆ ಅರಿತು ನಡೆವ ಸತಿಪತಿಯಿರೆ ಸ್ವರ್ಗಕ್ಕೆ ಕಿಚ್ಚು ಹಚ್ಚಬಹುದು. ಸಂಸಾರವೆಂಬ ಹೊಲದಲ್ಲಿ ಮನಸ್ತಾಪವೆಂಬ ಕೊಳೆ ಬೆಳೆಯುತ್ತಿರುತ್ತದೆ. ಅದನ್ನು ಆಗಿಂದಾಗಲೇ ಕಿತ್ತು ಉತ್ತಮ ಭಾಂದವ್ಯ ಬೆಳೆಸಿಕೊಂಡರೆ ಎಲ್ಲವೂ ಸುಗಮವಾಗುತ್ತದೆ. ಮನೆ ನಂದಗೋಕುಲವಾಗುತ್ತದೆ. ನಮ್ಮ ಸಂಸಾರ ಆನಂದ ಸಾಗರ ಎಂಬ ಕನ್ನಡದ ಸಿನಿಮಾ ಹಾಡೊಂದಿದೆ. ಅದು ಬರೀ ಸಿನಿಮಾ ಹಾಡಾಗಬಾರದು. ಎಲ್ಲರ ಸಂಸಾರದ ಭಾಗವಾಗಬೇಕು.



# ಜೀವದುಸಿರು ಹುಸಿ ಗಾಳಿಯಾದಾಗ (ಮುಂದುವರೆದ ಭಾಗ)

**ಅನುವಾದ: ದಾಶರಥಿ ಘಟ್ಟು**     **ಮೂಲ: ಪಾಲ್ ಕಲಾನಿಧಿ** (When Breath Becomes Air)

**ನಾ**ವು ಅದರ ಮುಂದಿನ ವಾರ ನ್ಯೂಯಾರ್ಕ್‌ಗೆ ಹೋಗಿ ನಮ್ಮ ಹಳೆಯ ಗೆಳೆಯರ ಜೊತೆ ಕೆಲವು ದಿನ ಇದ್ದುಬರುವ ಯೋಜನೆ ಹಾಕಿಕೊಂಡಿದ್ದೆವು. ಗೆಳೆಯರೊಂದಿಗೆ ವಿರಾಮವಾಗಿ ಒಂದೆರಡು ಡ್ರಿಂಕ್ ಹಾಕಿ, ನಿರಾಳವಾಗಿ ನಿದ್ದೆ ಮಾಡಿದರೆ ನಮ್ಮ ವೈವಾಹಿಕ ಜೀವನದ ಪ್ರೆಷರ್ ಕುಕ್ಕರಿನ ಒತ್ತಡ ಸ್ವಲ್ಪವಾದರೂ ಕಡಿಮೆಯಾಗಬಹುದು ಎಂದು ನಾನು ಎಣಿಸಿದ್ದೆ.

ಆದರೆ ಲೂಸಿ ಬೇರೆಯದೇ ಪ್ಲಾನ್ ಮಾಡಿದ್ದಳು. ನ್ಯೂಯಾರ್ಕ್‌ಗೆ ಹೊರಡುವ ಕೆಲವು ದಿನಗಳ ಮುಂಚೆ, "ನಾನು ನಿನ್ನ ಜೊತೆ ನ್ಯೂಯಾರ್ಕ್‌ಗೆ ಬರುವುದಿಲ್ಲ" ಎಂದು ಅವಳು ಹೇಳಿದಳು. ಒಂದು ವಾರ ತಾನೊಬ್ಬಳೇ ಎಲ್ಲಿಗಾದರೂ ಹೋಗಲು ಅವಳು ನಿರ್ಧರಿಸಿದ್ದಳು. ನಮ್ಮ ವೈವಾಹಿಕ ಸ್ಥಿತಿಯ ಬಗ್ಗೆ ಯೋಚಿಸಲು ಅವಳಿಗೆ ಸಮಯ ಬೇಕಿತ್ತು. ಅವಳು ಅದರ ಬಗ್ಗೆ ತಣ್ಣನೆಯ ದನಿಯಲ್ಲಿ ಮಾತನಾಡಿದಾಗ, ನನ್ನ ತಲೆ ನೋವು ಇನ್ನೂ ಹೆಚ್ಚಿತು.

"ಏನು? ನೀನು ಬರುವುದಿಲ್ಲವೇ? ಇದು ಸಾಧ್ಯವಿಲ್ಲ." ಎಂದು ನಾನು ಹೇಳಿದೆ.

ಲೂಸಿ ಹೇಳಿದಳು, "ನಾನು ನಿನ್ನನ್ನು ತುಂಬಾ ಪ್ರೀತಿಸುತ್ತೇನೆ. ಆದುದರಿಂದಲೇ ಈ ವಿಷಯ ಇಷ್ಟು ಗೊಂದಲಮಯವಾಗಿದೆ. ನಮ್ಮ ಈ ಸಂಬಂಧದಲ್ಲಿ ನಾವು ಏನನ್ನು ಬಯಸುತ್ತಿದ್ದೇವೆ ಎಂಬುದು ತಿಳಿಯುತ್ತಿಲ್ಲ. ನಮ್ಮಿಬ್ಬರ ಹೊಂದಾಣಿಕೆ ಅರ್ಧಂಬರ್ಧ ಮಾತ್ರ ಎಂದು ನನಗೆ ಚಿಂತೆಯಾಗಿದೆ. ನಿನಗೇನಾಗುತ್ತಿದೆ ಎಂದು ನೀನು ಹೇಳುವುದೇ ಇಲ್ಲ. ನಿನ್ನ ಆತಂಕ ಮತ್ತು ತೊಂದರೆಗಳನ್ನು ಆಕಸ್ಮಿಕವಾಗಿ ತಿಳಿದುಕೊಳ್ಳುವುದು ನನಗೆ ಬೇಡ. ನಾನು ಏಕಾಂಗಿ ಎಂಬ ಭಾವನೆ ನನಗೆ ಬರುತ್ತಿದೆ ಎಂದು ನಿನಗೆ ಹೇಳಿದರೆ, ಅದನ್ನು ಒಂದು ಸಮಸ್ಯೆ ಎಂದೇ ನೀನು ಪರಿಗಣಿಸುತ್ತಿಲ್ಲ. ಈ ಸಂದರ್ಭದಲ್ಲಿ ನಾನು ಏನನ್ನಾದರೂ ಬೇರೆ ಮಾಡಬೇಕು."

"ಎಲ್ಲಾ ಸರಿಹೋಗುತ್ತದೆ. ಈ ರೆಸಿಡೆನ್ಸಿ ಮುಗಿಯಲಿ" ಎಂದು ನಾನು ಹೇಳಿದೆ.

ಪರಿಸ್ಥಿತಿ ನಿಜವಾಗಿಯೂ ಇಷ್ಟು ಹದಗೆಟ್ಟಿದೆಯಾ? ವೈದ್ಯಕೀಯ ಪರಿಣಿತಿಗಳಲ್ಲೆಲ್ಲಾ ಅತಿ ಹೆಚ್ಚು ಶ್ರಮ ಮತ್ತು ಸಮಯದ ಅಗತ್ಯವಿರುವ ನ್ಯೂರೊಸರ್ಜಿಕಲ್ ತರಬೇತಿ ನಮ್ಮ ವೈವಾಹಿಕ ಜೀವನದ ಮೇಲೆ ಒತ್ತಡ ಬೀರಿರುವುದಂತೂ ನಿಜ. ಎಷ್ಟೋ ರಾತ್ರಿಗಳು ನಾನು ತಡವಾಗಿ, ಲೂಸಿ ಮಲಗಿ ನಿದ್ದೆ ಹೋದ ಮೇಲೆ ಬಂದು, ದಣಿವಿನಿಂದ ಹಜಾರದ ಸೋಫಾ ಮೇಲೆ ಕುಸಿದು ನಿದ್ದೆಹೋಗಿದ್ದೇನೆ. ಎಷ್ಟೋ ಮುಂಜಾನೆ, ಇನ್ನೂ ಕತ್ತಲು ಕವಿದಿರುವಾಗಲೇ, ಲೂಸಿ ನಿದ್ದೆಯಿಂದ ಏಳುವ ಮೊದಲೇ, ನನ್ನ ಕೆಲಸಕ್ಕೆ ಹೊರಟು ಹೋಗಿದ್ದೇನೆ. ನಮ್ಮ ವೃತ್ತಿ ಜೀವನದ ಮಹತ್ವದ ಘಳಿಗೆಗಳು ಈಗತಾನೇ ಪ್ರಾರಂಭವಾಗುತ್ತಿವೆ. ಬಹಳಷ್ಟು ವಿಶ್ವವಿದ್ಯಾಲಯಗಳು ಕೆಲಸ ಮಾಡಲು ನಮ್ಮಿಬ್ಬರನ್ನೂ ಕರೆಯುತ್ತಿವೆ - ನನ್ನನ್ನು ನ್ಯೂರೊಸರ್ಜರಿಗೆ ಮತ್ತು ಲೂಸಿಯನ್ನು ಇಂಟರ್ನಲ್ ಮೆಡಿಸನ್ಗೆ. ನಾವು ನಮ್ಮ ಬದುಕಿನ ಪ್ರಯಾಣದ ಅತ್ಯಂತ ಕಠಿಣ ದಾರಿಯನ್ನು ಈಗಾಗಲೇ ಕ್ರಮಿಸಿದ್ದೇವೆ. ಈ ವಿಷಯವನ್ನು ಹತ್ತಾರು ಬಾರಿ ನಾವು ಚರ್ಚಿಸಿಲ್ಲವೇ? ಇದ್ದಕ್ಕಿದ್ದಂತೆ ಎಲ್ಲವನ್ನೂ ಬಿಟ್ಟು ಕೈಚೆಲ್ಲಿ ಹೊರಟು ಹೋಗುವ ಸಮಯ ಇದಲ್ಲ ಎಂದು ಅವಳಿಗೆ ಅರಿವಿಲ್ಲವೇ? ನನ್ನ ರೆಸಿಡೆನ್ಸಿ ಇನ್ನೊಂದು ವರ್ಷದಲ್ಲಿ ಮುಗಿಯುತ್ತದೆ, ನಾನು ಅವಳನ್ನು ತುಂಬಾ ಪ್ರೀತಿಸುತ್ತೇನೆ ಮತ್ತು ನಮ್ಮ ಕನಸಿನ ಜೀವನ ನನಸಾಗಲು ಇನ್ನು ಹೆಚ್ಚು ಸಮಯಬೇಕಾಗಿಲ್ಲ ಎಂದು ಅವಳಿಗೆ ಗೊತ್ತಿಲ್ಲವೇ?

"ಸಮಸ್ಯೆ ಬರೀ ರೆಸಿಡೆನ್ಸಿ ಎನ್ನುವುದಾದರೆ ನಾನು ಹೇಗೋ ಸಂಭಾಳಿಸಬಲ್ಲೆ" ಅವಳು ಹೇಳಿದಳು. "ನಾವಿಬ್ಬರೂ ಇಷ್ಟು ದೂರ ಬಂದಂತೂ ಆಗಿದೆ. ಆದರೆ ಈ ಸಮಸ್ಯೆ ಬರೀ 'ರೆಸಿಡೆನ್ಸಿ' ಆಗಿಲ್ಲದಿದ್ದರೆ ಮುಂದೇನು? ನೀನು ನ್ಯೂರೊಸರ್ಜರಿಯ ಅಧ್ಯಾಪಕನಾದ ಮೇಲೆ ಪರಿಸ್ಥಿತಿ ಸುಧಾರಿಸುತ್ತದೆಂದು ನಿನಗನ್ನಿಸುತ್ತದೆಯಾ?"

ನಾನು ನ್ಯೂಯಾರ್ಕ್ ಪ್ರಯಾಣವನ್ನು ರದ್ದು ಮಾಡುತ್ತೇನೆಂದೆ. ಕೆಲವು ತಿಂಗಳುಗಳ ಹಿಂದೆ ಅವಳು ಹೇಳಿದ್ದ ಥೆರಪಿಸ್ಟನ್ನು ಹೋಗಿ ನೋಡೋಣ ಎಂದು ಹೇಳಿದೆ. ಆದರೆ ಅವಳು ನನಗೆ ಏಕಾಂತವಾಗಿ ಸಮಯ ಬೇಕು ಎಂದು ಆಗ್ರಹ ಮಾಡಿದಳು. ಆ ಘಳಿಗೆಯಲ್ಲಿ ನನ್ನ ಗೊಂದಲ ಮತ್ತು ಅಸ್ಪಷ್ಟತೆ ಚದುರಿ ಹೋಗಿ ನಮ್ಮ ಬಾಳ ಪಯಣದ ದಾರಿಯಲ್ಲಿ ಬಿದ್ದ ದೊಡ್ಡ ಬಂಡೆ ಮಾತ್ರ ಕಾಣಿಸಿತು. ಆಯಿತು, ಅವಳು ನನ್ನನ್ನು ಬಿಟ್ಟು ಹೋಗುತ್ತೇನೆಂದರೆ ಈ ಸಂಬಂಧ ಮುಗಿಯಿತು ಎಂದುಕೊಳ್ಳುತ್ತೇನೆ. ನನಗೆ ಕ್ಯಾನ್ಸರ್ ಆಗಿದೆ ಎಂದು ಸಿದ್ಧವಾದರೂ ನಾನು ಅವಳಿಗೆ ಅದನ್ನು ಹೇಳುವುದಿಲ್ಲ. ಅವಳಿಗೆ ಬೇಕಾದ ಬದುಕನ್ನು ಅವಳು ಆರಿಸಿಕೊಳ್ಳಲಿ.

ಚಿಕ್ಕ ವಯಸ್ಸಿನಲ್ಲಿ ಸಾಮಾನ್ಯವಾಗಿ ಬರುವ ಕೆಲವು ಕ್ಯಾನ್ಸರ್‌ಗಳ ಸಂಭಾವ್ಯತೆಯನ್ನು ತೊಡೆದು ಹಾಕಲು, ನ್ಯೂಯಾರ್ಕ್ ಪ್ರಯಾಣದ ಮುಂಚೆ, ನಾನು ಕೆಲವು ಪರೀಕ್ಷೆಗಳನ್ನು ಮಾಡಿಸಿದೆ. (ಟೆಸ್ಟಿಕ್ಯುಲಾರ್? ಇಲ್ಲ. ಮೆಲನೋಮಾ? ಇಲ್ಲ. ಲ್ಯೂಕೆಮಿಯಾ? ಇಲ್ಲ). ಯಾವಾಗಲೂ ಇರುವಂತೆ ನ್ಯೂರೊಸರ್ಜಿಕಲ್ ಕೆಲಸ ಅವಿಶ್ರಾಂತವಾಗಿತ್ತು. ಗುರುವಾರ ಕೆಲಸಕ್ಕೆ ಹೋದ ನಾನು ಸಂಕೀರ್ಣ ಶಸ್ತ್ರಚಿಕಿತ್ಸೆಗಳನ್ನು ಮಾಡುವುದರಲ್ಲಿ ನಿರತನಾಗಿ, ಶುಕ್ರವಾರಕ್ಕೆ ಜಾರಿದೆ. ನೇರ 36 ಗಂಟೆಗಳ ಅವಿರತ ದುಡಿಮೆ - ದೈತ್ಯವಾಗಿ ಬೆಳೆದ ಅನ್ಯೂರಿಸಂ, ಸೆರೆಬ್ರಲ್ ಆರ್ಟರಿಯಲ್ ಬೈಪಾಸ್, ಆರ್ಟರಿಯೋವಿನಸ್‌ನ ಅಸಮರ್ಪಕ ಕ್ರಿಯೆ-ನಿರಾಳವಾಗಿ ಉಸಿರಾಡಲೂ ಸಮಯವಿರಲಿಲ್ಲ. ಅಲ್ಲಿನ ಡ್ಯೂಟಿ ಡಾಕ್ಟರ್ ಬಂದಾಗ ನಾನು ಕೆಲವು ನಿಮಿಷ

ನನ್ನ ನೋಯುತ್ತಿದ್ದ ಬೆನ್ನನ್ನು ಗೋಡೆಗೊತ್ತಿ ಸುಧಾರಿಸಿಕೊಂಡೆ. ಅವನಿಗೆ ಮನಸ್ಸಿನಲ್ಲೇ ವಂದಿಸಿದೆ.



ನನ್ನ ಎದೆಯ ಎಕ್ಸ್ ರೇ ತೆಗೆಸಿಕೊಳ್ಳಲು ನನಗಿದ್ದ ಒಂದೇ ಅವಕಾಶವೆಂದರೆ, ಅಂದು ನಾನು ಏರ್ಪೋರ್ಟ್‌ಗೆ ಹೋಗುವ ಮುಂಚೆ ಮನೆಗೆ ಹೋಗುವಾಗಿನ ಸಮಯ. ನಾನು ಅಂದುಕೊಂಡೆ- ಇಲ್ಲಾ ನನಗೆ ಕ್ಯಾನ್ಸರ್ ಆಗಿದೆ ಎಂದಾದರೆ ಇದು ಕೊನೆಯ ಸಲ ನನ್ನ ಗೆಳೆಯರನ್ನು ನೋಡುವುದು; ಅಥವಾ ಆಗಿಲ್ಲದಿದ್ದರೆ ನನ್ನ ನ್ಯೂಯಾರ್ಕ್ ಪ್ರಯಾಣ ರದ್ದು ಮಾಡಲು ಕಾರಣವೇ ಇಲ್ಲ.

ನನ್ನ ಬ್ಯಾಗುಗಳನ್ನು ತೆಗೆದುಕೊಳ್ಳಲು ನಾನು ಮನೆಗೆ ಧಾವಿಸಿದೆ. ಲೂಸಿ ನನ್ನನ್ನು ಏರ್ಪೋರ್ಟ್‌ಗೆ ಬಿಟ್ಟಳು. ನಮ್ಮ ಥೆರಪಿಗೆ ಕಾಲ ನಿಗದಿ ಮಾಡಿರುವುದಾಗಿ ಹೇಳಿದಳು.

ಸೆಕ್ಯೂರಿಟಿ ಗೇಟಿನಿಂದ ನಾನು ಲೂಸಿಗೆ ಸಂದೇಶ ಕಳಿಸಿದೆ, "ನೀನು ನನ್ನ ಜೊತೆ ಇದ್ದಿದ್ದರೆ ತುಂಬಾ ಚೆನ್ನಾಗಿರುತ್ತಿತ್ತು."

ಕೆಲವು ನಿಮಿಷಗಳ ನಂತರ ಅವಳಿಂದ ಸಂದೇಶ ಬಂತು-"ಐ ಲವ್ ಯೂ". ನೀನು ಹಿಂತಿರುಗಿ ಬರುವಷ್ಟರಲ್ಲಿ ನಾನು ಮನೆಯಲ್ಲಿರುತ್ತೇನೆ.

ವಿಮಾನಯಾನದಲ್ಲಿ ನನ್ನ ಬೆನ್ನು ವಿಪರೀತ ಸೆಟೆದುಕೊಂಡಿತು. ನನ್ನ ಗೆಳೆಯರ ಮನೆಯಿದ್ದ ಅಪ್ ಸ್ಟೇಟ್ ನ್ಯೂಯಾರ್ಕ್‌ಗೆ ರೈಲು ಹಿಡಿಯಲು ನಾನು ಗ್ರಾಂಡ್ ಸೆಂಟ್ರಲ್ ಸೇರುವಷ್ಟರಲ್ಲಿ ತೀವ್ರ ನೋವಿನಿಂದ ನನ್ನ ಶರೀರ ತೊಯ್ದಾಡುತ್ತಿತ್ತು. ಕಳೆದ ಕೆಲವು ವಾರಗಳಿಂದ ಬೇರೆ ಬೇರೆ ಮಟ್ಟದ ತೀವ್ರತೆಯಲ್ಲಿ ನನ್ನ ಬೆನ್ನ ಸೆಳೆತ ನನ್ನನ್ನು ಬಾಧಿಸುತ್ತಿದೆ. ಕಂಡೂ ಕಾಣದ ನೋವಿನಿಂದ, ನಾನು ಮಾತು ನಿಲ್ಲಿಸಿ ದವಡೆ ಕಚ್ಚಿ ಒದ್ದಾಡಿದ್ದೇನೆ. ಕೆಲವೊಮ್ಮೆ ನೋವಿನ ಸೆಳೆತ ಎಷ್ಟಿರುತ್ತದೆಂದರೆ, ನೋವು ತಡೆಯಲಾರದೇ ನೆಲದ ಮೇಲೆ ಹೊರಳಾಡಿ ಜೋರಾಗಿ ಅತ್ತಿದ್ದೇನೆ. ದಿನೇ ದಿನೇ ಈ ನೋವು ತೀವ್ರತೆಯ ಪಟ್ಟಿಯಲ್ಲಿ ಮೇಲಕ್ಕೆ ಸಾಗುತ್ತಿದೆ. ಬೆನ್ನನ್ನು ಗಡುಸಾದ ಬೆಂಚಿನ ಮೇಲೆ ಚೆಲ್ಲಿದರೆ ಸ್ವಲ್ಪವಾದರೂ ಹಾಯಾಗುತ್ತೇನೋ ಎಂದು, ರೈಲು ನಿಲ್ದಾಣದ ವಿಶ್ರಾಂತಿ ಕೋಣೆಯಲ್ಲಿದ್ದ ಮರದ ಬೆಂಚಿನ ಮೇಲೆ ನಾನು ಅಂಗಾತ ಮಲಗಿಕೊಂಡೆ. ನೋವನ್ನು ತಡೆದುಕೊಳ್ಳುವ ಸಲುವಾಗಿ ಕಣ್ಣುಮುಚ್ಚಿ ಪ್ರಾಣಾಯಾಮವನ್ನು ಮಾಡಲು ಪ್ರಯತ್ನಿಸಿದೆ. ನಾನು ತೆಗೆದುಕೊಂಡ ಐಬುಪ್ರೊಫೇನ್ ಮಾತ್ರೆಗೆ ನೋವಿನ ಹೊರ ಪದರವನ್ನೂ ಮುಟ್ಟಲಾಗಿರಲಿಲ್ಲ. ಕಣ್ಣೀರನ್ನು ತಡೆದುಕೊಳ್ಳಲು ನೋವಿನಿಂದ ತುಡಿಯುತ್ತಿದ್ದ ಪ್ರತಿ ಮಾಂಸಖಂಡದ ಹೆಸರನ್ನು ಮನಸಿನಲ್ಲೇ ಹೇಳಿಕೊಳ್ಳತೊಡಗಿದೆ - ಎರೆಕ್ಟರ್ ಸ್ಪೈನ್, ರೋಮ್ಬ್ಬಾಯ್ಡ್, ಲಾಟಿಸ್ಸಿಮಸ್, ಪೈರಿಫಾರ್ಮಿಸ್...

ರೈಲು ನಿಲ್ದಾಣದ ಭದ್ರತಾ ಸಿಬ್ಬಂದಿ ನನ್ನ ಬಳಿ ಬಂದು, "ಸರ್, ನೀವಿಲ್ಲಿ ಅಡ್ಡಾಗಲು ಸಾಧ್ಯವಿಲ್ಲ. ದಯವಿಟ್ಟು ಎದ್ದು ಕುಳಿತುಕೊಳ್ಳಿ" ಎಂದ.
ಉಸಿರುಗಟ್ಟುತ್ತಾ ಕಷ್ಟಪಟ್ಟು ನಾನು ಹೇಳಿದೆ, "ನನ್ನನ್ನು ಕ್ಷಮಿಸಿ. ತುಂಬಾ.... ಕೆಟ್ಟ.... ಬೆನ್ನು ಸೆಳೆತ..."
"ಏನೇ ಇರಲಿ. ನೀವು ಇಲ್ಲಿ ಮಲಗಿಕೊಳ್ಳಲು ಸಾಧ್ಯವಿಲ್ಲ ಸರ್"

"ನನ್ನನ್ನು ಕ್ಷಮಿಸಿ, ಆದರೆ ನಾನು ಕ್ಯಾನ್ಸರ್ ನಿಂದ ಸಾಯುತ್ತಿದ್ದೇನೆ."



ಆ ಮಾತುಗಳು ನನ್ನ ನಾಲಿಗೆಯ ಮೇಲೆ ಹರಿದಾಡಿ, ಕಿವಿಗಳಲ್ಲಿ ರಿಂಗಣಿಸಿತು. ನನಗೆ ಬಹುಶಃ ಹಾಗೆ ಆಗಿಲ್ಲದಿದ್ದರೆ? ಬೆನ್ನು ನೋವಿನಿಂದ ನರಳುವ ಎಲ್ಲರಿಗೂ ಇದೆ ರೀತಿ ತಡೆದುಕೊಳ್ಳಲಾಗದಷ್ಟು ಸೆಳೆತ ಬರಬಹುದು. ನನಗೇ ಬೇಕಾದಷ್ಟು ರೀತಿಯ ಬೆನ್ನು ನೋವುಗಳು ಗೊತ್ತು- ಅಂಗರಚನೆಯೇ ಹಾಗಿರಬಹುದು, ಶರೀರದ ಸ್ಥಿತಿ ಅಷ್ಟು ದುಸ್ಥಿತಿಗೆ ಇಳಿದಿರಬಹುದು. ಒಬ್ಬೊಬ್ಬ ಬೆನ್ನು ನೋವಿನ ರೋಗಿಯೂ ಬೇರೆ ಬೇರೆ ರೀತಿಯ ನೋವನ್ನು ವಿವರಿಸುತ್ತಾನೆ. ಅದು ಹೇಗಿರುತ್ತದೆಂದು ನನಗೆ ಗೊತ್ತಿಲ್ಲ. ಬಹುಶಃ ಆ ಬೆನ್ನು ನೋವುಗಳೂ ಹೀಗೇ ಇರಬಹುದು. ಅಥವಾ ಆ ಮಾರಿ ನನಗೇ ವಕ್ಕರಿಸಿಕೊಳ್ಳುವುದು ಬೇಡಾಗಿರಬಹುದು. ಬಹುಶಃ "ಕ್ಯಾನ್ಸರ್" ಎಂಬ ಪದವನ್ನು ಜೋರಾಗಿ ಹೇಳುವುದು ನನಗೆ ಇಷ್ಟವಿಲ್ಲದಿರಬಹುದು.

ನನ್ನ ಎಲ್ಲಾ ಶಕ್ತಿಯನ್ನೂ ಒಟ್ಟು ಮಾಡಿಕೊಂಡು ನಾನು ತೂರಾಡುತ್ತಾ ಪ್ಲಾಟ್ ಫಾರಂಗೆ ಹೋದೆ.

(ಮುಂದುವರೆಯುವುದು......)

# ಗಣೇಶೋತ್ಸವ ಅಕ್ಕ ತಂಗಿಯರ ಕುಟುಂಬದೊಂದಿಗೆ..

ವಿದ್ಯಾ ಮೂರ್ತಿ , ನ್ಯೂ ಜರ್ಸಿ

**ಕೋ**ವಿಡ್ ಪರಿಸ್ಥಿತಿ ಸ್ವಲ್ಪ ಸುಧಾರಿಸಿದ ಕಾರಣ ಬೃಂದಾವನ ಕನ್ನಡ ಕೂಟದ ಅಧ್ಯಕ್ಷೆ ಶ್ರೀಮತಿ ಪದ್ಮಿನಿ ಹೇಮಂತ್ ಅವರು, ತಮ್ಮ ಪ್ರಗತಿ ತಂಡದ ಸಲಹೆಯಂತೆ, ಈ ವರ್ಷದ ಗಣೇಶೋತ್ಸವವನ್ನು ಸೆಪ್ಟೆಂಬರ್ 25ನೇ ತಾರೀಖು ಹೊರಾಂಗಣದಲ್ಲಿ ಮಾಡುವ ಯೋಜನೆಯನ್ನು ಮಾಡಿಕೊಂಡಿದ್ದರು. ಅದಕ್ಕೆ ಮುಂಚಿತವಾಗಿ ಬರುವ ಗಣೇಶನ ಹಬ್ಬಕ್ಕೆ, ಬೃಂದಾವನ ತನ್ನ ಸದಸ್ಯರು ತಮ್ಮ ತಮ್ಮ ಮನೆಗಳಲ್ಲೇ ಗಣೇಶನನ್ನು ಮಾಡುವ DYOG(Do Your Own ಗಣೇಶ) ವಿನೋದದ ವರ್ಕ್‌ಶಾಪ್ ಒಂದನ್ನು ನಡೆಸಿ ಯೂಟ್ಯೂಬಿನಲ್ಲಿ ಮತ್ತು ಫೇಸ್ಬುಕ್‌ನಲ್ಲಿ ನೇರಪ್ರಸಾರ ಮಾಡಿತು. ಸುಮಾರು ಒಂದು ತಿಂಗಳ ಹಿಂದೆಯೇ ಈ ವರ್ಕ್‌ಶಾಪಿಗೆ ರಿಜಿಸ್ಟರ್ ಮಾಡಿಕೊಂಡಿದ್ದ ಸದಸ್ಯರು ಗಣೇಶನ ಮೂರ್ತಿಯನ್ನು ಮಾಡಲು ಬೇಕಾಗುವ ಜೇಡಿಮಣ್ಣು ಮತ್ತು ಇತರ ವಸ್ತುಗಳನ್ನು ಮುಂಚಿತವಾಗಿಯೇ ಖರೀದಿಸಿ, ವರ್ಕ್‌ಶಾಪಿಗೆ ತಯಾರಾದರು. ಸೆಪ್ಟೆಂಬರ್ 7ರ ಸಂಜೆ, 7 ಗಂಟೆಗೆ ಕರಕುಶಲ ಕಲೆಯಲ್ಲಿ ಪರಿಣಿತರಾದ, ಬೃಂದಾವನದ ಸದಸ್ಯ ಶ್ರೀ ರಘುರಾಮ್ ರಾಯಸಮ್ ಅವರ ನೇತೃತ್ವದಲ್ಲಿ ಈ ಕಾರ್ಯಾಗಾರ ನಡೆಸಲಾಯಿತು. ಅವರ ಸಹಾಯಕರಾಗಿ, ವೀಕ್ಷಕರಿಗೂ ಶ್ರೀ ರಘು ಅವರಿಗೂ ನಡುವೆ ಒಬ್ಬ ಮಾಡರೇಟರಾಗಿ, ಬೃಂದಾವನದ ಕಾರ್ಯದರ್ಶಿ ಶ್ರೀಮತಿ ಅಮೃತ ಲಕ್ಶ್ಮೀಸನ್ ಅವರು ಕಾರ್ಯನಿರ್ವಹಿಸಿದರು. ಮೂರ್ತಿಯನ್ನು ಮಾಡುವಾಗ ಶ್ರೀ ರಘುರಾಮ್ ರಾಯಸಮ್ ಅವರು ಹಂತ-ಹಂತವಾಗಿ ವಿವರಿಸುತ್ತಾ ಹೋದಂತೆ, ಶ್ರೀಮತಿ ಅಮೃತ ಅವರು ಯೂಟ್ಯೂಬ್ ಮತ್ತು ಫೇಸ್ಬುಕ್‌ನಲ್ಲಿ ಕೇಳುಗರ ಪ್ರಶ್ನೆಗಳಿಗೆ ಉತ್ತರಿಸುತ್ತಾ, ಮಧ್ಯ-ಮಧ್ಯದಲ್ಲಿ ಮಕ್ಕಳಿಗೆ ಗಣೇಶನ ಕತೆಗಳನ್ನು ಹೇಳುತ್ತಾ, ರಸಪ್ರಶ್ನೆಗಳನ್ನು ಕೇಳುತ್ತಾ ಎರಡು ಗಂಟೆಗಳ ಕಾಲ ಕಳೆಯುವುದರೊಳಗೆ ಎಲ್ಲರ ಗಣೇಶನ ಮೂರ್ತಿಗಳೂ ಅವರವರ ಕೈಚಳಕಕ್ಕೆ ತಕ್ಕಂತೆ ಆಕಾರ/ರೂಪವನ್ನು ಪಡೆದುಕೊಂಡವು. ಅಲ್ಲದೆ ಈ ಕಾರ್ಯಾಗಾರದಲ್ಲಿ ಎಲ್ಲ ವಯಸ್ಕರೂ ಭಾಗವಹಿಸಿ, ಮಕ್ಕಳ ಜೊತೆ ಅವರೂ ಮಕ್ಕಳಾಗಿ ಆನಂದಿಸಿದರು. ಶ್ರೀ ಪ್ರಶಾಂತ್ ಮುರುಗೇಂದ್ರಪ್ಪ, ನಂದೀಶ್ ಮಠದ್, ಶೇಖರ್ ಜಯರಾಮ್ ಮತ್ತು ಉಮೇಶ್ ರಾಜೇಗೌಡ ಅವರು ತಾಂತ್ರಿಕ ವರ್ಗದ ಕಾರ್ಯನಿರ್ವಹಿಸಿದ್ದರು.



ಸೆಪ್ಟೆಂಬರ್ ಎರಡನೆಯ ವಾರದ ಹೊತ್ತಿಗೆ ಕೋವಿಡ್ ಸಂಖ್ಯೆಯಲ್ಲಾದ ಅನಿರೀಕ್ಷಿತ ಏರಿಕೆಯಿಂದಾಗಿ ಸೆಪ್ಟೆಂಬರ್ 25ರಂದು ಹೊರಾಂಗಣದಲ್ಲಿ ನಡೆಯಬೇಕಾದ ಗಣೇಶೋತ್ಸವವನ್ನು ರದ್ದುಗೊಳಿಸಿ, ಬೃಂದಾವನ ತನ್ನ ಸಹೋದರಿ ಕೂಟಗಳಾದ ಹಿರಿಯಕ್ಕ ತ್ರಿವೇಣಿ ಕನ್ನಡ ಸಂಘ ಮತ್ತು ತಂಗಿ ನವೋದಯ ಕನ್ನಡ ಸಂಘಗಳೊಂದಿಗೆ ಕೂಡಿ ಹಬ್ಬವನ್ನು ಸಡಗರದಿಂದ ಆಚರಿಸಿತು. ಇಂತಹ ಪರಿಸ್ಥಿತಿಯಲ್ಲಿ ಸಭೆ ಸಮಾರಂಭಗಳಿಗಿಂತ, ಸಮುದಾಯದ ಮತ್ತು ಸದಸ್ಯರ ಹಿತ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮೂರೂ ಸಂಸ್ಥೆಗಳೂ ಅತ್ಯಂತ ಜವಾಬ್ದಾರಿಯಿಂದ, ಒಗ್ಗಟ್ಟಿನಿಂದ ಕೆಲಸ ಮಾಡಿ, ಒಂದೇ ದಿನದಲ್ಲಿ ಉತ್ತಮ ಮಟ್ಟದ ಕಾರ್ಯಕ್ರಮಗಳನ್ನು ಮೂರು ಭಾಗಗಳಲ್ಲಿ ನಡೆಸಲಾಯಿತು. ಕಾರ್ಯಕ್ರಮಗಳನ್ನು ಯೂಟ್ಯೂಬ್ ಮತ್ತು ಫೇಸ್‌ಬುಕ್‌ನಲ್ಲಿ ನೇರ ಪ್ರಸಾರ ಮಾಡಲಾಯಿತು.

ಮೊದಲನೆಯ ಭಾಗದ ಕಾರ್ಯಕ್ರಮದ ನಿರೂಪಣೆಯನ್ನು ಶ್ರೀಮತಿ ಭಾರತಿ ಸುಮತಿಸೇನ ಅವರು ತಮ್ಮ ಸುಶ್ರಾವ್ಯ ಕಂಠದಿಂದ ಗಣೇಶನ ಶ್ಲೋಕವೊಂದನ್ನು ಹಾಡಿ ಪ್ರಾರಂಭಿಸಿದರು. ನಂತರ ಸಾಂಪ್ರದಾಯಿಕವಾಗಿ ಪಂಚಾಂಗದಲ್ಲಿನ ಶುಭ ನಕ್ಷತ್ರ, ತಿಥಿಗಳ ವಿವರಣೆಯನ್ನು ನೀಡಿ, ತ್ರಿವೇಣಿ ಸಂಘದ ಅಧ್ಯಕ್ಷೆ ಶ್ರೀಮತಿ ಪುಟ್ಟಮ್ಮ ರಾಜಪ್ಪ, ಬೃಂದಾವನದ ಅಧ್ಯಕ್ಷೆ ಶ್ರೀಮತಿ ಪದ್ಮಿನಿ ಹೇಮಂತ್ ಮತ್ತು ನವೋದಯ ಕನ್ನಡ ಕೂಟದ ಅಧ್ಯಕ್ಷೆ ಶ್ರೀಮತಿ ಉಷಾ ಕುಳೂರ್ ಭಟ್ ಅವರನ್ನು ಸಿಂಹಿಣಿಯರೆಂದು ಸಂಬೋಧಿಸಿ, ಮೂರೂ ಮಹಿಳಾಮಣಿಯರನ್ನು ವೀಕ್ಷಕರಿಗೆ ಸ್ವಾಗತ ಕೋರಲು ಪರದೆಯ ಮೇಲೆ ಆಹ್ವಾನಿಸಿದರು. ಮೂರೂ ಅಧ್ಯಕ್ಷಿಣಿಯರೂ ಎಲ್ಲರಿಗೂ ಸ್ವಾಗತ ಕೋರಿ, ಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದರು.

ಬೃಂದಾವನದ ಅಧ್ಯಕ್ಷೆ ಶ್ರೀಮತಿ ಪದ್ಮಿನಿ ಹೇಮಂತ್, ಪ್ರತೀ ಕಾರ್ಯಕ್ರಮದಲ್ಲೂ ತುರ್ತು ಆರ್ಥಿಕ ಸಹಾಯದ ಅಗತ್ಯವಿರುವ ಸಂಸ್ಥೆಯೊಂದನ್ನು ಗುರುತಿಸಿ, ಅದಕ್ಕೆ ತನ್ನ ಕೈಲಾದ ಸಹಾಯ ಮಾಡುವುದು ಸಂಸ್ಥೆಯ ಮುಖ್ಯ ಗುರಿಗಳಲ್ಲೊಂದು ಎಂದರು. ಈ ಸಲದ ಸಂಸ್ಥೆ ಡಾ|| ಡಿ.ವಿ.ಜಿ ಅವರ ಸ್ಮಾರಕ, ಮುಳಬಾಗಿಲು ಶಾಲೆಯ ಮೂರು ಕೊಠಡಿಗಳ ನವೀಕರಣ, ಅದಕ್ಕೆ ಬೇಕಾಗುವ ವೆಚ್ಚ ಸುಮಾರು 3,000 ಡಾಲರ್‌ಗಳು ಎಂದು ಚಾರಿಟಿ ತಂಡದ ಮುಖ್ಯಸ್ಥೆ ಶ್ರೀಮತಿ ದೀಪ್ತಿ ಗಡ್ ಅವರು ತಯಾರಿಸಿದ ಒಂದು ಪುಟ್ಟ ವೀಡಿಯೋ ತೋರಿಸುವುದರ ಮೂಲಕ ವಿವರಿಸಿದರು. ಅಕ್ಟೋಬರ್ 30ರೊಳಗೆ ಈ ನಿಧಿ ಸಂಗ್ರಹಣೆ ಮಾಡುವುದು ತಂಡದ ಗುರಿ ಎಂದು ಎಲ್ಲರ ಸಹಾಯ ಕೋರಿದರು. ನಂತರ ತ್ರಿವೇಣಿಯ ಹಿರಿಯ ಸದಸ್ಯ, ಮಾಜಿ ತ್ರಿವೇಣಿ ಅಧ್ಯಕ್ಷ, ಓಂಕಾರ್ ಫೌಂಡೇಷನ್ನಿನ ಸ್ಥಾಪಕ, ಸನಾತನ ಧರ್ಮದ ಪ್ರವಚನಕಾರರು ಹಾಗೂ ಇನ್ನೂ ಅನೇಕ ಕ್ಷೇತ್ರಗಳಲ್ಲಿ ಸಕ್ರಿಯವಾಗಿ ಸೇವೆಸಲ್ಲಿಸುತ್ತಿರುವ ಶ್ರೀ ಉಮೇಶ್ ಜೋಯಿಸ್ ಅವರ ನೇತೃತ್ವದಲ್ಲಿ ಅಂದಿನ ಗಣೇಶನ ಪೂಜೆ ನಡೆಯಿತು. ಶ್ರೀ ಜೋಯಿಸ್ ಅವರ ಪತ್ನಿ ಶ್ರೀಮತಿ ಇಂದಿರಾ ಜೋಯಿಸ್ ಅವರಿಂದ ಮೊದಲು ಸ್ವರ್ಣಗೌರಿ ಪೂಜೆ ನಂತರ ಶ್ರೀ ಉಮೇಶ್ ಜೋಯಿಸ್ ಅವರಿಂದ ಗಣೇಶನ ಪೂಜೆ ಮುಂದುವರೆದು, ನೈವೇದ್ಯ ಮತ್ತು ಮಂಗಳಾರತಿಯೊಂದಿಗೆ ಪೂಜೆಯು



ಸಮಾಪ್ತವಾಯಿತು. ಪ್ರತಿ ಹಂತದಲ್ಲಿಯೂ ಶ್ರೀ ಜೋಯಿಸ್ ಅವರು ಪೂಜಾ ವಿಧಿವಿಧಾನಗಳನ್ನು ವಿವರಿಸುತ್ತಾ ಯಾವ ತಾಂತ್ರಿಕ ಅಡೆತಡೆಗಳೂ ಇಲ್ಲದಂತೆ ಗಣೇಶನ ಪೂಜೆಯನ್ನು ನೆರವೇರಿಸಿಕೊಟ್ಟರು.

ತಾಂತ್ರಿಕ ಭಾಗದ ಭಾರವನ್ನು ಬೃಂದಾವನದ ಸದಸ್ಯರಾದ ಶ್ರೀ ಪ್ರಶಾಂತ್ ಮುರುಗೇಂದ್ರಪ್ಪ ಮತ್ತು ನವೋದಯ ಕನ್ನಡಕೂಟದ ಸದಸ್ಯರಾದ ಶ್ರೀ ಹೊಸಮನೆ ಶ್ರೀನಿವಾಸ್ ಅವರು ಹೊತ್ತಿದ್ದರು. ಫ಼ೇಸ್‌ಬುಕ್ ನೇರ ಪ್ರಸಾರದ ಭಾಗವನ್ನು ಶ್ರೀ ಉಮೇಶ್ ರಾಜೇಗೌಡ ಅವರು ಹೊತ್ತಿದ್ದರು. ಶ್ರೀ ಉಮೇಶ್ ಜೋಯಿಸ್ ಅವರು ಪೂಜೆಗೆ ಕುಳಿತಾಗ ಅನಿರೀಕ್ಷಿತ ತಾಂತ್ರಿಕ ತೊಂದರೆಗಳು ಬಂದರೆ, ಅವರು ಮಧ್ಯದಲ್ಲಿ ಪೂಜೆಯಿಂದ ಏಳುವುದು ಸರಿಯಲ್ಲವೆಂದು ಪರಿಗಣಿಸಿ, ಅಂದಿನ ಮುಂಜಾನೆಯೇ ಶ್ರೀ ಪ್ರಶಾಂತ್ ಅವರು, ಶ್ರೀ ಉಮೇಶ್ ಜೋಯಿಸ್ ಅವರ ಮನೆಗೆ ಪೂರ್ಣ ತಾಂತ್ರಿಕ ಸಲಕರಣೆಗಳೊಂದಿಗೆ ಸುಸಜ್ಜಿತರಾಗಿ ಹೋಗಿ, ಅವರ ಪಕ್ಕದಲ್ಲೇ ನಿಂತು ಯಾವ ತಾಂತ್ರಿಕ ತೊಂದರೆಯೂ ಬಾರದಂತೆ ಕಾರ್ಯವನ್ನು ನಿರ್ವಹಿಸಿ, ಸಂಸ್ಥೆಯ ಸ್ವಯಂ ಸೇವಕರಾಗಿ, ನಿಸ್ವಾರ್ಥ ಸೇವೆಯೇನೆಂಬುದಕ್ಕೆ ಉದಾಹರಣೆಯಾದರು. ಮೊದಲನೆಯ ಭಾಗ ಸುಸೂತ್ರವಾಗಿ ಮೂಡಿಬರಲು ಶ್ರೀ ಪ್ರಶಾಂತ್ ಮುರುಗೇಂದ್ರಪ್ಪ ಅವರದು ಸಿಂಹಪಾಲು ಎಂದರೆ ತಪ್ಪಾಗಲಾರದು. ನಂತರ ಶ್ರೀ ಜೋಯಿಸ್ ಮತ್ತು ಮೂರೂ ಕೂಟಗಳ ಅಧ್ಯಕ್ಷಿಣಿಯರ ನಡುವೆ ಧನ್ಯವಾದಗಳ ವಿನಿಮಯವಾಗಿ, ಮೂರೂ ಕೂಟದ ಸದಸ್ಯರ ಮನೆಗಳಲ್ಲಿ ಆಚರಿಸಿದ Photo Collageನೊಂದಿಗೆ ಕಾರ್ಯಕ್ರಮದ ಮೊದಲನೆಯ ಭಾಗ ಮುಕ್ತಾಯಗೊಂಡಿತು.

ಅಂದಿನ ಕಾರ್ಯಕ್ರಮದ ಎರಡನೆಯ ಭಾಗದಲ್ಲಿ ಬೆಂಗಳೂರಿನಿಂದ ಖ್ಯಾತ ಕಲಾವಿದರ ತಂಡದಿಂದ ಜನಪ್ರಿಯ ಸುಗಮ ಸಂಗೀತ, ಜಾನಪದ ಮತ್ತು ಚಲನಚಿತ್ರ ಗೀತೆಗಳ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮವನ್ನು ಸಾಹಿತ್ಯ ಬೃಂದಾವನ ಸಮಿತಿಯ ಸದಸ್ಯೆ ಶ್ರೀಮತಿ ವಿದ್ಯಾಮೂರ್ತಿಯವರು ಬಹಳ ಸುಂದರವಾಗಿ ನಿರೂಪಿಸಿದರು. ಕಲಾವಿದರ ತಂಡದಲ್ಲಿ ಪ್ರಖ್ಯಾತ ಬೇಸ್ ಮತ್ತು ಅಕೌಸ್ಟಿಕ್ ಗಿಟಾರು ವಾದಕರಾದ ಶ್ರೀ ಬಂಟಪಲ್ಲಿ ಸುದರ್ಶನ್ ಅವರು, ಖ್ಯಾತ ಹಿನ್ನೆಲೆ ಗಾಯಕಿ ಹಾಗೂ ಎಲ್ಲೋ ಜೋಗಪ್ಪ ನಿನ್ ಅರಮನೀ ಫ಼ೇಮ್ ಶ್ರೀಮತಿ ಜೋಗಿ ಸುನಿತ, ಖ್ಯಾತ ಹಿನ್ನೆಲೆ ಗಾಯಕ ಶ್ರೀ ನಿತಿನ್ ರಾಜಾರಾಮ್ ಶಾಸ್ತ್ರಿ, ತಬಲ ವಾದನದಲ್ಲಿ ಶ್ರೀ ವೇಣುಗೋಪಾಲ್ ರಾಜು, ರಿಧಮ್ ಗಿಟಾರಿನಲ್ಲಿ ಶ್ರೀ ಬಿ. ಗೋಪಿ, ಕೀಬೋರ್ಡ್ ವಾದನದಲ್ಲಿ ಶ್ರೀ ಸಂಗೀತ್ ಥಾಮಸ್ ಮತ್ತು ಡ್ರಂ ವಾದನದಲ್ಲಿ ಶ್ರೀ ಕೃಷ್ಣಕುಮಾರ್ ಅವರು ಪರದೆಯ ಮೇಲಿದ್ದರು. ನಿತಿನ್‌ರವರು ಗಣೇಶನ ಮಹಿಮೆ ಚಿತ್ರದ ಗಣೇಶ ನಿನ್ನ ಮಹಿಮೆ ಅಪಾರ ಮತ್ತು ನಾಡಗೀತೆ ಜಯ ಭಾರತ ಜನನಿಯ ತನುಜಾತೆ ಹಾಡಿನಿಂದ ಪ್ರಾರಂಭಿಸಿ, ಜನಪ್ರಿಯ ಹಾಡುಗಳಾದ ಕಾಣದಾ ಕಡಲಿಗೆ, ಈ ಬಾನು ಈ ಚುಕ್ಕಿ, ನಿನ್ನ ಪ್ರೇಮದ ಪರಿಯ, ದೀಪವು ನಿನ್ನದೆ, ಶ್ರಾವಣ ಬಂತು ನಾಡಿಗೆ, ಕುರುಡು ಕಾಂಚಾಣ, ಕೋಡಗನ ಕೋಳಿ ನುಂಗಿತ್ತಾ ಇನ್ನೂ ಅನೇಕ ಭಾವಗೀತೆಗಳಲ್ಲದೆ ಒಂದು ವರ್ಷದ ಹಿಂದೆ ನಮ್ಮನ್ನೆಲ್ಲಾ ಅಗಲಿದ ಸ್ವರಮಾಂತ್ರಿಕ ಡಾ.ಎಸ್ ಪಿ ಬಾಲಸುಬ್ರಹ್ಮಣ್ಯಂ ಅವರ ನೆನಪಿಗಾಗಿ ಅವರು ಹಾಡಿದ ಕೆಲ ಚಲನಚಿತ್ರ ಗೀತೆಗಳೊಂದಿಗೆ ಅಗಲಿದ ನಾಯಕನಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸಿದರು. ಶ್ರೀ ವೇಣುಗೋಪಾಲ್ ಮತ್ತು ಶ್ರೀ ಕೃಷ್ಣ ಕುಮಾರ್ ಅವರ ಜುಗಲ್ಬಂಧಿ ಕೇಳುಗರನ್ನು ಮಂತ್ರಮುಗ್ಧರನ್ನಾಗಿಸಿತ್ತು. ಒಟ್ಟಿನಲ್ಲಿ ಪಕ್ಕವಾದ್ಯಗಳ ಸಮ್ಮಿಲನದೊಂದಿಗೆ ಸುಶ್ರಾವ್ಯ ಕಂಠದಲ್ಲಿ ಹಾಡಿದ ಶ್ರೀಮತಿ ಜೋಗಿ ಸುನಿತ ಮತ್ತು ಶ್ರೀ ನಿತಿನ್ ಅವರ ಹಾಡುಗಳು ಹೆಚ್ಚುಕಾಲ ಜನರ ಮನಸ್ಸಿನಲ್ಲುಳಿಯುವಂತಿದ್ದವು. ಈ ಕಾರ್ಯಕ್ರಮದ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತ ಶ್ರೀ ಸುದರ್ಶನ್ ಬಂಟಪಲ್ಲಿಯವರಿಗೆ ಮತ್ತು ವೇದಿಕೆಯಲ್ಲಿದ್ದ ಕಲಾವಿದರಿಗೆ ಅಧ್ಯಕ್ಷಿಣಿಯರು ವಂದನಾರ್ಪಣೆಯನ್ನು ಮಾಡುವುದರ ಮೂಲಕ ಕಾರ್ಯಕ್ರಮದ ಎರಡನೆಯ ಬಾಗಕ್ಕೆ ತೆರೆಯೆಳೆಯಲಾಯಿತು.

ಕಾರ್ಯಕ್ರಮದ ಮೂರನೆಯ ಭಾಗದಲ್ಲಿ ತ್ರಿವೇಣಿ ಮತ್ತು ನವೋದಯ ಸದಸ್ಯರ ಸಾಂಸ್ಕೃತಿಕ ಮನರಂಜನಾ ಕಾರ್ಯಕ್ರಮಗಳ ಸಾಲೇ ಇತ್ತು. ಶ್ರೀಮತಿ ರಶ್ಮಿ ಬರಿಗೆ ಮತ್ತು ಶ್ರೀ ಅಶೋಕ್ ಅವರ ನಿರೂಪಣೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಗಣೇಶೋತ್ಸವವಾದ್ದರಿಂದ ಗಣೇಶನ ಹಾಡುಗಳು, ಗಣೇಶನ ಹಾಡುಗಳಿಗೆ ನರ್ತನಗಳನ್ನು ಮಾಡಿದ ಎರಡೂ ಕೂಟಗಳ ಹಿರಿಯ ಹಾಗೂ ಕಿರಿಯ ಸದಸ್ಯರ ಕಾರ್ಯಕ್ರಮಗಳು ಬಹಳ ಸೊಗಸಾಗಿ ಮೂಡಿಬಂದವು. ನಿರೂಪಕರಾದ ಶ್ರೀಮತಿ ರಶ್ಮಿ ಮತ್ತು ಅಶೋಕ್ ಅವರು ಕಾರ್ಯಕ್ರಮದ ಮಧ್ಯಮಧ್ಯದಲ್ಲಿ ಕೇಳುತ್ತಿದ್ದ ರಸಪ್ರಶ್ನೆಗಳು ಆಸಕ್ತಿದಾಯಕವಾಗಿದ್ದವು.

ಒಟ್ಟಿನಲ್ಲಿ ಯಾವ ಭಿನ್ನಾಭಿಪ್ರಾಯಗಳೂ ಇಲ್ಲದೆ ಮೂರೂ ಸಂಘಗಳ ಅಧ್ಯಕ್ಷಿಣಿಯರ ನಾಯಕತ್ವದಲ್ಲಿ ನಡೆದ ಈ ವರ್ಷದ ಗಣೇಶೋತ್ಸವವು ಎಲ್ಲರ ಮೆಚ್ಚುಗೆ ಪಡೆಯಿತು. ಸದಸ್ಯರೆಲ್ಲರೂ ತಮ್ಮ ತಮ್ಮ ಮನೆಗಳಲ್ಲೇ ಕುಳಿತು, ಆನ್‌ಲೈನ್‌ನಲ್ಲೇ ಎಲ್ಲ ಕಾರ್ಯಕ್ರಮಗಳನ್ನೂ ನೋಡಿ ಆನಂದಿಸಿದರು. ಮೂರೂ ಭಾಗಗಳ ಆನ್‌ಲೈನ್ ಕಾರ್ಯಕ್ರಮಗಳ ತಾಂತ್ರಿಕ ಹೊಣೆಯನ್ನು ಅತ್ಯಂತ ಸಮರ್ಪಕವಾಗಿ ನಿರ್ವಹಿಸಿದ ಶ್ರೀ ಹೊಸಮನೆ ಶ್ರೀನಿವಾಸ್ ಮತ್ತು ಶ್ರೀ ಪ್ರಶಾಂತ್ ಮುರುಗೇಂದ್ರಪ್ಪ ಮತ್ತು ಉಮೇಶ್ ರಾಜೇಗೌಡ ಅವರಿಗೆ ವಂದನೆಗಳನ್ನು ಹೇಳದಿದ್ದಲ್ಲಿ ವರದಿ ಪೂರ್ಣವಾಗದು.



# ನಾವಿಕ ಸಮ್ಮೇಳನದಲ್ಲಿ ಸಾಹಿತ್ಯ ರಸದೌತಣ

**ಭಾಸ್ಕರ್ ತೈಲಿಗೇರಿ,** ನ್ಯೂ ಜೆರ್ಸಿ

**ಆ**ಗಸ್ಟ್ ೨೭, ೨೮, ೨೯ ಮೂರು ದಿನಗಳ ಕಾಲ ನಾವಿಕ ೨೦೨೦ ಸಮ್ಮೇಳನ ಯಶಸ್ವಿಯಾಗಿ ನಡೆಯಿತು. ಕೋವಿಡ್ ಕೃಪೆಯಿಂದ ಈ ಬಾರಿ ಎಲ್ಲ ಕಾರ್ಯಕ್ರಮಗಳನ್ನು ಆನ್ಲೈನ್ ನಲ್ಲಿ ಪ್ರಸ್ತುತ ಪಡಿಸಲಾಯಿತು. ಈ ಸಮ್ಮೇಳನದಲ್ಲಿ ನಾಟಕ, ನೃತ್ಯ, ಸಂಗೀತ, ಅಧ್ಯಾತ್ಮ, ಸಾಹಿತ್ಯದ ಬಗ್ಗೆ ಅನೇಕ ಕಾರ್ಯಕ್ರಮಗಳಿದ್ದವು. ಇದಲ್ಲದೆ ನಾವಿಕ ಕೋಗಿಲೆ, ಅಂತ್ಯಾಕ್ಷರಿ, ನಾವಿಕ ಶೆಫ್, ಕವನ ಸ್ಪರ್ಧೆ, ಕಥಾ ಸ್ಪರ್ಧೆ, ಮಕ್ಕಳ ಪ್ರತಿಭಾನ್ವೇಷಣೆ, ಇನ್ನೂ ಅನೇಕ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಈ ಎಲ್ಲ ಕಾರ್ಯಕ್ರಮ, ಸ್ಪರ್ಧೆಗಳನ್ನು ನೋಡಲು 3D ಟೆಕ್ನಾಲಜಿ ಬಳಸಿ 5 ವಿಶೇಷ ಸಭಾಂಗಣಗಳನ್ನು (ಚಾನೆಲ್ಸ್) ಏರ್ಪಡಿಸಲಾಗಿತ್ತು.

ನಾವಿಕ ೨೦೨೦ ಸಮ್ಮೇಳನದ ಪ್ರತಿ ಕಾರ್ಯಕ್ರಮದ ಬಗ್ಗೆ ವಿವರವಾಗಿ ಬರೆಯಲು ಕುಳಿತರೆ ಒಂದು ಪುಸ್ತಕವೇ ಆಗಬಹುದು. ಇಲ್ಲಿ ನಾನು ಸಮ್ಮೇಳನದಲ್ಲಿ ನಡೆದ ಸಾಹಿತ್ಯ ಕಾರ್ಯಕ್ರಮಗಳ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸುತ್ತೇನೆ. "ನಾವಿಕ ಸಾಹಿತ್ಯ" ವೇದಿಕೆಯಲ್ಲಿ ಸ್ವರಚಿತ ಕವನ ಸ್ಪರ್ಧೆ, ಅನಿವಾಸಿ ಲೇಖಕರ ಸಾಹಿತ್ಯ ಸಿಂಚನ, ಸಾಹಿತ್ಯ ಲೋಕದಲ್ಲಿ ಒಂದು ಸುತ್ತು, ಕನ್ನಡ ಪ್ರಕಾಶಕ-ಲೇಖಕರ ಸಂವಾದ, ಕಾವ್ಯ ಸಿಂಚನ, ಅನಿವಾಸಿ ರಸಾನುಭವ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು.

**ಸ್ವರಚಿತ ಕವನ ಸ್ಪರ್ಧೆ:**
ಈ ಸ್ಪರ್ಧೆಗೆ ವಿಶ್ವದೆಲ್ಲೆಡೆಯಿಂದ ಉದಯೋನ್ಮುಖ ಕವಿಗಳು ತಮ್ಮ ಕವನಗಳನ್ನು ಕಳುಹಿಸಿದ್ದರು. ನಮ್ಮ ತೀರ್ಪುಗಾರ ತಂಡಕ್ಕೆ (ಡಾ. ಎಂ. ಎಸ್. ನಟರಾಜ್ ಮತ್ತು ನಳಿನಿ ಮೈಯ್ಯ) ಈ ಕವನಗಳನ್ನೆಲ್ಲ ಓದಿ, ವಿಶ್ಲೇಷಿಸಿ ಮೂರು ಶ್ರೇಷ್ಠ ಕವನಗಳನ್ನು ಆರಿಸಲು ಸ್ವಲ್ಪ ಜಾಸ್ತಿಯೇ ಸಮಯ ಬೇಕಾಗಿರಬಹುದು. ಸ್ಪರ್ಧೆಯ ವಿಜೇತರಲ್ಲಿ ನಮ್ಮ ಬೃಂದಾವನ ಕನ್ನಡ ಕೂಟದ ಅನಿಲ್ ಭರದ್ವಾಜ್ ಕೂಡ ಇದ್ದರೆಂದು ಹೇಳಲು ಸಂತಸವಾಗುತ್ತದೆ. ಅವರ "ಒಂದಾಗು ಮನವೆ" ಕವನಕ್ಕೆ ಮೂರನೇ ಬಹುಮಾನ ದೊರೆಯಿತು. ಮೊದಲನೇ ಬಹುಮಾನ ವಿನತೆ ಶರ್ಮರವರ "ಕಿರಣ ಸಂಧ್ಯೆ" ಮತ್ತು ಎರಡನೇ ಬಹುಮಾನ ರವಿ ಕಲ್ಮಠ ಅವರ "ಒಪ್ಪಂದ" ಕವನಗಳಿಗೆ ದೊರೆಯಿತು.

**ಅನಿವಾಸಿ ಲೇಖಕರ ಸಾಹಿತ್ಯ ಸಿಂಚನ:**
ಅಮೆರಿಕಾದ ವಿವಿಧ ರಾಜ್ಯಗಳಿಂದ ಎಂಟು ಹೆಸರಾಂತ ಬರಹಗಾರರನ್ನು ಆರಿಸಿ, ಅವರಿಗೊಂದು ವೇದಿಕೆ ಕೊಟ್ಟು ಅವರು ಬರೆದ ಕಥೆ, ಪ್ರಬಂಧ, ಕವನ, ಹಾಡು, ಹಾಸ್ಯ ಲೇಖನಗಳ ಸ್ಯಾಂಪಲ್ ಅನ್ನು ಉಣಬಡಿಸಲಾಯಿತು. ಈ ಗೋಷ್ಠಿಯಲ್ಲಿ  ಅಮೆರಿಕಾದ ಸಾಹಿತ್ಯವಲಯದಲ್ಲಿ ಚಿರಪರಿಚಿತರಾದ ಡಾ. ಗುರುಪ್ರಸಾದ ಕಾಗಿನೆಲೆ, ಡಾ. ಎಂ. ಎಸ್. ನಟರಾಜ್, ನಳಿನಿ ಮೈಯ್ಯ, ಕಾವ್ಯ ಕಡಮೆ, ಶಶಿಕಲಾ ಚಂದ್ರಶೇಖರ್, ಶ್ರೀನಾಥ್ ಭಲ್ಲೆ, ಸವಿತಾ ರವಿಶಂಕರ್ ಮತ್ತು ಪ್ರಕಾಶ್ ನಾಯಕ್ ಭಾಗವಹಿಸಿದ್ದರು. ಈ ಕಾರ್ಯಕ್ರಮವನ್ನು ತ್ರಿವೇಣಿ ರಾವ್ ತುಂಬಾ ಅಚ್ಚುಕಟ್ಟಾಗಿ ನಡೆಸಿಕೊಟ್ಟರು.




**ಕಾವ್ಯ ಸಿಂಚನ:**
ಕನ್ನಡದ ಸುಪ್ರಸಿದ್ಧ ಕವಿಗಳ ಜನಪ್ರಿಯ ಹಾಡುಗಳನ್ನು ಆಯ್ಕೆ ಮಾಡಿ, ಆ ಕವಿಗಳಿಂದ ಕವಿತೆಯ ಹಿಂದಿನ ಪ್ರೇರಣೆ, ಸ್ಫೂರ್ತಿ ಹಾಗು ಕವಿತೆ ಹೇಗೆ ಹುಟ್ಟಿತು ಎನ್ನುವುದರ ಕುರಿತು ಎರಡು ಮಾತು. ನಂತರ ಈ ಹಾಡುಗಳನ್ನು ಅಮೆರಿಕಾದ ಅನಿವಾಸಿ ಗಾಯಕರಿಂದ ಹಾಡಿಸಿ, ಈ ಎಲ್ಲಾ ವಿಡಿಯೋಗಳನ್ನು ಜೋಡಿಸಿ ತಯಾರಿಸಿದ ಹೂಗುಚ್ಛವೇ ಕಾವ್ಯ ಸಿಂಚನ. ಈ ಕಾರ್ಯಕ್ರಮದಲ್ಲಿ ಹಿರಿಯ ಕವಿಗಳಾದ ಡಾ.  ಹೆಚ್. ಎಸ್. ವೆಂಕಟೇಶ ಮೂರ್ತಿ ಬಿ. ಆರ್. ಲಕ್ಷ್ಮಣ ರಾವ್,

ಡಾ. ದೊಡ್ಡರಂಗೇಗೌಡ ತಮ್ಮ ಕವಿತೆಯ ಬಗ್ಗೆ ಮಾತನಾಡಿದರು. ಇದೇ ಕಾರ್ಯಕ್ರಮದಲ್ಲಿ ನಮ್ಮನ್ನು ಇತ್ತೀಚೆಗೆ ಅಗಲಿದ ಪ್ರೊ. ಎನ್. ಎಸ್. ಲಕ್ಷ್ಮೀನಾರಯಣ ಭಟ್ಟರು ಮತ್ತು ಡಾ. ಸಿದ್ಧಲಿಂಗಯ್ಯ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಿಲಾಯಿತು ಮತ್ತು ಅವರ ಹಾಡುಗಳನ್ನು ಹಾಡಲಾಯಿತು. ಶೇಷಪ್ರಸಾದ್ ಚಿಕ್ಕತೂರ್, ನೇಹಾ ನಟರಾಜ್, ಅಮೂಲ್ಯ ಕಟ್ಟಿಮನಿ, ಅಪರ್ಣ ನರೇಂದ್ರ, ಶ್ರೇಯಸ್ ಶ್ರೀಕರ್, ಲಕ್ಷ್ಮೀ ಶೈಲೇಶ್ ಮತ್ತು ವಿನುತಾ ಶ್ರೀಧರ್ ಹಾಡುಗಳನ್ನು ಸುಶ್ರಾವ್ಯವಾಗಿ ಹಾಡಿದರು. ಕಾರ್ಯಕ್ರಮವನ್ನು ಅಶೋಕ್ ಕಟ್ಟಿಮನಿ ಅಚ್ಚುಕಟ್ಟಾಗಿ ನಿರೂಪಿಸಿದರು. ಈ ಕಾರ್ಯಕ್ರಮದಲ್ಲಿ ಬೃಂದಾವನ ಕನ್ನಡ ಕೂಟದ ಸದಸ್ಯರ ಕೊಡುಗೆಯನ್ನು ನೋಡಬಹುದು.

**ಸಾಹಿತ್ಯ ಲೋಕದಲ್ಲೊಂದು ಸುತ್ತು:**

ಈ ಕಾರ್ಯಕ್ರಮದಲ್ಲಿ ಡಾ. ವೈದೇಹಿ, ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಪ್ರೊ. ಶ್ರೀಪತಿ ತಂತ್ರಿ ಯವರೊಂದಿಗೆ ಸಂದರ್ಶನ ನಡೆಸಲಾಯಿತು. ಸಂದರ್ಶನವನ್ನು ನಡಿಸಿಕೊಟ್ಟವರು ನಮ್ಮ ಸಾಹಿತ್ಯ ಸಮಿತಿಯ ಲೇಖಕ ಎಸ್. ಉಮೇಶ್. ಡಾ. ವೈದೇಹಿಯವರು ಕನ್ನಡ ಸಾಹಿತ್ಯದಲ್ಲಿ ಚಿರಪರಿಚಿತ ಹೆಸರು. ಅವರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೆಲಸ ಮಾಡಿದ್ದಾರೆ. ಈ ಸಂದರ್ಶನದಲ್ಲಿ ಅವರು ತಮ್ಮ ಬಾಲ್ಯ, ಊರು, ಶಿವರಾಮ ಕಾರಂತರೊಡನೆ ಒಡನಾಟ, ತಮ್ಮ ಕೃತಿಗಳು, 'ಅಮ್ಮಚ್ಚಿಯೆಂಬ ನೆನಪು' ಸಿನಿಮಾ ಬಗ್ಗೆ ಮಾತನಾಡಿದರು. ಅವರು ತಮ್ಮ ಕೆಲವು ಕವನಗಳನ್ನು ವಾಚಿಸಿದರು.













**ಕನ್ನಡ ಪ್ರಕಾಶಕ/ಲೇಖಕರ ಜೊತೆ ಸಂವಾದ:**

ಕನ್ನಡ ಪುಸ್ತಕಗಳ ಡಿಜಿಟಲೀಕರಣ - ಈ ವಿಷಯದ ಕುರಿತಾದ ಸಂವಾದದಲ್ಲಿ ಖ್ಯಾತ ಬರಹಗಾರ ಜೋಗಿ, ಲೇಖಕ/ಪ್ರಕಾಶಕ ವಸುಧೇಂದ್ರ, ಪ್ರಕಾಶಕರಾದ ಅಂಕಿತ ಪ್ರಕಾಶನದ ಪ್ರಕಾಶ್ ಕಂಬತ್ತಳ್ಳಿ, ಟೋಟಲ್ ಕನ್ನಡದ ಲಕ್ಷ್ಮೀಕಾಂತ್, ಸಪ್ನ ಬುಕ್‌ಹೌಸಿನ ದೊಡ್ಡೇಗೌಡ, ಸಾವಣ್ಣ ಪ್ರಕಾಶನದ ಜಮೀಲ್ ಭಾಗವಹಿಸಿದ್ದರು. ಪ್ರಸ್ತುತ ಕನ್ನಡ ಸಾಹಿತ್ಯವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುವ ಜೊತೆಗೆ ಡಿಜಿಟಲೀಕರಣ (ಈ-ಬುಕ್ಸ್, ಆಡಿಯೋ ಬುಕ್ಸ್) ಮಾಡಿದರೆ ಮಾರುಕಟ್ಟೆಯ ವ್ಯಾಪ್ತಿ, ಲಾಭ-ನಷ್ಟಗಳ ಬಗ್ಗೆ ಚರ್ಚೆ ನಡೆಸಲಾಯಿತು. ನಮ್ಮ ಸಾಹಿತ್ಯ ಸಮಿತಿಯಿಂದ ಲೇಖಕ ಎಸ್. ಉಮೇಶ್ ಅವರು ನಾವಿಕದ ಪರವಾಗಿ ಸಂವಾದ ನಡೆಸಿಕೊಟ್ಟರು.

ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಕನ್ನಡ ಸಾಹಿತ್ಯದ ಖ್ಯಾತ ವಿಮರ್ಶಕರು. ಈ ಸಂದರ್ಶನದಲ್ಲಿ ಅವರು ತಮ್ಮ ಬಾಲ್ಯದಲ್ಲಿ ಕಳೆದ ಹಳ್ಳಿ ಜೀವನ, ದೈನಿಕದಲ್ಲಿ ಸಾಹಿತ್ಯ, ತಮ್ಮ ಮೆಚ್ಚಿನ ಕವಿ ಕೆ. ಎಸ್. ನರಸಿಂಹಸ್ವಾಮಿ ಬಗ್ಗೆ ಮಾತನಾಡಿದರು. ಇವರು ಐಎಎಸ್, ಕೆಎಎಸ್ ಅಭ್ಯರ್ಥಿಗಳಿಗೆ ಕನ್ನಡ ಪಾಠ ಮಾಡುತ್ತಿರುವುದಾಗಿ ಹೇಳಿದರು. ಇವರ ಶಿಷ್ಯರಲ್ಲಿ ಅನೇಕರು ಐಎಎಸ್/ ಕೆಎಎಸ್ ಅಧಿಕಾರಿಗಳಾಗಿದ್ದಾರೆ. ಅವರು ಕನ್ನಡ ಸೇವೆ ಮಾಡುವರೆಂಬ ನಂಬಿಕೆಯಿದೆ ಎಂದು ತಿಳಿಸಿದರು.

ಪ್ರೊ. ಶ್ರೀಪತಿ ತಂತ್ರಿಯವರು ಒಬ್ಬ ಸಮಾಜ ಶಾಸ್ತ್ರಜ್ಞ, ಶಿಕ್ಷಣ ತಜ್ಞ ಹಾಗು ಸಂಶೋಧಕರು. ಈ ಸಂದರ್ಶನದಲ್ಲಿ ಭಾರತೀಯ ಸಂಸ್ಕೃತಿ, ಧರ್ಮ, ಪರಂಪರೆಗಳ ಬಗ್ಗೆ ಮಾತನಾಡಿದರು.

**ಅನಿವಾಸಿಗಳ ರಸಾನುಭವ:**

ಅನಿವಾಸಿಗಳ ರಸಾನುಭವ ವಿಡಿಯೋಗಳನ್ನು ಅನೇಕ ಕಾರ್ಯಕ್ರಮಗಳ ನಡುವೆ ತೋರಿಸಲಾಯಿತು. ಭಾರತ ಬಿಟ್ಟು ಹೊರ ದೇಶಕ್ಕೆ ಬಂದಾಗ ಆಗುವ ಫಜೀತಿಗಳು, ವಿಚಿತ್ರ ಅನುಭವಗಳು, ತಮಾಷೆ, ಪೇಚಿಕೆ ಸಿಲುಕಿದ ಪ್ರಸಂಗಗಳು ಬಗ್ಗೆ ಸುಮಾರು ೧೦ ಮಂದಿ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದರು. ಒಬ್ಬರು ತಮ್ಮ ಕುಟುಂಬದೊಂದಿಗೆ ಪಾಸ್ಪೋರ್ಟ್/ ವೀಸಾವಿಲ್ಲದೆಯೇ ನಯಾಗರ ಫಾಲ್ಸ್ ಬಳಿ ಇರುವ ರೇನ್ಬೋ ಬ್ರಿಜ್ ಮೂಲಕ ಗಡಿ ದಾಟಿ ಕೆನಡಾ ದೇಶಕ್ಕೆ ಹೋಗಿ ಇಮಿಗ್ರೇಷನ್ ಆಫೀಸರ್ ಹತ್ತಿರ ಸಿಕ್ಕಿಹಾಕೊಂಡ ಅನುಭವ ಹಂಚಿಕೊಂಡರೆ, ಇನ್ನೊಬ್ಬರು ತಮ್ಮ ಸ್ನೇಹಿತನು ಮೈಕ್ರೋವೇವ್ ಅವೆನ್ನಲ್ಲಿ ಮೊಟ್ಟೆ ಬೇಯಿಸಿದ (ಸಿಡಿಸಿದ) ಅನುಭವವನ್ನು ಹೇಳಿದರು. ಮತ್ತೊಬ್ಬರು ತಮ್ಮ ಮಗನ ಕನ್ನಡ ಮಾತಿನಿಂದ ಕಿಂಡರ್ಗಾರ್ಟನ್ ಟೀಚರ್ ಗಾದ ಗೊಂದಲದ ಬಗ್ಗೆ ಹೇಳಿ ನಗಿಸಿದರು. ಮಗು ಬಾತ್ರೂಮ್ ಗೆ ಹೋಗಲು ಟೀಚರ್ ಗೆ ಬೆಲ್ಟ್ ಬಿಚ್ಚಲು "ಬಿಚ್, ಬಿಚ್" ಎಂದು ಹೇಳಿತಂತೆ! ಅಮೆರಿಕನ್ ಟೀಚರ್ "Bitch, Bitch" ಅಂತ ಅರ್ಥೈಸಿಕೊಂಡಳಂತೆ. ಈ ವಿಡಿಯೋ ತುಣುಕುಗಳು ವೀಕ್ಷಕರ ಮುಖದಲ್ಲಿ ಖಂಡಿತ ನಗೆ ತರಿಸಿರುತ್ತವೆ . ನಮ್ಮ ಬೃಂದಾವನ ಕನ್ನಡ ಕೂಟದ ಕೆಲವರು ಈ ಕಾರ್ಯಕ್ರಮದಲ್ಲಿ ತಮ್ಮ ಹಾಸ್ಯ ಪ್ರಸಂಗದ ವಿಡಿಯೋಗಳನ್ನು ಹಂಚಿಕೊಂಡಿದ್ದರು.

ನಾವಿಕ ಸಾಹಿತ್ಯ ಸಮಿತಿಯ ಸಾರಥ್ಯ ವಹಿಸಿದವರು ಶಿಕಾಗೊದಲ್ಲಿ ನೆಲೆಸಿರುವ ತ್ರಿವೇಣಿ ಶ್ರೀನಿವಾಸ ರಾವ್. ಈ ತಂಡದಲ್ಲಿ ಇದ್ದ ಇತರ ಸದಸ್ಯರು ಎಸ್. ಉಮೇಶ್, ಪ್ರತಿಭಾ ಭಾಗವತ್ ಮತ್ತು ಭಾಸ್ಕರ್ ತೈಲಗೇರಿ. ಈ ತಂಡದ ಮಾರ್ಗದರ್ಶಕರಾಗಿ ಎಲ್ಲಾ ಕಾರ್ಯಕ್ರಮಗಳು ಸುಸೂತ್ರವಾಗಿ ನಡೆಯಲು ಕಾರಣರಾದವರು ನಮ್ಮವರೇ ಆದ ಅಶೋಕ್ ಕಟ್ಟಿಮನಿ.








# ಬೃಂದಾವನ ಕನ್ನಡ ಕೂಟದ ಸಹಯೋಗ

**ಡಾ.ಅಶೋಕ್ ಕಟ್ಟೀಮನಿ,** ನ್ಯೂ ಜೆರ್ಸಿ

ಆಗಸ್ಟ್ 27, 28, 29 ರಂದು ನೆರವೇರಿದ ಮೂರು ದಿನಗಳ ಆರನೇ ನಾವಿಕ ವಿಶ್ವ ಕನ್ನಡ ಸಮ್ಮೇಳನ, ಕರೋನದಿಂದ ನೊಂದ ಮನಸ್ಸುಗಳಿಗೆ ಹೊಸ ಚೇತನ ತುಂಬಿತು. ಅಂತಹ ಕಠಿಣ ಪರಿಸ್ಥಿತಿಯಲ್ಲಿ ಕೂಡ ನಾವಿಕ ಸಂಸ್ಥೆ ತನ್ನೆಲ್ಲ ಸಂಪನ್ಮೂಲಗಳನ್ನು ಕ್ರೋಢೀಕರಿಸಿ, ವಿಶ್ವ ಕನ್ನಡಿಗರನ್ನೆಲ್ಲ ಒಂದೆಡೆ ಕೂಡಿಸಿ ಕನ್ನಡದ ಹಬ್ಬವನ್ನು ಯಶಸ್ವಿಯಾಗಿ ನೆರವೇರಿಸಿ ಕೊಟ್ಟಿತು. ನಾವಿಕದ ಈ ವಿಶ್ವ ಕನ್ನಡ ಸಮ್ಮೇಳನದಲ್ಲಿ ನ್ಯೂ ಜೆರ್ಸಿ ಕನ್ನಡಿಗರು ಮತ್ತು ಬೃಂದಾವನ ಕನ್ನಡ ಕೂಟ, ತುಂಬು ಹೃದಯದ ಸಹಕಾರ ನೀಡಿ ಸಮ್ಮೇಳನದ ಯಶಸ್ಸಿನಲ್ಲಿ ಜೊತೆಯಾದರು. ಸಮ್ಮೇಳನದ ಅನೇಕ ಕಾರ್ಯಕ್ರಮಗಳಲ್ಲಿ ನ್ಯೂ ಜೆರ್ಸಿ ಕನ್ನಡ ಸ್ನೇಹಿತರೆಲ್ಲರ ಸಹಯೋಗ, ಸಹಕಾರ ಎದ್ದು ಕಾಣುತ್ತಿತ್ತು.

ಈ ಸಲದ ನಾವಿಕ ಸಮ್ಮೇಳನದಲ್ಲಿ ಮೊಟ್ಟಮೊದಲ ಬಾರಿಗೆ 3D ಟೆಕ್ನಾಲಜಿಯಿಂದ ಅಂತರ್ಜಾಲದಲ್ಲಿ ಬಿತ್ತರವಾದ ಕಾರ್ಯಕ್ರಮಗಳು ನೋಡುಗರಿಗೆ ನಿಜವಾದ ಆಡಿಟೋರಿಯಂನಲ್ಲಿ ಕುಳಿತು ವೀಕ್ಷಿಸಿದ ವಿಶೇಷ ಅನುಭವ ನೀಡಿದವು. ಈ ಸಮಾವೇಶದಲ್ಲಿ ಪ್ರಪಂಚದ ವಿವಿಧ ದೇಶಗಳ ನೂರಾರು ಕನ್ನಡ ಸಂಘಗಳು ಭಾಗವಹಿಸಿದ್ದವು ಮತ್ತು ಈ ಸಮಾವೇಶದ ವೈವಿಧ್ಯಮಯ ಕಾರ್ಯಕ್ರಮಗಳು ನಾವಿಕ ವೆಬ್ ಸೈಟ್ ನ 5 ಪ್ರತ್ಯೇಕ ಚಾನೆಲ್ಲುಗಳಲ್ಲಿ ಏಕಕಾಲದಲ್ಲಿ ಪ್ರಸಾರವಾದವು.

ನಾವಿಕ ಸಮ್ಮೇಳನದ ಘೋಷ ವಾಕ್ಯ "ಭಾಷೆ ಬಾಂಧವ್ಯ ಭರವಸೆ" ನಮ್ಮೆಲ್ಲರಿಗೂ ಭಾಷೆ ಎನ್ನುವುದು ಕೇವಲ ಒಂದು ಸಂವಹನದ ಮಾಧ್ಯಮವಷ್ಟೇ ಅಲ್ಲ. ಅದೊಂದು ಸಂಸ್ಕೃತಿ, ಜೀವನ ಶೈಲಿ ಮತ್ತು ಬಾಂಧವ್ಯದ ಬೆಸುಗೆ. ಹೃದಯ ಹೃದಯಗಳ ನಡುವೆ ಈ ಬಾಂಧವ್ಯ ಗಟ್ಟಿಗೊಂಡರೆ ಬದುಕಿನ ಬಗ್ಗೆ ಅದ್ಭುತವಾದ ಭರವಸೆ ಮೂಡುತ್ತದೆ. ಅದು ಸಾಧನೆಗೆ ನಾಂದಿ ಹಾಡುತ್ತದೆ. ಹಾಗಾಗಿ ಭಾಷೆಯಿಂದ ಬಾಂಧವ್ಯ. ಬಾಂಧವ್ಯದಿಂದ ಭರವಸೆ, ಭರವಸೆಯಿಂದ ಬದುಕು. ಈ ಬಾರಿಯ ನಾವಿಕ ವಿಶ್ವ ಕನ್ನಡದ ಘೋಷ ವಾಕ್ಯ, ಸಮ್ಮೇಳನದ ಆಶಯವನ್ನು ಚೆನ್ನಾಗಿ ಚಿತ್ರಿಸಿತು. ಸಂಚಾಲಕರಾದ ಡಾ ಕವಿತಾ ಕೊಟ್ರಪ್ಪ, ಅಧ್ಯಕ್ಷರಾದ ವಲ್ಲೀಶ್ ಶಾಸ್ತ್ರಿ ಮುಂದಾಳತ್ವ ವಹಿಸಿದ್ದರು.

ಸಮಾವೇಶವನ್ನು ಮುಖ್ಯಮಂತ್ರಿಗಳಾದ ಶ್ರೀ ಬಸವರಾಜ್ ಬೊಮ್ಮಾಯಿಯವರು ಅಂತರ್ಜಾಲದಲ್ಲಿ ಉದ್ಘಾಟಿಸಿ ಅನಿವಾಸಿ ಕನ್ನಡಿಗರು ವಿದೇಶಗಳಲ್ಲಿ ನೆಲೆಸಿದ್ದರೂ ಕನ್ನಡ, ಸಾಹಿತ್ಯ, ಸಂಸ್ಕೃತಿ, ಪರಂಪರೆಯನ್ನು ತಮ್ಮ ಮುಂದಿನ ಪೀಳಿಗೆಗೂ ಮುಂದುವರಿಸಿಕೊಂಡು ಹೋಗುತ್ತಿರುವ ಪ್ರಯತ್ನವನ್ನು ಮುಕ್ತ ಕಂಠದಿಂದ ಶ್ಲಾಘಿಸಿದರು.

ಈ ಸಲದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಂಸ್ಕೃತಿ ಸ್ಕೂಲ್ ಆಫ್ ಪರ್ಫಾರ್ಮಿಂಗ್ ಆರ್ಟ್ಸ್ ಬೆಂಗಳೂರು ಪ್ರಸ್ತುತ ಪಡಿಸಿದ "ದಶಾವತಾರ" ನೃತ್ಯನಾಟಕ, ರಾಹುಲ್ ವೆಲ್ಲಾಳ ಅವರ "ಸ್ವರ ಸಂಗಮ" ಶಾಸ್ತ್ರೀಯ ಸಂಗೀತ, ಮತ್ತು ಸರಿಗಮಪ ಗಾಯಕರಿಂದ "ಸುರ್-ತರಂಗ್" ಸಂಗೀತ ಕಾರ್ಯಕ್ರಮಗಳು ಪ್ರಮುಖ ಆಕರ್ಷಣೆಯಾಗಿದ್ದವು. ಖ್ಯಾತ ಕಲಾವಿದರೊಂದಿಗೆ ಹೊಸ ಕಲಾವಿದರಿಗೆ ಕೂಡ ಸಾಕಷ್ಟು ಅವಕಾಶ ನೀಡಲಾಗಿತ್ತು.

ನಾವಿಕ ಅಂತ್ಯಾಕ್ಷರಿ, ನಾವಿಕ ಕೋಗಿಲೆ, ನಾವಿಕ ಬಾಣಸಿಗ ( ನಾ ಎಂತ ಕುಕ್) , ಛಾಯಾ ನಾವಿಕ (ಫೋಟೋಗ್ರಫಿ) ಹೀಗೆ ಅನೇಕ ಸ್ಪರ್ಧೆಗಳು ನಡೆದವು. ಛಾಯಾ ನಾವಿಕ (ಫೋಟೋಗ್ರಫಿ) ಸ್ಪರ್ಧೆ ಯನ್ನು ಈ ಸಮ್ಮೇಳನದ ಟ್ಯಾಗ್ ಲೈನ್ ಆದ "ಭಾಷೆ, ಬಾಂಧವ್ಯ ಮತ್ತು ಭರವಸೆ" ಎಂಬ ಮೂರು ವಿಭಾಗಗಳಲ್ಲಿ ನಡೆಸಲಾಯಿತು.

**ಕನ್ನಡ ಪ್ರತಿಭಾನ್ವೇಷಣೆ:** ಅನಿವಾಸಿ ಕನ್ನಡ ಮಕ್ಕಳಿಗಾಗಿ ನಾವಿಕ ರೂಪಿಸಿದ ವಿಶೇಷ ಕಾರ್ಯಕ್ರಮ. ಇದರಲ್ಲಿ ವಿವಿಧ ವಯೋಮಾನದ ಮಕ್ಕಳಿಗಾಗಿ 'ಶಿಶು ಗೀತೆಗಳು' ಮತ್ತು 'ನೀತಿ ಕಥೆ' 'ಏಕಪಾತ್ರಾಭಿನಯ, 'ವಿಷಯಾಧಾರಿತ ಮಾತು' 'ಕರ್ನಾಟಕ ಸವಿರುಚಿ' 'ಕನ್ನಡ ವಾರ್ತಾ ಪ್ರಸಾರ' ಹಾಗೂ 'ಕವನ ವಾಚನ' ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಸಮ್ಮೇಳನದಲ್ಲಿ ವಿಶೇಷವಾಗಿ ಎಲ್ಲರ ಮನಸ್ಸು ಸೆಳೆದ ಈ ಸ್ಪರ್ಧೆ ಮುಂದಾಳತ್ವ ವಹಿಸಿದವರು ನಮ್ಮ ಉಮಾ ಕಾರಂತ್, ಜೊತೆಯಾದವರು ಶುಭಾ ಶಾಸ್ತ್ರಿ, ಉಷಾ ಬಸ್ರೂರ್. ಲೇಖಕಿ ಮೀರಾ ರಾಜಗೋಪಾಲ್ ನ್ಯೂ ಜೆರ್ಸಿ ಯಿಂದ ತೀರ್ಪುಗಾರರಾಗಿದ್ದರು. ನ್ಯೂ ಜೆರ್ಸಿಯ ಮಕ್ಕಳಾದ ತನವ್ ಗೌಡ, ಅಭಿನವ್ ರಮೇಶ, ಚಾರ್ವಿ ಮೋಹನ್, ಕೌಸ್ತುಭ್ ಸತ್ಯನಾರಾಯಣ್ ಬಹುಮಾನ ಗೆದ್ದರು.

**ನಾವಿಕ ಕೋಗಿಲೆ** ಮುಂದಾಳತ್ವ ಬೃಂದಾವನದ ಪ್ರಸನ್ನ ಕುಮಾರ್ ಅವರದ್ದಾದರೆ, ಅವರೊಂದಿಗೆ ಲಕ್ಷ್ಮಿ ಶೈಲೇಶ್, ಶ್ರೇಯಸ್ ಶ್ರೀಕರ್ ಸ್ಪರ್ಧೆಯ ಯಶಸ್ಸಿಗೆ ಕಾರಣರಾದರು. ನಾವಿಕ ನಾಟಕ ಸ್ಪರ್ಧೆಯಲ್ಲಿ ನ್ಯೂ ಜೆರ್ಸಿ ತಂಡದ "ಮರೆವಿನ ಮಹಾಪುರುಷರು" ನೋಡುಗರನ್ನು ರಂಜಿಸಿತು. ಪಾತ್ರವರ್ಗದಲ್ಲಿ ಪ್ರಸನ್ನ ಕುಮಾರ್, ಶ್ರೀಧರ್ ಬಾಣಾವರ, ಶ್ರೀಧರ್ ಸುಬ್ಬರಾವ್, ಸ್ವಾಮಿ ಭಟ್ಟ, ನಂದಿನಿ ಪ್ರಸಾದ್, ವಿವೇಕ್ ಪ್ರಸಾದ್ ಮುಂತಾದವರು ಇದ್ದರು. ನಾಟಕಕ್ಕೆ ಸಹಕಾರ ನೀಡಿದವರು ಪ್ರಶಾಂತ್ ಮುರುಗೇಂದ್ರಪ್ಪ, ಶೇಖರ್, ಸುಹಾಸ್, ನಂದೀಶ್, ಸ್ನೇಹ ಸುನೀಲ್ ಮತ್ತು ಶ್ರೀವಿದ್ಯಾ. ನಾಟಕದ ಅಭಿನಯಕ್ಕೆ ಪ್ರಶಸ್ತಿ ಸತ್ಯನಾರಾಯಣರಿಗೆ ಸೇರಿತು.

ಈ ಸಲದ ನಾವಿಕ ಸಾಹಿತ್ಯ ಸಮಿತಿಯ ಕೊಡುಗೆ ವಿಶೇಷವಾಗಿತ್ತು. ನಮ್ಮ ಭಾಸ್ಕರ್ ತೈಲಿಗೇರಿ ಹಲವು ಕಾರ್ಯಕ್ರಮಗಳ ಮುಂದಾಳತ್ವ ವಹಿಸಿದ್ದರು. ಕಾವ್ಯ ಸಿಂಚನ, ಕಹೂಟ್ ಕ್ವಿಜ್. ಅನಿವಾಸಿ ರಸಾನುಭವ ಎಲ್ಲರ ಮನಗೆದ್ದಿತು. ಕಾವ್ಯ ಸಿಂಚನದಲ್ಲಿ - ಶ್ರೇಯಸ್, ವಿನುತ ಶ್ರೀಧರ್, ಲಕ್ಷ್ಮಿಶೈಲೇಶ್ ಅಮೂಲ್ಯ ಪ್ರಖ್ಯಾತ ಕವನಗಳನ್ನ ಮನ ತುಂಬುವಂತೆ ಹಾಡಿದರು. ಕವನ ಸ್ಪರ್ಧೆಯಲ್ಲಿ ಶ್ರೀವಿದ್ಯಾ ಪ್ರಶಾಂತ್ ಮತ್ತು ಅನಿಲ್ ಭಾರದ್ವಾಜ್ ತಮ್ಮ ಸುಂದರ ಕವನಗಳಿಂದ ವಿಮರ್ಶಕರ ಮನಗೆದ್ದರು. ಅನಿವಾಸಿ ಅನುಭವದಲ್ಲಿ ನ್ಯೂಜೆರ್ಸಿ ಯಿಂದ ಸತೀಶ್ ಹೊಸನಗರ, ಶ್ರೀವಿದ್ಯಾ ಪ್ರಶಾಂತ್, ಉಷಾ ಪ್ರಸನ್ನ, ಸತ್ಯ ನಾರಾಯಣ, ರಾಘವೇಂದ್ರ ಕುಂದಲಗುರ್ಕಿ, ಭಾಸ್ಕರ್ ತೈಲಿಗೇರಿ ತಮ್ಮ ಮರೆಯಲಾರದ ಅನುಭವಗಳನ್ನು ಹಂಚಿಕೊಂಡರು.

ಈ ಸಮ್ಮೇಳನದ ಸ್ಮರಣ ಸಂಚಿಕೆ "ಭಾವಧಾರೆ"ಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಟಿ ಎಸ್ ನಾಗಾಭರಣ ಅವರು ಬಿಡುಗಡೆ ಮಾಡಿದರು. ಈ ಬಾರಿಯೂ ಕೂಡ ನಮ್ಮ ಬೃಂದಾವನ ಸಾಹಿತ್ಯ ಸಮಿತಿಯ ಸದಸ್ಯರಾದ ಶ್ರೀ ಮೂರ್ತಿಯವರು ಸಂಪಾದಕ ತಂಡದಲ್ಲಿದ್ದು ಸುಂದರ ಭಾವಧಾರೆಗೆ ತಮ್ಮ ಕೊಡುಗೆ ನೀಡಿದರು. ನಾವಿಕ ಸಮ್ಮೇಳನಕ್ಕೆ ಬೃಂದಾವನ ಸಂಭ್ರಮ ತಂಡ, ಅಧ್ಯಕ್ಷರಾದ ಪದ್ಮಿನಿ, ಟ್ರಸ್ಟಿಗಳಾದ ಬೆನ್ ಕಾಂತರಾಜು, ಸತೀಶ್ ಹೊಸನಗರ, ಡಾ ಬೆಂಗಳೂರು ಎಲ್ಲ ಸಹಾಯ ನೀಡಿದರು.

ನಾವಿಕದ ನ್ಯೂ ಜೆರ್ಸಿಯ ಮುಖ್ಯ ಕೊಂಡಿ ಗಿರೀಶ್ ನಿಂಬೆಕಾಯಿ ಬಿಜಿನೆಸ್ ಫಾರಂನ ಜವಾಬ್ದಾರಿ ವಹಿಸಿದ್ದರು. ಒಟ್ಟಾರೆ 6ನೇ ನಾವಿಕ ಸಮ್ಮೇಳನ ಒಂದು ಸುಂದರ ಬಹುಕಾಲ ನೆನಪಿನಲ್ಲುಳಿಯುವ ಅನುಭವ!



# ಜಯತು ಜೀವನದಿ

**ಹತ್ತಿಬೆಳಗಲ್ ನಾಗರಾಜ ರಾವ್,** ಜರ್ಮನಿ

ಸೆಪ್ಟೆಂಬರ್ ತಿಂಗಳ ಕೊನೆಯ ಭಾನುವಾರವನ್ನು " ವಿಶ್ವ ನದಿಗಳ ದಿನ " ಎಂಬುದಾಗಿ ಆಚರಿಸಲಾಗುತ್ತಿದೆ. 2005 ರಲ್ಲಿ ವಿಶ್ವಸಂಸ್ಥೆಯು "ವಾಟರ್ ಫಾರ್ ಲೈಫ್ ಡಿಕೇಡ್" ಅನ್ನುವ ಸಂದೇಶದ ಕಾರ್ಯಕ್ರಮದ ಯಶಸ್ವಿ ಸೂತ್ರವಾಗಿ ' ವಿಶ್ವ ನದಿಗಳ ದಿನ ' ದ ಅವತರಣಿಕೆಯಾದದ್ದನ್ನು ಸ್ಮರಿಸಬಹುದು. ನದಿಗಳ ಪ್ರಾಮುಖ್ಯತೆ, ಅವುಗಳಿಂದ ಏರ್ಪಡುವ ಬಗೆ ಬಗೆಯ ಜೀವ ವೈವಿಧ್ಯತೆ ಮತ್ತು ಸಾಂಗತ್ಯದ ಬದುಕು, ಅವುಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದರಿಂದ ಆಗುವ ಪ್ರಯೋಜನಗಳು ಇತ್ಯಾದಿಗಳ ಬಗ್ಗೆ ಜನರಲ್ಲಿ ಅರಿವನ್ನು ಮೂಡಿಸುವುದೇ ಧ್ಯೇಯವಾಗಿದೆ. ನದಿಗಳನ್ನು ಕಲುಷಿತಗೊಳಿಸುವುದರಿಂದ ಉಂಟಾಗುವ ಅನಾಹುತಗಳನ್ನು ಮನದಟ್ಟು ಮಾಡಿಕೊಟ್ಟು , ಮುಂಜಾಗ್ರತಾ ಕ್ರಮಗಳ ಬಗ್ಗೆ ಆಸ್ಥೆ ಮೂಡಿಸುವುದು ಮೂಲೋದ್ದೇಶವಾಗಿದೆ.

ಸಿಂಧೂ ಬಯಲಿನಿಂದ ಆರಂಭಿಸಿ ನೈಲ್ ನದಿ ದಡದ ಈಜಿಪ್ಟ್ ನಾಗರಿಕತೆಯ ವರೆಗಿನ ಎಲ್ಲ ನಾಗರಿಕತೆಗಳ ಪ್ರಾದುರ್ಭಾವಕ್ಕೆ ನದಿಪಾತ್ರಗಳದೇ ಸಾರಥ್ಯ. ಪ್ರಪಂಚವನ್ನು ಭೌಗೋಳಿಕವಾಗಿ ಖಂಡಗಳೆಂದು ಗುರುತಿಸುವಲ್ಲಿನ ಅಳತೆಗೋಲುಗಳಲ್ಲೂ ನದಿಗಳು ಪ್ರಮುಖ ಪಾತ್ರ ವಹಿಸಿವೆ. ಪ್ರಾಕೃತಿಕ ವಿಸ್ಮಯದ ಅಭಿವ್ಯಕ್ತಿಯಾಗಿ ಎಲ್ಲೋ ಧಾರೆಯಾಗಿ ಹುಟ್ಟುವ ನದಿಗಳು ಮಹಾಸಾಗರಗಳನ್ನು ಸೇರುತ್ತಾ ಸಾರ್ಥಕ ಗೊಳ್ಳುತ್ತವೆ. ಉದ್ಭವ ಮೂರ್ತಿಗಳಾಗಿ ಜನ ಜಾನುವಾರುಗಳಾದಿ ಜೀವಸಂಕುಲದ ದೇವತೆಯಾಗಿ ನದಿಗಳು ಸನಾತನ ಋಷಿ ಪರಂಪರೆಯಿಂದ ಪೂಜನೀಯವಾಗಿವೆ. " ಹೃದಯದಲಿ ಇದೇನಿದು ನದಿಯೊಂದು ಓಡಿದೆ ..." ಅನ್ನೋ ಅಣ್ಣಾವ್ರ ಕಂಠಸಿರಿಯಲ್ಲಿ ಅರಳಿರುವ ಭಾವಮಲ್ಲಿಗೆಗಳ ಬಳ್ಳಿಗಳಿಗೂ ನದಿಗಳು ಹೊಸಬಯಕೆಯ ಕಾಯಕಲ್ಪ ಒದಗಿಸಿವೆ. ನದಿಗಳು ಇಲ್ಲದಿದ್ದರೆ ನಾಗರೀಕತೆ ಇಲ್ಲ ಎಂಬುದು ಸರ್ವವೇದ್ಯವಾಗಿದ್ದರೂ, ನದಿಗಳು ವಿನಾಶದ ಅಂಚಿನಲ್ಲಿರುವುದು ಖೇದದ ಸಂಗತಿ. ಮನುಜರ ಸ್ವಾರ್ಥ ನಿಲುವುಗಳಿಂದ , ಒಣ ಪ್ರತಿಷ್ಠೆಗಳಿಂದ ಕೆಲ ನದಿಗಳು ತಮ್ಮ ಅಸ್ತಿತ್ವವನ್ನೇ ಕಳೆದುಕೊಳ್ಳುತ್ತಿವೆ. ಇದರಿಂದಾಗಿ ಪ್ರಪಂಚದೆಲ್ಲೆಡೆ ಕುಡಿಯಲು ಶುದ್ಧವಾದ ನೀರಿನ ಪ್ರಮಾಣ ಕಡಿಮೆಯಾಗುತ್ತ ಅಸುನೀಗುತ್ತಿರುವವರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ.

ಶ್ರೀ ರಾಘವೇಂದ್ರ ಗುರುಗಳು ತಮ್ಮ ಕೃತಿಯೊಂದರಲ್ಲಿ ಭಾರತದಲ್ಲಿನ ನದಿಗಳ ಪ್ರಾಮುಖ್ಯತೆಯ ಕುರಿತಂತೆ ಮತ್ತು ಅವುಗಳ ಅಂತರ್ಗತ ಭಾಗವದ್ರೂಪಗಳ ಚಿಂತನೆ ಕೈಗೊಂಡಿದ್ದಾರೆ. ಅಲ್ಲದಲೆ 350 ವರ್ಷಗಳ ಹಿಂದೆ ತಾವು ಸಶರೀರ ಬೃಂದಾವನ ಪ್ರವೇಶಿಸಿದ್ದುದು ತುಂಗಭದ್ರಾ ನದಿ ದಂಡೆಯಲ್ಲೇ. ಈ ನದಿಯಲ್ಲಿ ವರಾಹ ರೂಪದ ವಿಷ್ಣುವು ಅಂತರ್ಗತನಾಗಿರುವುದು ತಿಳಿದು ಬರುತ್ತದೆ.

ಅಧಿಕವಾಗುತ್ತಿರುವ ಜಾಗತಿಕ ತಾಪಮಾನ, ಬದಲಾಗುತ್ತಿರುವ ಮಳೆ ನಕ್ಷತ್ರದ ಕಾರ್ತಿಗಳು ಅಥವಾ ಮಾದರಿಗಳು ನದಿಗಳಲ್ಲಿ ನೀರಿನ ಹರಿವನ್ನು ಕುಂಠಿತಗೊಳಿಸಿವೆ. ಹವಾಮಾನದ ವೈಪರೀತ್ಯದ ಪರಿಣಾಮದಿಂದಾಗಿ ಒಂದೆಡೆ ತೀವ್ರ ಬಿರುಗಾಳಿಗಳು ನೀರಿನ ಗುಣಮಟ್ಟಕ್ಕೆ ಕುತ್ತಾಗಿದ್ದರೆ, ಪ್ರವಾಹ ಅಪಾಯಗಳು ಹೆಚ್ಚುತ್ತಿವೆ. ಇನ್ನೊಂದೆಡೆ ಜಲಮಾಲಿನ್ಯದ ಸಮಸ್ಯೆಯಿಂದಾಗಿ ನಿಸರ್ಗವೂ ತತ್ತರಿಸುತ್ತಿದೆ. ಹವಾಮಾನ ಬದಲಾವಣೆಗೆ ಪರಿಸರದ ಮೇಲಣ ಮಾನವನ ದಬ್ಬಾಳಿಕೆಯೇ ಕಾರಣ. ಅಂತರ್ಜಲ ಮಟ್ಟ ಕುಸಿಯುತ್ತಿರುವುದರಿಂದ ಅನೇಕ ಸಣ್ಣಪುಟ್ಟ ನದಿಗಳು ಕಣ್ಮರೆಯಾಗುತ್ತಿವೆ, ಜಲಮೂಲಗಳು ಬತ್ತಿಹೋಗುತ್ತಿವೆ.

ಸ್ನಾನಮಾಡುವಾಗ ನಮ್ಮ ಹಿರೀಕರು ದೇಹವನ್ನು ಸ್ವಚ್ಛಗೊಳಿಸುವ ನದಿಗಳನ್ನು ಕುರಿತಾಗಿ " ಗಂಗೇಚ ಯಮುನೆ ಕೃಷ್ಣೇ ಗೋದಾವರಿ ಸರಸ್ವತಿ ನರ್ಮದೆ ಸಿಂಧೂ ಕಾವೇರಿ ಜಲೇಸ್ಮಿನ್ ಸನ್ನಿಧಿಮ್ ಕುರು" ಎಂದು ಸ್ಮರಿಸುತ್ತಿದ್ದರು. ಇಂದಿನ ಆಧುನಿಕ ದಿನಮಾನದಲ್ಲಿ ಎಲ್ಲವೂ ಒಂದು ಗುಂಡಿ (ಬಟನ್) ಒತ್ತುವುದರಿಂದ ನೇರವಾಗಿ ನೀರು ತಲೆ, ಮೈ ಮೇಲೆ ತಾನಾಗೇ ಸುರಿಯಲ್ಪಡುವುದು. ಹಾಗಾಗಿ ಬಹಳಷ್ಟು ಜನರಿಗೆ ಈ ಸ್ತೋತ್ರವೇ ಗೊತ್ತಿಲ್ಲ. ಇನ್ನು ಪರಿಭಾವದ ಗೋಜು ಬೇಕಿಲ್ಲ. ತಾವು ಬಳಸುತ್ತಿರುವ ಜಲದ ಮೂಲ ಯಾವುದೆಂಬುದರ ಮಾಹಿತಿ ಸಂಗ್ರಹಣೆಯೂ ಅಪ್ರಸ್ತುತ. ಹೀಗಾದರೆ ಜಲಮೂಲಗಳಾದ ನದಿಗಳ ರಕ್ಷಣೆ ಬಗ್ಗೆ ಕಾಳಜಿ ಮೂಡಿಸುವುದು ದುಸ್ಸಾಧ್ಯವಾದೀತು. ಇಂಥ ಧೋರಣೆಗಳು ಬದಲಾಗಬೇಕಿದೆ.

ನೀರಿನ ಪ್ರಮಾಣ ಹೆಚ್ಚಿಸುವುದಕ್ಕೆ ಮುಖ್ಯವಾಗಿ ಒಳಹರಿವಿನ ಹೆಚ್ಚಳ, ಸಕಾಲಿಕ ಮಳೆ ಮತ್ತು ಅಂತರ್ಜಲ ಮಟ್ಟ ದಲ್ಲಿ ಹೆಚ್ಚಳ ಇವು ಪೂರಕವಾಗಿದ್ದು ನದಿಪಾತ್ರದಲ್ಲಿ ಸೂಕ್ತ ಅರಣ್ಯ ಅಭಿವೃದ್ಧಿ ಪಡಿಸಬೇಕಿದೆ. ಇವು ಮಣ್ಣಿನ ಸವಕಳಿಯನ್ನು ತಡೆಯುವುದಲ್ಲದೆ , ನೀರು ಬತ್ತಿಹೋಗುವುದನ್ನು ತಡೆಯುತ್ತದೆ. ನೀರಿನ ಗುಣಮಟ್ಟ ಉತ್ತಮ ರೀತಿಯಲ್ಲಿ ಕಾಯ್ದುಕೊಳ್ಳಲು ಮುಖ್ಯವಾಗಿ ರಾಸಾಯನಿಕ ವಸ್ತುಗಳು ನದಿಗೆ ಸೇರದಂತೆ ನಿಗಾ ವಹಿಸಬೇಕಿದೆ. ಚಂಡಮಾರುತಗಳು ಮರುಕಳಿಸದಿರಲು ಅಥವಾ ಉಂಟಾಗದಿರಲು ಹವಾಮಾನ ವೈಪರೀತ್ಯ ತಡೆಯುತ್ತ , ಜಾಗತಿಕ ತಾಪಮಾನ ತಗ್ಗಿಸುತ್ತ ಮುನ್ನಡೆಯಬೇಕಿದೆ.

ಸಾಮಾನ್ಯವಾಗಿ ಸ್ವಿಝರ್ಲ್ಯಾಂಡ್ ನ ನದಿಗಳನ್ನೋ, ನಯಾಗರ ಫಾಲ್ಸ್ ಅನ್ನೋ ವೀಕ್ಷಿಸಲು ಹೋದಾಗ ತೋರುವ ಸ್ವಚ್ಛತಾ ವ್ಯವಧಾನಗಳು ಜೋಗ ಜಲಪಾತ ವೀಕ್ಷಣೆಯಲ್ಲೂ, ನೇತ್ರಾವತಿ ಬಳಕೆಯಲ್ಲೂ ಸಾರ್ವತ್ರಿಕ ವಾಗಬೇಕಿದೆ. ಪುಣ್ಯಕ್ಷೇತ್ರಗಳಲ್ಲಿ ನದಿ ಸ್ನಾನದ ಆಚರಣೆಯಲ್ಲಿ ಒಂದಿಷ್ಟು ಶಿಸ್ತು , ರಾಸಾಯನಿಕಯುಕ್ತ ಸಾಬೂನು ಇತ್ಯಾದಿಗಳ ಬಳಕೆಗೆ ಕಡಿವಾಣ ಹಾಕುವುದು, ಮನಸೋ ಇಚ್ಛೆ ಅರಿವೆ ಮುಂತಾದವುಗಳನ್ನು ಎಸೆಯುವುದು ಇತ್ಯಾದಿಗಳನ್ನು ತಡೆಯಬೇಕಾಗಿದೆ. ಇದರಿಂದ ಅವುಗಳ ಪವಿತ್ರತೆಯನ್ನು ಗೌರವಿಸುತ್ತ ಪುಣ್ಯ ಸಂಪಾದನೆಗೆ ಪೂರಕವಾಗುತ್ತದೆ.

" ಜಯತು ಜೀವನದಿ " ಧ್ಯೇಯದೊಂದಿಗೆ ಪ್ರಕೃತಿಯೊಟ್ಟಿಗಿನ ನಮ್ಮ ಬಾಳು ಅರ್ಥಪೂರ್ಣವಾಗಲಿ. ಜನರಲ್ಲಿರುವ ವೈಜ್ಞಾನಿಕ ತಿಳುವಳಿಕೆಗಳು ಕಾರ್ಯರೂಪ ತಳೆದು ದಾಪುಗಾಲು ಇಡುತ್ತಾ ನದಿಗಳು ಸಂರಕ್ಷಿತವಾಗಲಿ. ನಿಸರ್ಗದ ಅನನ್ಯ ಅವಿನಾಭಾವದ ಚೆಲುಮೆಯಲಿ ರಮಣೀಯತೆ ಬತ್ತದಿರಲಿ.



# ಮರೆವಿನ ಮಹಾಪುರುಷರು

**ಸತ್ಯನಾರಾಯಣ್ ಕೃಷ್ಣಮೂರ್ತಿ,** *ನ್ಯೂ ಜರ್ಸಿ*

**ಏ**ನು ಬರೆಯಬೇಕು ಅಂತ ಅಂದುಕೊಂಡಿದ್ನೋ ಅದೇ ಮರ್ತೋಯ್ತಲ್ಲಾ! ಥೂ ಹಾಳಾದ್ದು ಈ ಮರೆವಿಗಿಷ್ಟು ಬೆಂಕಿ ಹಾಕ! ಈಗೇನು ಬರೆಯಲಿ? ಯಾವ ವಿಚಾರದ ಬಗ್ಗೆ ಬರೆಯಬೇಕಿಲ್ಲಿ? ಓಹ್! ಎಂಥಾ ಕೆಲಸ ಆಗೋಯ್ತು! ಹಾ, ಈಗ ನೆನಪಾಯ್ತು ನೋಡಿ! ನಾನೀಗ ಬರೆಯಬೇಕಾಗಿರೋದು ಮರೆವಿನ ಮಹಾಪುರುಷರ ಬಗ್ಗೆ. ಈ ತರಹದ ಸಂಭಾಷಣೆಯನ್ನೇ ಹೊಂದಿರುವ **"ಮರೆವಿನ ಮಹಾಪುರುಷರು"** ಎನ್ನುವ ನಾಟಕವನ್ನು ಈ ವರ್ಷ ನಾವಿಕೋತ್ಸವದ ನಾಟಕ ಸ್ಪರ್ಧೆಗೆ, ನಮ್ಮ ನ್ಯೂ ಜರ್ಸಿಯ **ಬೃಂದಾವನ ಕನ್ನಡ ಕೂಟ**ದಿಂದ, ೯ ಜನ ಮಹಾಪುರುಷರು, ಮಹಾಮಹಿಳೆಯರು ಅಭಿನಯಿಸಿ ಪ್ರದರ್ಶಿಸಿದೆವು. ಈ ನಾಟಕದ ನಂತರ ಎಲ್ಲಾ ವಿಷಯಗಳು ಮರೆತು ಹೋಗ್ತಾ ಇವೆಯೋ ಅಥವಾ ಈ ನಾಟಕದಲ್ಲೇ ನಾನಿನ್ನೂ ತಲ್ಲೀನನಾಗಿ, ಇದರ ಪ್ರತಿ ಅಂಶವನ್ನೂ ಅನುಭವಿಸುತ್ತಿರುವೆನೋ ತಿಳಿಯುತ್ತಿಲ್ಲ. ಈ ವಿಷಯದ ಬಗ್ಗೆ ಈಗ ಬರೆಯುತ್ತಿದ್ದೇನೆಂದರೆ, ಇದು ಖಂಡಿತಾ ಎರಡನೆಯದೇ ಆಗಿರಬೇಕು!

ಅಂತೂ ಇಂತೂ ನನ್ನ ನೆನಪಿನಂಗಳಕ್ಕೆ ಬಂದ ಈ ನಾಟಕದ ವಿಚಾರ, ನಮ್ಮ ಬೃಂದಾವನದ ಅಂಗಳಕ್ಕೆ ಬಂದದ್ದು, ಈ ವರ್ಷದ ಮೇ ತಿಂಗಳಿನ ಕೊನೆಯ ವಾರದ ಸರಿ ಸುಮಾರಿಗೆ. ಕಳೆದ ವರ್ಷದಂತೆ ಈ ವರ್ಷವೂ ಸಹ ಅಮೇರಿಕಾದ ನಾವಿಕ (ನಾವು ವಿಶ್ವ ಕನ್ನಡಿಗರು) ಸಂಸ್ಥೆ, ನಾವಿಕೋತ್ಸವವನ್ನು ವರ್ಚುಯಲ್ ಆಗಿ ಹಮ್ಮಿಕೊಳ್ಳುವ ತೀರ್ಮಾನ ತೆಗೆದುಕೊಂಡಿತು. "ರಂಗ ನಾವಿಕ" ವೇದಿಕೆಯಲ್ಲಿ ಭಾಗವಹಿಸಲು ವಿಶ್ವದ ಮೂಲೆ ಮೂಲೆಗಳಲ್ಲಿರುವ ಅನಿವಾಸಿ ಕನ್ನಡ ಕೂಟಗಳಿಂದ ನಾಟಕ ಸ್ಪರ್ಧೆಗಳಿಗೆ ಆಹ್ವಾನ ನೀಡಿತ್ತು. ನಮ್ಮ ನ್ಯೂ ಜರ್ಸಿಯ ಬೃಂದಾವನ ಕನ್ನಡ ಕೂಟಕ್ಕೂ ಇದೇ ಆಹ್ವಾನ ಬಂದಾಗ, ಅಧ್ಯಕ್ಷರಾದ ಶ್ರೀಮತಿ ಪದ್ಮಿನಿ ಹೇಮಂತ್ ಹಾಗು ಸಾಂಸ್ಕೃತಿಕ ನಿರ್ದೇಶಕರಾದ ಶ್ರೀಮತಿ ಅಮೃತಾ ಲಕ್ಷ್ಮೀಸನ್ ಅವರು ಮೊದಲು ಕರೆ ಮಾಡಿದ್ದು, ಬೃಂದಾವನ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ ಪ್ರಸನ್ನ ಕುಮಾರ್ ಹಾಗು ನಾಟಕದ ನಿರ್ದೇಶಕರಾದ ಶ್ರೀ ಸ್ವಾಮಿ ಭಟ್ಟ ಅವರಿಗೆ. ಕೋವಿಡ್ ನಿಂದ ಮುದುಡಿದ ಮನಗಳಿಗೆ ಮುದನೀಡಲು ಇವರು ಆಯ್ಕೆಮಾಡಿದ್ದು, ಶ್ರೀ ಗುಂಡೂರಾಯರು ಬರೆದಿರುವ "**ಮರೆವಿನ ಮಹಾಪುರುಷರು**" ಎಂಬ ಹಾಸ್ಯ ನಾಟಕವನ್ನು!!

ಈ ನಾಟಕದ ಅಭ್ಯಾಸಕ್ಕಾಗಿ, ವಾಟ್ಸಾಪ್ ಗುಂಪೊಂದನ್ನು ಮಾಡಿ, ಮೇ 27 ರಂದು ಅಮೃತಾ ಅವರು ನನಗೆ ಈ ನಾಟಕದಲ್ಲಿ ಪಾತ್ರವಹಿಸಲು ಆಮಂತ್ರಿಸಿದರು. ಆ ಗುಂಪಿಗೆ ಸೇರಿಕೊಂಡಾಗ ಅದರಲ್ಲಿದ್ದದ್ದು, ನಾನೂ ಸೇರಿ 11 ಮಂದಿ. ಆ ರಾತ್ರಿ ೮ ಗಂಟೆಯಿಂದ ಪ್ರತಿ ದಿನದ ವರ್ಚುಯಲ್ ತಾಲೀಮು ಶುರುವಾಯಿತು. ನಮ್ಮ ನಿರ್ದೇಶಕರಾದ ಸ್ವಾಮಿ ಭಟ್ಟ ಅವರು, ಮೊದಲ ದಿನ ಯಾರು-ಯಾರು ಯಾವ-ಯಾವ ಪಾತ್ರ ಮಾಡಬೇಕೆಂದು ನಿರ್ಧರಿಸಿದರು. ಪ್ರೊಫೆಸರ್ ಶ್ಯಾಮರಾಯರ ಪಾತ್ರವನ್ನು ನಾನು, ನನ್ನ ತಂದೆಯ ಪಾತ್ರ ಅಂದರೆ, ಪ್ರೊಫೆಸರ್ ನಾರಾಯಣರಾಯರಾಗಿ ಶ್ರೀ ಪ್ರಸನ್ನ ಕುಮಾರ್ ಅವರು, ಶ್ಯಾಮರಾಯರ ಸ್ನೇಹಿತ, ಪ್ರೊಫೆಸರ್ ಭುಜಂಗರಾಯರಾಗಿ ಶ್ರೀ ಶ್ರೀಧರ್ ಸುಬ್ಬರಾವ್ ಆಯ್ಕೆಯಾದೆವು. ಶ್ಯಾಮರಾಯರ ಪತ್ನಿಯ ಪಾತ್ರವನ್ನು ಶ್ರೀಮತಿ ನಂದಿನಿ ಪ್ರಸಾದ್, ನಾರಾಯಣರಾಯರ ಪತ್ನಿಯ ಪಾತ್ರವನ್ನು ಶ್ರೀಮತಿ ಸ್ನೇಹ ಸುನಿಲ್ ಮತ್ತು ಭುಜಂಗರಾಯರ ಪತ್ನಿಯ ಪಾತ್ರವನ್ನು ನಮ್ಮ ಬೃಂದಾವನ ವಾಣಿಯ ಸಂಪಾದಕರಾದ ಶ್ರೀಮತಿ ಶ್ರೀವಿದ್ಯಾ ಪ್ರಶಾಂತ್ ಅವರಿಗೆ ವಹಿಸಲಾಯಿತು. ಈ ಮರೆಗುಳಿಗಳಿಗೆ ನಾಟಕದುದ್ದಕ್ಕೂ ಜೊತೆಯಾಗಿ ಹಾಸ್ಯವನ್ನು ಇಮ್ಮಡಿಗೊಳಿಸುವ ಪಾತ್ರಗಳಾದ, ಪೋಸ್ಟ್ ಮ್ಯಾನ್ ಹಾಗೂ ಪುರೋಹಿತರಾಗಿ, ಶ್ರೀ ಶ್ರೀಧರ್ ಬಾಣಾವರ, ಹಾಲು ಮಾರುವ ಮುನಿಯನಾಗಿ ಶ್ರೀ ವಿವೇಕ್ ಪ್ರಸಾದ್ ಮತ್ತು ಕೂಲಿಯವನ ಪಾತ್ರವನ್ನು, ಶ್ರೀ ಸ್ವಾಮಿ ಭಟ್ಟ ಅವರು ವಹಿಸಿಕೊಂಡರು.

ಪ್ರಸನ್ನ ಅವರು, ದಿನನಿತ್ಯದ ಅಭ್ಯಾಸದ ವೇಳಾಪಟ್ಟಿಯನ್ನು ಸಿದ್ಧಪಡಿಸಿ, ವಾಟ್ಸಾಪ್ ನಲ್ಲಿ ಕಳುಹಿಸಿದರು. ಅಂದಿನಿಂದ ಪ್ರತಿದಿನ ರಾತ್ರಿ ೯ ಗಂಟೆಗೆ Zoom ನಲ್ಲಿ ಸಂಭಾಷಣೆಯ ಹಾಗೂ ಹಾವ-ಭಾವಗಳ ತಾಲೀಮು ಆರಂಭವಾಯಿತು. ನಾಟಕದ ತುಂಬಾ ಅತೀ ಉದ್ದವಾದ ಸಂಭಾಷಣೆಗಳು! ನಾಟಕದ ಹೆಸರು "**ಮರೆವಿನ ಮಹಾಪುರಷರು**" ಆದರೂ, ಯಾರೊಬ್ಬರೂ ಯಾವೊಂದು ಸಂಭಾಷಣೆಯನ್ನೂ ಮರೆಯಬಾರದು ಎಂಬ ಕಟ್ಟಪ್ಪಣೆ ನಮ್ಮ ನಿರ್ದೇಶಕರಿಂದ ಬಂದಿತು! ಜೂನ್ ತಿಂಗಳಿನಿಂದ ಆಗಸ್ಟ್ ವರೆಗೆ ಅಮೆರಿಕಾದಲ್ಲಿ ಮಕ್ಕಳಿಗೆ ಬೇಸಿಗೆ ರಜೆಯ ಕಾಲ. ಸುಮಾರು 18 ತಿಂಗಳ ಕಾಲ ಕರೋನ ಮಹಾ ಮಾರಿಯ ಭಯದಲ್ಲಿ ಮನೆಯ ನಾಲ್ಕು ಗೋಡೆಗಳಿಗೆ ಸೀಮಿತವಾಗಿ, ಕೋವಿಡ್ ನಿರೋಧಕ ಲಸಿಕೆ ಪಡೆದಿದ್ದ ಹಲವಾರು ಕುಟುಂಬಗಳು ವಿವಿಧ ಪ್ರವಾಸಗಳನ್ನು ಹಮ್ಮಿಕೊಂಡಿದ್ದವು. ಆದರೂ ನಾವಿಕೋತ್ಸವದ ಸಲುವಾಗಿ ಆ ಯೋಜನೆಗಳನ್ನು ಸ್ವಲ್ಪ ಪಕ್ಕಕ್ಕಿಟ್ಟು, ನಾವಿಕೋತ್ಸವದಲ್ಲಿ ಈ ನಾಟಕದ ಯಶಸ್ಸಿಗಾಗಿ ಭಾಗವಸಿದ್ದು ಮಾತ್ರ ಪ್ರಶಂಸನೀಯವಾಗಿತ್ತು. 2 ವಾರಗಳ ನಂತರ, ಪ್ರತಿ ಶುಕ್ರವಾರ ಸಂಭಾಷಣೆಯ ಹಾಗೂ ಅಭಿನಯದ ಅಭ್ಯಾಸವನ್ನು ಪ್ರಸನ್ನ ಅವರ ನೆಲಮಾಳಿಗೆಯಲ್ಲಿ (Basement) ಹಮ್ಮಿಕೊಳ್ಳಲಾಯಿತು. ಅಭ್ಯಾಸದ ನಂತರ ಪ್ರತಿಯೊಬ್ಬರ ಮನೆಯಿಂದ ತಂದ ರುಚಿ ರುಚಿಯಾದ ತಿಂಡಿ ತಿನಿಸುಗಳನ್ನು ಸಂತೃಪ್ತಿಯಲ್ಲಿ (ಪ್ರಸನ್ನ ಅವರ ಮನೆಯ ಹೆಸರು) ಮನಸ್ಸಂತೃಪ್ತಿಯಾಗುವ ವರೆಗೂ ತಿನ್ನುವ ಸೌಭಾಗ್ಯ ನನ್ನದಾಗಿತ್ತು!



ಅಂತೂ ಇಂತೂ ಜುಲೈ 18, ನಮ್ಮ ಶೂಟಿಂಗ್ ದಿನ ಬಂದೇ ಬಿಟ್ಟಿತು. ಮಧ್ಯಾಹ್ನ 2 ಗಂಟೆಯಿಂದ ಶೂಟಿಂಗ್ ಶುರು. ಅಮೃತಾ ಅವರ ಮನೆಯ ನೆಲಮಾಳಿಗೆ ನಮ್ಮ ನಾಟಕದ ವೇದಿಕೆಯಾಗಿತ್ತು. ನಮ್ಮ ಬೃಂದಾವನದ ತಾಂತ್ರಿಕ ವರ್ಗದ ಶ್ರೀ ಪ್ರಶಾಂತ್ ಮುರುಗೇಂದ್ರಪ್ಪ, ಶ್ರೀ ಶೇಖರ್ ಜಯರಾಮ್, ಶ್ರೀ ನಂದೀಶ್ ಮಠದ್, ಶ್ರೀ ಸುಹಾಸ್ ಕುಮಾರ್ ಕ್ಯಾಮೆರಾ-ಬೆಳಕಿನ ಪರಿಕರಗಳನ್ನು ಸಿದ್ಧಪಡಿಸಿದ್ದರು. ಪ್ರತಿ ದೃಶ್ಯಕ್ಕೆ ಬೇಕಾಗುವ ಮತ್ತು ದೃಶ್ಯಕ್ಕೆ ತಕ್ಕಂತೆ, ಶ್ರೀ ರಾಜೇಶ್ ಆಚಾರ್ಯ ಹಾಗೂ ಶ್ರೀ ಸುನಿಲ್ ನಾಯಕ್ ಸಿದ್ಧಪಡಿಸಿದ್ದ ರಂಗ ಪರಿಕರಗಳನ್ನು ನಾವೆಲ್ಲರೂ ಸೇರಿ ಜೋಡಿಸಿದೆವು. ಮೊದಲ ದೃಶ್ಯ ಚಿತ್ರೀಕರಿಸುವ ಸಮಯವದು. ಎಷ್ಟೇ ನಾಟಕದ ಅಭಿನಯದ ಅನುಭವವಿದ್ದರೂ, ಎಷ್ಟೇ ತಾಲೀಮು ನಡೆಸಿದ್ದರೂ ವೇದಿಕೆಯ ಮೇಲೆ ನಿಂತೊಡನೆ, ಕ್ಯಾಮೆರಾ ನೋಡಿತ್ತಿದ್ದಂತೆ ಏನೋ ಒಂದು ರೀತಿಯ ಅಂಜಿಕೆ ಸರ್ವೇಸಾಮಾನ್ಯ. ಎಲ್ಲಿ ಸಂಭಾಷಣೆ ಮರೆತುಹೋಗುವುದೋ ಎಂಬ ಭಯ! ಮೊದಲ ದೃಶ್ಯ ಪಕ್ವವಾಗುವ ಹೊತ್ತಿಗೆ, 10 ಸಲ ಆಕ್ಷನ್-ಕಟ್ ಅಂದಿದ್ದರು ನಮ್ಮ ನಿರ್ದೇಶಕ, ಸ್ವಾಮಿ ಭಟ್ಟ ಅವರು. ಅತ್ತ ಇಡೀ ತಂಡಕ್ಕೆ ಅಮೃತಾ ಅವರು ಕಾಫಿ, ತಿಂಡಿ ತಿನಿಸುಗಳನ್ನು ಪೂರೈಸುತ್ತಿದ್ದರು. ಎಲ್ಲ ದೃಶ್ಯಗಳೂ ಪೂರ್ಣವಾಗಿ ಚಿತ್ರೀಕರಣವಾಗುವ ಹೊತ್ತಿಗೆ, ರಾತ್ರಿ ೨ ಗಂಟೆ! ಏನೋ ಸಾಧಿಸಿದ ಸಾರ್ಥಕ ಭಾವ ನಮ್ಮೆಲ್ಲರ ಮನಸ್ಸಿನಲ್ಲಿ! ಇದಾದ ನಂತರ ನಮ್ಮ ನಾಟಕದ ವಿಡಿಯೋವನ್ನು ಸಂಕಲನ ಮಾಡಿ, ರಂಗ ನಾವಿಕ ಆಯೋಜಕರಿಗೆ ಸಲ್ಲಿಸಿದ ನಮ್ಮ ತಂತ್ರಜ್ಞರ ತಂಡಕ್ಕೆ ಎಷ್ಟು ಧನ್ಯವಾದ ಅರ್ಪಿಸಿದರೂ ಅದು ಕಡಿಮೆಯೇ. ಒಂದು ಸಂಪೂರ್ಣ ಸಾಂಘಿಕ ಪರಿಶ್ರಮಕ್ಕೆ ನಮ್ಮ ಈ ಬೃಂದಾವನ ಪ್ರಗತಿ ತಂಡ ಉದಾಹರಣೆಯಾಗಿತ್ತು.



ಕೇವಲ ನಮ್ಮ-ನಮ್ಮ ದೃಶ್ಯಗಳಲ್ಲಿ ಅಭಿನಯಿಸಿದ್ದ ನಮಗೆ, ಇಡೀ ನಾಟಕದ ಸಂಪೂರ್ಣ ಚಿತ್ರವನ್ನು ಸಮಗ್ರವಾಗಿ ನೋಡುವ ತವಕ, ನಾಟಕವನ್ನು ಇಡಿಯಾಗಿ ಪರದೆಯ ಮೇಲೆ ನೋಡುವ ತನಕ, ದಿನೇ ದಿನೇ ಹೆಚ್ಚಾಗುತ್ತಿತ್ತು! ಆಗಸ್ಟ್ 27, 28 ಮತ್ತು 29ರಂದು ನಡೆದ ನಾವಿಕೋತ್ಸವದಲ್ಲಿ ವಿಶ್ವದ ಹಲವು ಮೂಲೆಗಳಿಂದ 11 ನಾಟಕಗಳು ಪ್ರದರ್ಶಿತಗೊಂಡವು. ನಮ್ಮ ನಾಟಕ ಪ್ರಸಾರವಾಗಿದ್ದು, ಆಗಸ್ಟ್ 29 ರಂದು ಮಧ್ಯಾಹ್ನ 12 ಗಂಟೆ ಸುಮಾರಿಗೆ. ನಮ್ಮ ಸೆಲ್ ಫೋನುಗಳನ್ನು ಸೈಲೆಂಟ್ ಮೋಡ್ ನಲ್ಲಿ ಹಾಕಿ, ಪ್ರತಿಯೊಂದು ದೃಶ್ಯವನ್ನೂ ಖುಷಿಯಿಂದ ಕೇಕೇ ಹಾಕಿ, ಹೊಟ್ಟೆ ಹುಣ್ಣಾಗುವಂತೆ ನಗುತ್ತಾ ನೋಡಿ ಸಂಭ್ರಮಿಸಿದೆವು. ರಂಗಭೂಮಿ ಹಾಗೂ ಚಲನಚಿತ್ರದ ದಿಗ್ಗಜರಾದ ಶ್ರೀ ಟಿ. ಎಸ್. ನಾಗಾಭರಣ ಮತ್ತು ಶ್ರೀ ಮಂಡ್ಯ ರಮೇಶ್ ಅವರು ನಮ್ಮ ನಾಟಕಗಳ ತೀರ್ಪುಗಾರರಾಗಿದ್ದು, ಅವರ ತೀರ್ಪಿಗಾಗಿ ಎದುರು ನೋಡುತ್ತಿದ್ದದ್ದು, ನಮ್ಮ ಇಡೀ ತಂಡಕ್ಕೆ ಅಕಾಡೆಮಿ ಪ್ರಶಸ್ತಿ ವಿತರಣಾ ಸಮಾರಂಭವನ್ನು ನೆನಪಿಸುವಂತಿತ್ತು! ಅತ್ಯುತ್ತಮ ನಾಟಕ ಹಾಗು ಅತ್ಯುತ್ತಮ ನಟನೆಗೆ, ಗಿರೀಶ್ ಕಾರ್ನಾಡರ "ಮಾನಿಷಾದ" ನಾಟಕ ಪ್ರಶಸ್ತಿ ಪಡೆದುಕೊಂಡರೆ, ಅತ್ಯುತ್ತಮ ಪೋಷಕ ನಟ ಪ್ರಶಸ್ತಿ, ನಮ್ಮ ನಾಟಕದ ಶ್ಯಾಮರಾಯನ ಪಾತ್ರ ಅಭಿನಯಿಸಿದ ನನಗೆ ಸಿಕ್ಕಿದ್ದು, ಆಸ್ಕರ್ ಪ್ರಶಸ್ತಿಯೇ ಲಭಿಸಿದಂತೆ ಭಾಸವಾಗಿತ್ತು. ನಟನೆಯಲ್ಲಿ ಇನ್ನೂ ಅಂಬೆಗಾಲಿಡುತ್ತಿರುವ ನನ್ನನ್ನು ಗುರುತಿಸಿ, ನನಗೊಂದು ಮುಖ್ಯ ಪಾತ್ರವನ್ನು ನೀಡಿ, ಬಹುಮಾನ ಬರಲು ಕಾರಣರಾದ ಬೃಂದಾವನ ಕನ್ನಡ ಕೂಟಕ್ಕೆ ಹಾಗೂ ನಿರ್ದೇಶಕರಾದ ಶ್ರೀ ಸ್ವಾಮಿ ಭಟ್ಟ ಅವರಿಗೆ ಈ ಸಂದರ್ಭದಲ್ಲಿ ಈ ಲೇಖನದ ಮೂಲಕ ವೈಯುಕ್ತಿಕವಾಗಿ, ವಿನಮ್ರತೆಯಿಂದ ಧನ್ಯವಾದ ಸಮರ್ಪಿಸುತ್ತೇನೆ.



ಮನರಂಜನೆಗಾಗಿ ಅಭಿನಯಿಸಿದ **"ಮರೆವಿನ ಮಹಾಪುರುಷರು"** ಹಾಸ್ಯ ನಾಟಕ, ಕೇವಲ ಒಂದು ಗಂಟೆಯದ್ದಾದರೂ, ಸುಮಾರು ಒಂದೂವರೆ ತಿಂಗಳು ಪ್ರತಿದಿನ ಅಭ್ಯಾಸದಲ್ಲಿ ತೊಡಗಿದ್ದು, ಇಡೀ ತಂಡ ಒಂದಾಗಿ ಚಿತ್ರೀಕರಣದ ದಿನ ಶ್ರಮ ವಹಿಸಿದ್ದು, ಅಷ್ಟೂ ದಿನ ತಂಡದಲ್ಲಿ ಪ್ರತಿಯೊಬ್ಬರ ಜೊತೆಗಿನ ಒಡನಾಟ, ಹೊಸ ಸ್ನೇಹಿತರ ಪರಿಚಯ, ಚಿತ್ರೀಕರಣದ ವೇಳೆ ಸಂಭಾಷಣೆಗಳು ಮರೆತು ಹೋಗಿ, ಅದಲು-ಬದಲಾಗಿ, ನಾಲಗೆ ಕಚ್ಚಿಕೊಂಡು ನಮ್ಮ ಬಗ್ಗೆ ನಾವೇ ನಕ್ಕಿದ್ದು! ಹೀಗೆ ಪದಗಳಲ್ಲಿ ಬಣ್ಣಿಸಲಾಗದ ಈ ತರಹದ ಹತ್ತು ಹಲವಾರು ಅಮೂಲ್ಯವಾದ ಕ್ಷಣಗಳನ್ನು ನೂರು ವರ್ಷವಾದರೂ ಮರೆಯಲಾಗದು.

ಬನ್ನಿ ನಮ್ಮ ಮರೆಯಲಾಗದ "**ಮರೆವಿನ ಮಹಾಪುರುಷರ**" ಅವಸ್ಥೆಯನ್ನು ನೀವೂ ನೋಡಿ ನಕ್ಕುಬಿಡಲು, ಕೆಳಗಿನ ಯೂಟ್ಯೂಬ್ ಕೊಂಡಿಯನ್ನು ಕ್ಲಿಕ್ ಮಾಡಿ! (ಲೈಕ್ ಮಾಡಿ, ಬೃಂದಾವನ ಚಾನೆಲ್‌ಅನ್ನು ಸಬ್ ಸ್ಕ್ರೈಬ್ ಮಾಡಲು ಮರೆಯದಿರಿ)

**https://youtu.be/Ts1N9BLdPy4**



# ಇದು ಬರಿ ನಾಟಕವಲ್ಲ, ಕಿರುಚಿತ್ರ ಅಂದರೆ ತಪ್ಪಿಲ್ಲ

**ಪಲ್ಲವಿ ಮಂಜುನಾಥ್,** *ನ್ಯೂ ಜೆರ್ಸಿ*

**ಕೇ**ಳಿರಿ.., ಕೇಳಿರಿ.............ನಾವಿಕ 6ನೇ ವಿಶ್ವ ಕನ್ನಡ ಸಮಾವೇಶದ ಪ್ರಯುಕ್ತ, ನ್ಯೂ ಜೆರ್ಸಿ ಬೃಂದಾವನ ಕನ್ನಡ ಕೂಟದ ಮಕ್ಕಳು ಪ್ರಸ್ತುತ ಪಡಿಸಿದ "ನೀಲ" ನಾಟಕ ಮೂಡಿಬಂದ ಕಥೆಯನ್ನು!!!

ಈ ವರ್ಷದ ಮೇ ತಿಂಗಳಿನ ಕೊನೆಯ ವಾರದ ಹೊತ್ತಿಗೆ, ನನ್ನ ಮೊಬೈಲ್ ಗೆ, ನ್ಯೂ ಜೆರ್ಸಿಯ ಬೃಂದಾವನ ಕನ್ನಡ ಕೂಟದ ವತಿಯಿಂದ ಒಂದು ವಾಟ್ಸಾಪ್ ಸಂದೇಶ ಬಂದಿತು. ಆ ಸಂದೇಶದಲ್ಲಿ ಬೃಂದಾವನದ ಸದಸ್ಯರ ಆಸಕ್ತ ಮಕ್ಕಳಿಂದ, ನಾಟಕದಲ್ಲಿ ನಟಿಸಲು ಆಡಿಷನ್ನಿಗೆ ಆಹ್ವಾನ ನೀಡಲಾಗಿತ್ತು.ಅದನ್ನು ನೋಡಿದ ಕೂಡಲೇ, ನನ್ನ ಮಗಳಿಗಿಂತ ಹೆಚ್ಚು ಖುಷಿಯಾಗಿದ್ದು ನನಗೆ! ಸುಮಾರು ಒಂದು ವರ್ಷದಿಂದ ಕರೋನ ಮಾರಿಯ ಕಾರಣಗಳಿಂದಾಗಿ, ಯಾರನ್ನೂ ಮುಖತಃ ಭೇಟಿಯಾಗಲು ಸಾಧ್ಯವಾಗಿರಲಿಲ್ಲ. ಕೋವಿಡ್ ಲಸಿಕೆ ಪಡೆದಿದ್ದ ನನಗೆ, ಈ ನಾಟಕದ ದೆಸೆಯಿಂದ ಎಲ್ಲರನ್ನೂ ಭೇಟಿ ಮಾಡುವ ಸಂದರ್ಭ ಒದಗಿ ಬಂದಿತ್ತು. ಹಿಂದೆ ಮುಂದೆ ನೋಡದೇ, ನನ್ನ ಮಗಳನ್ನು ನೋಂದಾಯಿಸಿದೆ. ನನ್ನ ಹಾಗೆ ನಮ್ಮ ಬೃಂದಾವನದ ಹಲವಾರು ಪೋಷಕರು ತಮ್ಮ ತಮ್ಮ ಮಕ್ಕಳ ಹೆಸರನ್ನು ಕಳುಹಿಸಿದ್ದರು. ಮೊದಲಿಗೆ, ಇದೊಂದು ಸಣ್ಣ ನಾಟಕವಿರಬಹುದು ಎಂದು ಭಾವಿಸಿದ್ದ ನನಗೆ, ಅಂದಿನ ರಾತ್ರಿಯ Zoom ನಲ್ಲಿಯೇ ತಿಳಿದಿದ್ದು, ಇದು ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ೬ನೇ ನಾವಿಕೋತ್ಸವದಲ್ಲಿ ಪ್ರದರ್ಶಗೊಳ್ಳುವ ನಾಟಕ ಎಂದು ಮತ್ತು ಅದರಲ್ಲಿ ಬರೋಬ್ಬರಿ ೩೦ ಮಕ್ಕಳು ಭಾಗವಹಿಸುತ್ತಿದ್ದಾರೆಂದು! ಈ ನಾಟಕದಲ್ಲಿ ಭಾಗವಹಿಸಲು ಅವಕಾಶ ಪಡೆದ ಮಕ್ಕಳ ಮತ್ತು ಪೋಷಕರ ಖುಷಿ ಒಂದು ಕಡೆಯಾದರೆ, ಇಷ್ಟು ಮಕ್ಕಳನ್ನು ಒಗ್ಗೂಡಿಸಿಕೊಂಡು ಅವರಲ್ಲಿ ಹುದುಗಿರುವ ಸುಪ್ತ ಪ್ರತಿಭೆಯನ್ನು ಹೊರತರಲು ಹಾತೊರೆಯುತ್ತಿರುವ, ಉಮಾ, ಅರ್ಚನಾ, ಅಮೃತಾ ಅವರುಗಳನ್ನೊಳಗೊಂಡ ನಿರ್ದೇಶಕ, ಸಹಾಯಕ ನಿರ್ದೇಶಕರ ತಂಡದ ಉತ್ಸಾಹ ಇನ್ನೊಂದು ಕಡೆ!

ಮುಂದಿನ ಒಂದು ವಾರದೊಳಗೆ ಪ್ರತಿಯೊಂದು ಪಾತ್ರವನ್ನೂ ನಿರ್ಧರಿಸಿದ ನಿರ್ದೇಶಕಿ ಶ್ರೀಮತಿ ಉಮಾ ಕಾರಂತ್ ಅವರು ಆಯಾ ಪಾತ್ರಗಳ ಸಂಭಾಷಣೆಯನ್ನು ಆ ಪಾತ್ರಕ್ಕೆ ನಿರ್ಧರಿತವಾದ ಮಕ್ಕಳ ತಂದೆ ತಾಯಿಯರಿಗೆ ವಾಟ್ಸಾಪ್ ಮುಖೇನ ಕಳುಹಿಸಿದರು. ಅದಾದ ನಂತರ ೩ ನೇ ದಿನದಿಂದ, Zoom ನಲ್ಲಿ ಮಕ್ಕಳ ಸಂಭಾಷಣೆಯ ಅಭ್ಯಾಸ ಶುರುವಾಗಿಯೇ ಬಿಟ್ಟಿತು. ಪ್ರತಿ ದಿನ ಒಂದೂ ವರೆ ಗಂಟೆಯ ನಿರಂತರ ಅಭ್ಯಾಸ. ಬೇಸಿಗೆ ರಜೆಯ ಕಾರಣದಿಂದ ಕೆಲವು ಮಕ್ಕಳು ಕೆಲದಿನ ತಾಲೀಮನ್ನು ತಪ್ಪಿಸಿಕೊಂಡರೂ, ನಿರ್ದೇಶಕ ತಂಡದಿಂದ ಮಾತ್ರ ಒಂದು ದಿನವೂ ಅಭ್ಯಾಸದ Zoom sessions ತಪ್ಪಲಿಲ್ಲ. ಆನ್‌ಲೈನ್‌ನಲ್ಲಿ ಸಂಭಾಷಣೆಯ ಜೊತೆ ಜೊತೆಗೆ ಹಾವ ಭಾವದ, ನಟನೆಯ ಹಾಗೂ ನಾಟಕಕ್ಕೆ ಅವಶ್ಯಕತೆಯಿರುವ ನೃತ್ಯ ದೃಶ್ಯಗಳ ತರಬೇತಿಯೂ ಸೇರಿಕೊಂಡಿತು. ಮೊದಲ ಬಾರಿಗೆ, ನಾನಿರುವುದು ವಿದೇಶದಲ್ಲಲ್ಲ, ನನ್ನ ಮಾತೃಭೂಮಿ ಕರ್ನಾಟಕದಲ್ಲಿಯೇ ಇರುವೆನೋ ಎನ್ನುವ ಭಾವನೆ ಬರತೊಡಗಿತು. ನಿರ್ದೇಶಕರು, ಪೋಷಕರಿಂದ ಹಿಡಿದು ಮಕ್ಕಳವರೆಗೆ ನಾ ಮುಂದು, ತಾ ಮುಂದು ಎಂದು ಕನ್ನಡದಲ್ಲಿಯೇ ಮಾತನಾಡುತ್ತಿದುದು, ಕುವೆಂಪು ಅವರ ಕನಸಾದ "ಎಲ್ಲಾದರು ಇರು, ಎಂತಾದರು ಇರು, ಎಂದೆಂದಿಗೂ ನೀ ಕನ್ನಡವಾಗಿರು" ಎಂಬ ಮಾತುಗಳನ್ನು ನನಸಾಗಿಸುವಂತಿತ್ತು. ಪ್ರತಿ ಅಭ್ಯಾಸದ ನಂತರ, ಮಕ್ಕಳೇ ತಂತಮ್ಮ ಹಾಗೂ ತಮ್ಮ ಜೊತೆಗಾರರ ನಟನೆಯ ಬಗ್ಗೆ ವಿಮರ್ಶಿಸುತ್ತಾ, ಅಂಕಗಳನ್ನು ನೀಡಿ, ಸಲಹೆಯನ್ನೂ ನೀಡಿಕೊಳ್ಳುತ್ತಿದುದು, ಇದನ್ನು ನೋಡಿ ಪೋಷಕರು ಆನಂದಾಶ್ಚರ್ಯಗಳಿಂದ ಮೂಗಿನ ಮೇಲೆ ಕೈಇಟ್ಟುಕೊಳ್ಳುತ್ತಿದ್ದುದು ಸಾಮಾನ್ಯವಾಗಿತ್ತು. ವರ್ಚುಯಲ್ ತಾಲೀಮಾದರೂ ಶ್ರೀಮತಿ ಉಮಾ ಅವರು ಮಕ್ಕಳು ಯಾವ ದಿಕ್ಕಿನಲ್ಲಿ ನಿಂತು ಯಾವ ದಿಕ್ಕಿನಲ್ಲಿ ನೋಡುತ್ತಾ ನಟಿಸಬೇಕೆಂದು ಹೇಳಿಕೊಡುತ್ತಿದ್ದರು. ನಿರ್ದೇಶಕರ ಸೂಚನೆಗಳನ್ನು ಮಕ್ಕಳು ಅದನ್ನು ಚಾಚೂ ತಪ್ಪದೆ, ವೃತ್ತಿಪರ ಕಲಾವಿದರಂತೆ ಪಾಲಿಸುತ್ತಿದ್ದುದು, ಶ್ಲಾಘನೀಯವಾಗಿತ್ತು. ಇಂದೊಂದು ಅಭಿನಯದ ಬೇಸಿಗೆ ಶಿಬಿರದಂತೆ ಭಾಸವಾಗುತ್ತಿತ್ತು. ನಾಟಕದ ಜೊತೆಜೊತೆಗೆ ಮಕ್ಕಳ ವ್ಯಕ್ತಿತ್ವ ವಿಕಸನವೂ ಸದ್ದಿಲ್ಲದೇ ಆಗುತ್ತಿತ್ತು. ಹಾಗೂ ಹೀಗೂ ಸುಮಾರು ಒಂದು ತಿಂಗಳ ನಂತರ ನಾಟಕದ ಅಭ್ಯಾಸ, ಕೊನೆಯ ಹಂತವನ್ನು ಮುಟ್ಟಿತು. ನಾಟಕದ ಪಾತ್ರಗಳಲ್ಲಿ ಅಭಿನಯಿಸುತ್ತಿದ್ದ ಮಕ್ಕಳ ನೈಪುಣ್ಯತೆ ಎದ್ದು ಕಾಣುತ್ತಿತ್ತು.



ಎಲ್ಲ ಮಕ್ಕಳ ಹಾಗೂ ಪೋಷಕರ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು, ನಾಟಕದ ಚಿತ್ರೀಕರಣದ ವೇಳಾಪಟ್ಟಿಯನ್ನು ನಿಗಧಿಗೊಳಿಸಲಾಯಿತು. ಶೂಟಿಂಗಿಗೆ ನಮ್ಮ ಬೃಂದಾವನದ ಸಾಂಸ್ಕೃತಿಕ ನಿರ್ದೇಶಕರಾದ ಶ್ರೀಮತಿ

ಅಮೃತಾ ರಮೇಶ್ ಅವರ ಮನೆಯ ಬ್ಯಾಕ್ ಯಾರ್ಡ್ (ಹಿತ್ತಲು), ಸ್ಟುಡಿಯೋ ಆಗಿ ಮಾರ್ಪಾಡಾಯಿತು! ಚಿತ್ರೀಕರಣದ ವೇಳೆ ಕೋವಿಡ್ ನಿರ್ಬಂಧಗಳನ್ನು ಪಾಲಿಸುತ್ತಾ (ಮಾಸ್ಕ್ ಹಾಕಿ, ಸಾಮಾಜಿಕ ಅಂತರ ಕಾಪಾಡಿಕೊಂಡು) ಮಕ್ಕಳು, ಮತ್ತು ಅವರ ಜೊತೆ ಇಡೀ ನಾಟಕದ ಚಿತ್ರೀಕರಣ ಹಾಗೂ ನಿರ್ದೇಶನ ತಂಡದಲ್ಲಿ ಸುಮಾರು ೫೦ ಮಂದಿಯಿದ್ದರೂ, ಯಾವುದೇ ಬೇಸರವಿಲ್ಲದೆ, ಪ್ರತಿ ಕ್ಷಣವೂ ಮಂದಹಾಸದಿಂದ ನಮ್ಮನ್ನೆಲ್ಲಾ ಸ್ವಂತ ನೆಂಟರಂತೆ ಅತಿಥಿ ಸತ್ಕಾರ ಮಾಡುತ್ತಿದ್ದವರು ಈ ಅಮೃತಾ ಹಾಗು ರಮೇಶ್ ದಂಪತಿ. ಇವರಿಗೆ ಎಷ್ಟು ಧನ್ಯವಾದ ಅರ್ಪಿಸಿದರೂ ಅದು ಕಡಿಮೆಯೇ! ಭಾಗವಸಿದ ಅಷ್ಟೂ ಮಕ್ಕಳಿಗೆ ಸಂಜೆಯ ಸ್ನಾಕ್ಸ್ ಮತ್ತು ಅವರ ಪೋಷಕರಿಗೆ ಮಸಾಲ ಚಾಯ್ ರೆಡಿಯಾಗಿರುತಿತ್ತು. ಆಯಾ ದೃಶ್ಯಕ್ಕೆ ತಕ್ಕಂತೆ ಮಕ್ಕಳನ್ನು ಸರಿಯಾದ ಸಮಯಕ್ಕೆ ಡ್ರಾಪ್ ಮತ್ತು ಪಿಕಪ್ ಮಾಡುತ್ತಿದ್ದ ಪೋಷಕರು ಒಂದೆಡೆಯಾದರೇ, ಮಕ್ಕಳು ತಮ್ಮ ದೃಶ್ಯದ ಚಿತ್ರೀಕರಣದ ವೇಳೆ ಎಷ್ಟು ಸಲ ತಪ್ಪು ಮಾಡಿದರೂ, ಸ್ವಲ್ಪವೂ ಬೇಸರಿಸಿಕೊಳ್ಳದೇ ದೃಶ್ಯವನ್ನು ರೀಟೇಕ್ ಮಾಡುತ್ತಿದ್ದವರು, ನಮ್ಮ ಸಹನಾ ಮೂರ್ತಿಗಳಾದ, ಶ್ರೀ ನರಸಿಂಹ ಮೂರ್ತಿ, ಶ್ರೀ ರಾಜೇಶ್ ಆಚಾರ್ಯ ಹಾಗು ಶ್ರೀ ಪ್ರಶಾಂತ್ ಮುರುಗೇಂದ್ರಪ್ಪ ಅವರನ್ನೊಳಗೊಂಡ ತಾಂತ್ರಿಕ ತಂಡ. ಈ ತಂಡಕ್ಕೆ ಮತ್ತು ಅವರ ಸಹನೆಗೆ ಎಷ್ಟು ಸಲ್ಯೂಟ್ ಹೊಡೆದರೂ ಅದು ಸಾಲದು. ಚಿತ್ರೀಕರಣದ ದಿನಗಳಂದು ನಾವೆಲ್ಲರೂ ಶ್ರೀ ರಾಜೇಶ್ ಆಚಾರ್ಯ ಮತ್ತು ಶ್ರೀ ಸುನಿಲ್ ನಾಯಕ್ ಅವರು ಸಿದ್ಧಪಡಿಸಿದ್ದ ರಂಗ ಪರಿಕರಗಳನ್ನು ಸ್ವಲ್ಪವೂ ಟೈಮ್ ವೇಸ್ಟ್ ಮಾಡದೆ ಸಿದ್ಧ ಪಡಿಸುತಿದ್ದೆವು. ಒಮ್ಮೆಯಂತೂ ನಾವೆಲ್ಲರೂ ಅಮೃತಾ ಅವರ ಬ್ಯಾಕ್ ಯಾರ್ಡಿನಲ್ಲಿ ಈ ರಂಗ ಪರಿಕರಗಳನ್ನು ಸಿದ್ಧಪಡಿಸಿ, ನಮ್ಮ ನಿರ್ದೇಶಕಿ Action ಎನ್ನುವ ಹೊತ್ತಿಗೆ, ಯಾವುದೇ ಮುನ್ಸೂಚನೆಯಿಲ್ಲದೇ ಧೋ ಎಂದು ಒಂದೇ ಸಮನೆ ಮಿಂಚು ಗುಡುಗು ಮಿಶ್ರಿತ ಮಳೆ ಧಾರಾಕಾರವಾಗಿ ಬೀಳತೊಡಗಿತು. ನಾವೆಲ್ಲರೂ ಅಷ್ಟೇ ವೇಗದಲ್ಲಿ ತಂಡ ರಂಗ ಉಪಕರಣಗಳನ್ನೆಲ್ಲಾ ಮತ್ತೆ ವಾಪಸ್ಸು ಅಮೃತಾ ಅವರ ನೆಲಮಾಳಿಗೆಗೆ ತಲುಪಿಸಿದೆವು. ಈ ಅವಕಾಶವನ್ನೂ ವ್ಯರ್ಥ ಮಾಡದೆ, ನಮ್ಮ ನಿರ್ದೇಶಕಿ ಉಮಾ ಆ ಗುಡುಗಿನ ಶಬ್ಧವನ್ನು ರೆಕಾರ್ಡ್ ಮಾಡಿಕೊಂಡು ನಂತರ ಅದನ್ನೇ ಈನಾಟಕದ ಒಂದು ದೃಶ್ಯಕ್ಕೂ ಬಳಸಿದರೆಂದರೆ, ಅವರ ಕ್ರಿಯಾಶೀಲತೆಯನ್ನು ಹೊಗಳಲು ಶಬ್ದಗಳೇ ಸಿಗುತ್ತಿಲ್ಲ. ಈ ಘಟನೆ ನನ್ನ ನೆನಪಿನಂಗಳದಲ್ಲಿ ಸದಾ ಉಳಿಯುವುದರಲ್ಲಿ ಸಂದೇಹವೇ ಇಲ್ಲ. ಇಡೀ ನಾಟಕದ ಹೆಚ್ಚಿನ ದೃಶ್ಯಾವಳಿಗಳನ್ನು ಪ್ರಕೃತಿಯ ಮಡಿಲಲ್ಲೇ ಚಿತ್ರೀಕರಿಸಿದ್ದು ಈ ನಾಟಕದ ವಿಶೇಷತೆ!

ಈ ನಾಟಕದಲ್ಲಿ ಒಟ್ಟಾರೆ 3 ನೃತ್ಯ ದೃಶ್ಯಗಳಿದ್ದವು. ಹೆಣ್ಣುಮಕ್ಕಳ ನೃತ್ಯವಿರುವ ಒಂದು ದೃಶ್ಯವನ್ನು ನಿರ್ದೇಶಿಸುವ ಹೊಣೆ ನನ್ನದಾದರೆ, ಮತ್ತೊಂದು ನಾಟ್ಯ ದೃಶ್ಯದ (ಹೆಣ್ಣುಮಕ್ಕಳ ಗುಂಪಿನ) ನಿರ್ದೇಶನದ ಜವಾಬ್ದಾರಿ ಗೆಳತಿ, ವರ್ಷಾ ಜಯರಾಮ್ ಅವರ ಮೇಲಿತ್ತು. ಸವಾಲಿನ ಸಂಗಾತಿಯಾದ ಗಂಡು ಮಕ್ಕಳ ನೃತ್ಯ ನಿರ್ದೇಶನ ಯಶಸ್ವಿಯಾಗಿ ನಿಭಾಯಿಸಿದ್ದು, ನಮ್ಮ ಅಮೃತಾ ರಮೇಶ್! ಪುಟ್ಟ ಪುಟ್ಟ ಪುಟಾಣಿಗಳ ಜೊತೆ ನಾನೂ ಒಂದು ಮಗುವಿನಂತಾಗಿ ನೃತ್ಯ ಮಾಡಿದ ಅನುಭವವನ್ನು ಮತ್ತು ಆ ಭಾವನೆಗಳನ್ನು ಪದಗಳಲ್ಲಿ ಬಣ್ಣಿಸಲಾಗದು. ಚಿತ್ರೀಕರಣದ ವೇಳೆ ಅಲಂಕಾರ ಮಾಡಿಕೊಂಡು ಮುದ್ದು ಮುದ್ದಾಗಿ ತಾರೆಗಳಂತೆ ಹೊಳೆಯುತ್ತಿದ್ದ ಭವಿಷ್ಯದ ತಾರೆಗಳಾದ ಈ ಮಕ್ಕಳನ್ನು ನೋಡಲು ಎರಡು ಕಣ್ಣು ಸಾಲುತ್ತಿರಲಿಲ್ಲ. ಆ ನೃತ್ಯ ದೃಶ್ಯಾವಳಿಗಳನ್ನು ಚಲನ ಚಿತ್ರದ ಶೂಟಿಂಗ್ ನಂತೆ ಚಿತ್ರೀಕರಣ ಮಾಡಿದ್ದು, ಶ್ರೀ ಪ್ರಶಾಂತ್ ಮುರುಗೇಂದ್ರಪ್ಪ ಅವರು. ಇದೇನು ನಾಟಕವೋ ಇಲ್ಲ ಒಂದು ಚಲನ ಚಿತ್ರವೋ ಎಂಬ ಅನುಮಾನ ಮೂಡುತಿತ್ತು ನಮ್ಮ ಮನಸ್ಸುಗಳಲ್ಲಿ!



ಇಡೀ ಚಿತ್ರೀಕರಣ ಮುಗಿಯುವ ಹೊತ್ತಿಗೆ, ಎಲ್ಲರಲ್ಲೂ ಏನೋ ಸಾಧನೆಯನ್ನು ಮಾಡಿದ ಭಾವ! ಎಲ್ಲರ ಮುಖಗಳಲ್ಲೂ ಮೂಡುತ್ತಿದ್ದ ಆ ಸಂತೋಷದ ಮುಗುಳ್ನಗೆಗೆ ಬೆಲೆ ಕಟ್ಟಲಾಗದು. ಎಲ್ಲ ಮಕ್ಕಳ ಬಾಯಲ್ಲೂ ಒಂದೇ ಮಾತು, "ಏನು? ಶೂಟಿಂಗ್ ಇಷ್ಟು ಬೇಗ ಮುಗಿದೇಹೋಯಿತೇ? ನಾಳೆಯಿಂದ ಶೂಟಿಂಗ್ ಇರೋದಿಲ್ಲವೇ?" !!! ಪ್ರತಿ ದಿನದ ಚಿತ್ರೀಕರಣದ ಕೊನೆಯಲ್ಲಿ ನಮ್ಮೆಲ್ಲರಿಗೂ ದಣಿವನ್ನು ಮರೆಸುತ್ತಾ ಇದ್ದದ್ದು, ಎಲ್ಲರ ಮನೆಯಿಂದ ಬಂದಿದ್ದ ಬಗೆ ಬಗೆಯಾದ ರುಚಿ ರುಚಿಯಾದ ತಿಂಡಿ ತಿನಿಸುಗಳು. ಕಡಿಮೆಯೆಂದರೂ 15 ವಿವಿಧ ರೀತಿಯ ಭಕ್ಷ್ಯ ಭೋಜನಗಳು. ನಾಟಕದಲ್ಲಿ ಭಾಗವಹಿಸುವ ಸಂತಸ ಒಂದು ಕಡೆಯಾದರೆ, ಬಾಯಲ್ಲಿ ನೀರೂರಿಸುವ ತಿಂಡಿಗಳನ್ನು "ವನ ಭೋಜನ" ದಂತೆ, ಸ್ನೇಹಿತರ ಜೊತೆ ಹರಟುತ್ತಾ ಸವಿಯಲು ಅವಕಾಶ ಸಿಕ್ಕಿದ್ದು ಇನ್ನೊಂದು ಕಡೆಯಾಗಿ, ಆ ತಿಂಡಿಗಳ ರುಚಿಯನ್ನು ಇಮ್ಮಡಿಗೊಳಿಸಿತ್ತು. ಈ ಸಂದರ್ಭದಲ್ಲಿ ನಾಟಕದ ನಿರ್ಮಾಣ ಸಹಾಯಕ್ಕೆ ಕೈ ಜೋಡಿಸಿದ, ಪೋಷಕರಾದ ಶ್ರೀ ಸಂತೋಷ್, ಶ್ರೀಮತಿ ದಿವ್ಯಾ, ಶ್ರೀಮತಿ ಉಷಾ ಬಸ್ರೂರ್, ಶ್ರೀ ಸತ್ಯನಾರಾಯಣ್ ಅವರೆಲ್ಲರಿಗೂ ಧನ್ಯವಾದ ಹೇಳಲೇ ಬೇಕು.

ಚಿತ್ರೀಕರಣ ಮುಗಿದ ದಿನದಿಂದ, ನನ್ನ ಮಗಳು ಪ್ರತೀ ದಿನ, "ಅಮ್ಮ, ಉಮಾ ಆಂಟಿ, ಅರ್ಚನಾ ಆಂಟಿ ಮತ್ತೆ ಯಾವಾಗ ಇನ್ನೊಂದು ನಾಟಕ ಹೇಳಿಕೊಡ್ತಾರೆ? ನಾವ್ಯಾವಾಗ, ಮತ್ತೆ ಅಮೃತಾ ಆಂಟಿ ಮನೇಲಿ ಶೂಟಿಂಗಿಗೆ ಹೋಗೋದು?" ಅನ್ನೋ ಪ್ರಶ್ನೆಯನ್ನು ಕೇಳುತ್ತಲೇ ಇದ್ದಳು. ಇದೇ ಪರಿಸ್ಥಿತಿ ಉಳಿದೆಲ್ಲ ಪೋಷಕರದ್ದಾಗಿದ್ದರೆ, ಅದಕ್ಕೆ ಆಶ್ಚರ್ಯಪಡಬೇಕಾಗಿಲ್ಲ. 6-7 ವಾರಗಳ ಒಡನಾಟದಿಂದ, ನಾವೆಲ್ಲರೂ ಒಂದು ದೊಡ್ಡ ಜಾಯಿಂಟ್ ಫ್ಯಾಮಿಲಿಯ ಸದಸ್ಯರಾಗಿ ಹೋಗಿದ್ದೆವು! ಸುಮಾರು ಒಂದು ತಿಂಗಳ ಕಾಯುವಿಕೆಯ ನಂತರ ಆಗಸ್ಟ್ 29 ರ ಭಾನುವಾರ ಬಂದೇ ಬಿಟ್ಟಿತು! ನಾವೆಲ್ಲರೂ ಇಷ್ಟು ದಿನ, ಇಷ್ಟು ಕಾತರತೆಯಿಂದ ಕಾಯುತ್ತಿದ್ದುದು, 6ನೇ ವಿಶ್ವ ನಾವಿಕೋತ್ಸವದ "ರಂಗ ನಾವಿಕ" 3D ಸಭಾಂಗಣದಲ್ಲಿ ,ನಮ್ಮ ಪುಟಾಣಿ ಮಕ್ಕಳು ಅಮೋಘ ವಾಗಿ ನಟಿಸಿದ ನಾಟಕದ ಪ್ರದರ್ಶನವನ್ನು ಬೆಳ್ಳಿತೆರೆಯ

ಮೇಲೆ ನೋಡಲು! ಅಮೆರಿಕಾದ (EST) ಕಾಲಮಾನ, ಸುಮಾರು ३ ಗಂಟೆಗೆ ಪ್ರದರ್ಶಿತವಾದ ಈ ನಾಟಕವನ್ನು, ನ್ಯೂ ಜೆರ್ಸಿಯಲ್ಲಿ ಮಾತ್ರವಲ್ಲದೇ, ದೇಶ ವಿದೇಶಗಳಿಂದ ಸ್ನೇಹಿತರು ನೋಡಿ, ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಭಾರತದಲ್ಲಿ ನಿದ್ದೆ ಮಾಡದೆ ಟಿವಿ ಮುಂದೆ ಕುಳಿತು ಈ ನಾಟಕವನ್ನು ವೀಕ್ಷಿಸಿದ, ಈ ಮುದ್ದು ಮಕ್ಕಳ ಅಜ್ಜ ಅಜ್ಜಿಯರಿಗೆ ತಮ್ಮ ಮೊಮ್ಮಕ್ಕಳಲ್ಲಿ, ಚಲನಚಿತ್ರ ನಟ ನಟಿಯರನ್ನು ಕಂಡರು, ಸಂತೋಷದ ಕಡಲಲ್ಲಿ ತೇಲಾಡಿದರು!!

ನಾನು ಇಷ್ಟು ಹೊತ್ತು ಖುಷಿಯಿಂದ ವಿವರಿಸಿದ, ನಮ್ಮ ಮಕ್ಕಳ ಅಭಿನಯದ ನಾಟಕವನ್ನು, ನೀವೂ ನೋಡಬೇಕೆ? ಮಿಸ್ ಮಾಡದೆ ನೋಡಿ! ನೋಡಲು ಈ ಯೂಟ್ಯೂಬ್ ಲಿಂಕನ್ನು ಕ್ಲಿಕ್ ಮಾಡಿ. https://youtu.be/nK_VRgKXGxg (ಮರೆಯದೇ, ಚಾನೆಲ್ ಸಬ್ ಸ್ಕ್ರೈಬ್ ಮಾಡಿ)

ಅಂದ ಹಾಗೆ ನೀವು ಇಷ್ಟು ಹೊತ್ತು ಓದಿದ ನಾಟಕದ ಹೆಸರೇನು ಗೊತ್ತೇ? ನಮ್ಮ ಮನದ ಆಗಸವನ್ನು ಸೂರೆಗೊಂಡ, ರಸ್ಕಿನ್ ಬಾಂಡ್ ಅವರ ದಿ ಬ್ಲೂ ಅಂಬ್ರೆಲಾ ಸಣ್ಣ ಕಥೆಯ ಆಧಾರಿತ ನಾಟಕ,

*"ನೀಲ"!!*





# ನಮ್ಮೂರ ದಸರಾ - ಅದೆಷ್ಟು ಸುಂದರ..

**ಶ್ರೀವಿದ್ಯಾ ಪ್ರಶಾಂತ್,** *ನ್ಯೂ ಜೆರ್ಸಿ*



**ಕ**ರ್ನಾಟಕದ ನೈಋತ್ಯ ಭಾಗದಲ್ಲಿರುವ ಕರಾವಳಿ ತೀರದ ಸುಂದರ ನಗರಿಯೇ ನಮ್ಮ ಮಂಗಳೂರು. ತಾಯಿ ಮಂಗಳಾದೇವಿಯ ಕೃಪೆಯಿಂದ ಶ್ರೀಮಂತ ಸಂಸ್ಕೃತಿಯನ್ನು ಹೊಂದಿ ಬೆಳೆಯುತ್ತಿರುವ ತುಳುನಾಡು.



ಅದ್ಭುತ ಇತಿಹಾಸವಿರುವ ಈ ತುಳುನಾಡು ಪರಂಪರೆಯ ನೆಲೆಬೀಡೆಂದೇ ಹೆಸರುವಾಸಿ. ಯಕ್ಷಗಾನ, ಪಾಡ್ದನ, ಭೂತಕೋಲ, ಕಂಬಳ ಇತ್ಯಾದಿ ಜನಪದ ಶೈಲಿಯ ಕಲೆ ನಮ್ಮ ಸಂಸ್ಕೃತಿಯ ಪ್ರತೀಕ. ಆಯಾ ಋತುವಿಗೆ ಸರಿಯಾಗಿ ಹಬ್ಬ-ಹರಿದಿನಗಳಲ್ಲಿ ಕಂಡುಬರುವ ಪದ್ದತಿಗಳು ನಮ್ಮ ದಕ್ಷಿಣ ಕನ್ನಡದ ಆಚಾರ-ವಿಚಾರದ ಪ್ರತಿಬಿಂಬ ಎಂದರೆ ತಪ್ಪಾಗಲಾರದು. ಮುಖ್ಯವಾಗಿ ಆಷಾಡ ಮಾಸದ ಆಟಿ ಕಳೆಂಜೆ, ಅಷ್ಟಮಿಯ ಸಂದರ್ಭದ ಮೊಸರು ಕುಡಿಕೆ ಹಾಗೂ ನವರಾತ್ರಿ ಸಮಯದ ಹುಲಿವೇಷ ನಮ್ಮ ತುಳುನಾಡಿನ ಸಾಂಸ್ಕೃತಿಕ ಕಲೆಯ ಸಿರಿವಂತಿಕೆಯನ್ನು ಎತ್ತಿತೋರಿಸುತ್ತದೆ. ದಕ್ಷಿಣ ಕನ್ನಡ ಜಿಲ್ಲೆ ಎಂದು ಕರೆಯಲ್ಪಡುವ ನಮ್ಮ ಮಂಗಳೂರಿನಲ್ಲಿ ನವರಾತ್ರಿಯನ್ನು ಬಹಳ ವಿಜೃಂಭಣೆಯಿಂದ ಆಚರಿಸುತ್ತಾರೆ. ಆಶ್ವಯುಜ ಹಾಗು ಕಾರ್ತಿಕ ಮಾಸಗಳು ಶರತ್ಕಾಲದಲ್ಲಿ ಬರುವುದರಿಂದ ಇದನ್ನು ಶರನ್ನವರಾತ್ರಿ ಎಂದೂ ಕರೆಯಲಾಗುತ್ತದೆ.

ಮನೆಗಳಲ್ಲಿ ಹಬ್ಬದ ಆಚರಣೆ ಒಂದು ರೀತಿಯಲ್ಲಿದ್ದರೆ, ಸಾರ್ವಜನಿಕವಾಗಿ ಇನ್ನೂ ವಿಶೇಷವಾಗಿ ಆಚರಿಸಲ್ಪಡುತ್ತದೆ. ಪುಟ್ಟ ಮಕ್ಕಳಿಂದ ಹಿಡಿದು ಹಿರಿಯ ನಾಗರಿಕರೆಲ್ಲರ ಮನದಲ್ಲೂ ಸಂಭ್ರಮ-ಸಡಗರ. ಶಾಲಾ ಮಕ್ಕಳಿಗೆ ಮಧ್ಯವಾರ್ಷಿಕ ಪರೀಕ್ಷೆ ಮುಗಿದು ದೊರೆಯುವ 15 ದಿನಗಳ ರಜೆ ಹಬ್ಬವನ್ನು ಪೂರ್ಣ ರೀತಿಯಲ್ಲಿ ಆಸ್ವಾದಿಸಲು ಅನುವು ಮಾಡಿ ಕೊಡುತ್ತದೆ. ಮಂಗಳೂರು ದಸರಾ ಎಂದರೆ ಕರ್ನಾಟಕ ರಾಜ್ಯದ ಎರಡನೇ ಅತೀ ದೊಡ್ಡ ದಸರಾ ಮಹೋತ್ಸವ.

**ಪ್ರಮುಖವಾಗಿ ಶ್ರೀ ಮಂಗಳಾದೇವಿ ದೇವಸ್ಥಾನ:**
ಇಲ್ಲಿ ಒಂಬತ್ತು ದಿನ ನವ ವಿಧಗಳಲ್ಲಿ ದೇವಿಯನ್ನು ಅಲಂಕರಿಸಿ ಮಹಾನವಮಿಯಂದು ಆಯುಧ ಪೂಜೆ ಮಾಡಲಾಗುತ್ತದೆ. ದೇವಿ ಹಾಗು ರಾಕ್ಷಸರ ಮಧ್ಯೆ ಯುದ್ಧವಾಗಿ ಬಳಿಕ ದೇವಿ ಜಯಿಸಿದ ಸಂಕೇತವಾಗಿ ಈ ಪೂಜೆಯನ್ನು ಮಾಡಲಾಗುತ್ತದೆ. ಹತ್ತನೇ ದಿನ ಮಹಾರಥೋತ್ಸವ ನಡೆಯುತ್ತದೆ. ಸಹಸ್ರಾರು ಭಕ್ತರು ಆಗಮಿಸುತ್ತಾರೆ. ಸರ್ವಾಲಂಕೃತವಾದ ಬಲಿ ಮೂರ್ತಿಯನ್ನು ರಥದ ಮೇಲೆ ಕೂರಿಸಿ ಮೆರವಣಿಗೆ ಮಾಡಲಾಗುತ್ತದೆ. ಡೋಲು - ಚಂಡೆ - ಬೆಂಕಿ ಕುಣಿತ - ಹುಲಿವೇಷದ ತಂಡಗಳು, ನಾನಾ ಟ್ಯಾಬ್ಲೋಗಳು ಈ ಮೆರವಣಿಗೆಯ ಮುಖ್ಯ ಆಕರ್ಷಣೆಯಾಗಿರುತ್ತದೆ.



ಹುಲಿ ವೇಷವೆಂಬುವುದೊಂದು ವಿಶಿಷ್ಟ ಆಚರಣೆ. ದುರ್ಗೆಯ ಅಧಿಕೃತ ಪ್ರಾಣಿ ಹುಲಿ. ದುಷ್ಟ ಶಕ್ತಿಗಳಿಗೆ ಎಚ್ಚರಿಕೆ ನೀಡುವ ಸಂಕೇತವಾಗಿ, ದೇವಿಗೆ ಗೌರವ ಸಲ್ಲಿಸುವ ಸಲುವಾಗಿ ಕರಾವಳಿಯ ಯುವಕರು ಹುಲಿವೇಷವನ್ನು ಧರಿಸುತ್ತಾರೆ.



**ನವರಾತ್ರಿ ಸಂದರ್ಭದಲ್ಲಿ ಹುಲಿ ವೇಷ**

**ಕುದ್ರೋಳಿ ಶ್ರೀ ಗೋಕರ್ಣನಾಥೇಶ್ವರ ದೇವಸ್ಥಾನ:**
ಸುಮಾರು ಮೂವತ್ತು ವರ್ಷಗಳಿಂದ ನಡೆದುಕೊಂಡು ಬರುತ್ತಿರುವ ಮಂಗಳೂರಿನ ಹೃದಯ ಭಾಗದಲ್ಲಿರುವ ಕುದ್ರೋಳಿ ಶ್ರೀ ಗೋಕರ್ಣನಾಥೇಶ್ವರ ಕ್ಷೇತ್ರದ ನವರಾತ್ರಿ ಸಂಭ್ರಮವನ್ನು ಕಣ್ತುಂಬಿಯೇ ಸವಿಯಬೇಕು. ದೇವಾಲಯದ



ಮುಖ್ಯ ದ್ವಾರದಿಂದಲೇ ವರ್ಣರಂಜಿತವಾಗಿ ಅಲಂಕಾರಗೊಂಡ ವಿದ್ಯುದ್ದೀಪಗಳು ಮನಸೂರೆಗೊಳ್ಳುತ್ತವೆ. ಈ ಸಂಭ್ರಮದಲ್ಲಿ ಪಾಲ್ಗೊಳ್ಳಲು ಜನರು ದೇಶ-ವಿದೇಶಗಳಿಂದ ಸಾಗರೋಪಾದಿಯಲ್ಲಿ ಹರಿದು ಬರುತ್ತಾರೆ. ನಗರದ ಪ್ರಮುಖ ರಸ್ತೆಗಳಲ್ಲಿ ವಿದ್ಯುದ್ದೀಪಗಳ ಅಲಂಕಾರವು ನಗರದ ಸೌಂದರ್ಯವನ್ನು ಹೆಚ್ಚಿಸಿ ಇಡೀ ನಗರವೇ ಹಬ್ಬದ ವಾತಾವರಣದಿಂದ ಕಂಗೊಳಿಸುತ್ತದೆ. ಒಂಬತ್ತು ದಿನಗಳ ಪೂಜೆಯ ನಂತರ ವಿಜಯದಶಮಿಯಂದು ನವದುರ್ಗೆ-ಮಹಾಗಣಪತಿ ಹಾಗೂ ಶಾರದೆಯ ವಿಗ್ರಹಗಳನ್ನು ಹೂವು-ಛತ್ರಿಗಳಿಂದ ಅಲಂಕರಿಸಿ ಮೆರವಣಿಗೆಯನ್ನು ಮಾಡಲಾಗುತ್ತದೆ. ಧಾರ್ಮಿಕ ಹಾಗೂ ಸಾಂಸ್ಕೃತಿಕ



ಕಲೆಯನ್ನು ಪ್ರತಿಬಿಂಬಿಸುವ ಜನಪದ ನೃತ್ಯಗಳು, ಚೆಂಡೆ, ಯಕ್ಷಗಾನದ ಪಾತ್ರಗಳು ಹಾಗೂ ಹಲವು ಆಕರ್ಷಕ ಸ್ತಬ್ಧ ಚಿತ್ರಗಳು, ವರ್ಣರಂಜಿತ ಕಾರಂಜಿ ಕಣ್ಮನ ಸೆಳೆಯುತ್ತವೆ. ನಗರ ಪ್ರದಕ್ಷಿಣೆಯ ಬಳಿಕ ದೇವಸ್ಥಾನದ ಪುಷ್ಕರಣಿಯಲ್ಲಿ ವಿಗ್ರಹಗಳು ವಿಸರ್ಜನೆಗೊಳ್ಳುತ್ತವೆ. ಈ ಉತ್ಸವದಲ್ಲಿ ಸರ್ವಧರ್ಮೀಯರೂ ಪಾಲ್ಗೊಳ್ಳುತ್ತಾರೆ.

**ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ:**
ಮಂಗಳೂರು ನಗರದ ಸಮೀಪವಿರುವ ಕಟೀಲು ಶ್ರೀ ದುರ್ಗಾ ಪರಮೇಶ್ವರಿ ದೇವಸ್ಥಾನದಲ್ಲಿ ಕೂಡಾ ನವರಾತ್ರಿ ಮಹೋತ್ಸವವನ್ನು ಬಹಳ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಲಕ್ಷೋಪ ಲಕ್ಷ ಜನ ದೇವಿಯ ದರುಶನ ಪಡೆದು ಅನ್ನ ಪ್ರಸಾದವನ್ನು ಸ್ವೀಕರಿಸಿ ಕೃತಾರ್ಥರಾಗುತ್ತಾರೆ. ನವರಾತ್ರಿಯ ಲಲಿತಾ ಪಂಚಮಿಯ ದಿನ ದೇವಿಯ ಶೇಷ ವಸ್ತ್ರವನ್ನು ಪ್ರಸಾದ ರೂಪವಾಗಿ ಮಹಿಳಾ ಭಕ್ತೆಯರಿಗೆ ನೀಡಲಾಗುತ್ತದೆ. ಮಹಾನವಮಿಯಂದು ಕಟೀಲು ದೇವಿಯ ಸಾನಿಧ್ಯದಲ್ಲಿ ನಡೆಯುವ ಮಹಾರಂಗಪೂಜೆ ತುಂಬಾ ವಿಶೇಷ. ವಿಜಯದಶಮಿಯಂದು ಎಳೆಯ ಮಕ್ಕಳಿಗೆ ಅಕ್ಷರಾಭ್ಯಾಸವನ್ನು ಮಾಡಿಸಲಾಗುತ್ತದೆ.



ಹೀಗೆ ಸಾರ್ವಜನಿಕವಾಗಿ ನಡೆಯುವ ಉತ್ಸವದ ಸಂಭ್ರಮ ಒಂದೆಡೆಯಾದರೆ, ಮನೆ-ಮನೆಗಳಲ್ಲಿ ದುರ್ಗಾ ನಮಸ್ಕಾರ ಪೂಜೆ, ಲಲಿತಾ ಸಹಸ್ರನಾಮ ಪಠಣ, ಭಜನೆ ಇತ್ಯಾದಿ ಧಾರ್ಮಿಕ ಸೇವೆಗಳನ್ನು ಎಲ್ಲರೂ ಜೊತೆಗೂಡಿ ಶ್ರದ್ಧಾ-ಭಕ್ತಿಯಿಂದ ಸಲ್ಲಿಸುತ್ತಾರೆ. ಸಪ್ತಮಿಯಂದು ಪವಿತ್ರ ಗ್ರಂಥಗಳನ್ನು, ಶಾಲಾ ಪಠ್ಯ ಪುಸ್ತಕಗಳನ್ನೂ ಇರಿಸಿ ಉತ್ತಮ ಅಂಕಗಳು ದೊರಕಲೆಂದು ವಿದ್ಯಾರ್ಥಿಗಳು ಪ್ರಾರ್ಥಿಸುವುದು ರೂಢಿ. ನವಮಿಯಂದು ಆಯುಧ ಪೂಜೆಯ ದಿನ ಮನೆಯ ಕಬ್ಬಿಣದ ಸಲಕರಣೆಗಳನ್ನು, ಯಂತ್ರಗಳನ್ನು ಮತ್ತು ವಾಹನಗಳನ್ನು ಚೆನ್ನಾಗಿ ತೊಳೆದು ಸಿಂಗರಿಸಿ ಪೂಜೆಗೈಯಲಾಗುತ್ತದೆ. ಒಂಬತ್ತು ದಿನಗಳ ಹಬ್ಬವನ್ನು ಪೂಜಾ ಕಾರ್ಯಕ್ರಮ ಹಾಗೂ ಜಾತ್ರೆಯ ಸಂಭ್ರಮದೊಂದಿಗೆ ಕುಟುಂಬ ಹಾಗೂ ದೂರದಿಂದ ಬಂದ ನೆಂಟರಿಷ್ಟರೊಡಗೂಡಿ ಸವಿಯುವುದೇ ಒಂದು ಭಾಗ್ಯ.

ಹೀಗೆ ನಮ್ಮ ಈ ಸಂಪ್ರದಾಯ- ಆಚರಣೆಗಳು ಮುಂದುವರಿದು, ಮುಂಬರುವ ಪೀಳಿಗೆಯೂ ಪರಂಪರೆಯನ್ನು ಉಳಿಸಿ-ಬೆಳೆಸುವಂತಾಗಲಿ ಎಂಬ ಆಶಯಗಳೊಂದಿಗೆ, ಆ ಸರ್ವಮಂಗಳೆಯಾದ ದುರ್ಗಾಮಾತೆಯು ಎಲ್ಲರನ್ನೂ ಹರಸಲಿ ಎಂದು ಪ್ರಾರ್ಥಿಸುತ್ತಾ, ಶರನ್ನವರಾತ್ರಿ ಹಬ್ಬದ ಹಾರ್ದಿಕ ಶುಭಾಶಯಗಳನ್ನು ಕೋರುತ್ತೇನೆ.



# ಸಾಧು ಮತ್ತು ಹಾವಿನ ಕಥೆ

ಪರಿಮಳಾ ಕೌಜಲಗಿ

ಅದೊಂದು ಪುಟ್ಟ ಹಳ್ಳಿ. ಮಧ್ಯದಲ್ಲೊಂದು ಕೆರೆ. ಜನ-ಜಾನುವಾರುಗಳು ಕುಡಿಯಲು, ಬಟ್ಟೆ ಒಗೆಯಲು, ಮಕ್ಕಳು ಈಜಾಡಲು ಎಲ್ಲದಕ್ಕೂ ಕೆರೆಯ ನೀರೇ ಆಧಾರವಾಗಿತ್ತು.

ಒಮ್ಮೆ ಒಂದು ಮಳೆಗಾಲದಲ್ಲಿ ಎಲ್ಲಿಂದಲೋ ಒಂದು ವಿಷಕಾರಿ ಹಾವು ಬಂದು ಆ ಕೆರೆಯಲ್ಲಿ ಸೇರಿಕೊಂಡುಬಿಟ್ಟಿತು. ಕೆರೆಗೆ ಬರುವ ಜನರನ್ನೆಲ್ಲ ವಿನಾಕಾರಣ ಕಚ್ಚಿಬಿಡುತ್ತಿತ್ತು. ಜನ ದಿಗಿಲುಗೊಂಡರು. ಯಾರಿಗೂ ಅದನ್ನು ಹಿಡಿಯುವ ಧೈರ್ಯ ಬರಲಿಲ್ಲ. ಹೀಗಿರುವಾಗ ಒಬ್ಬ ಸಾಧು ಸಂಚಾರ ಮಾಡುತ್ತ ಆ ಹಳ್ಳಿಗೆ ಬಂದು ಕೆಲದಿನಗಳವರೆಗೆ ತಂಗಿದನು.



ಜನರೆಲ್ಲ ಸೇರಿ ಆ ಸಾಧುವಿನ ಬಳಿಗೆ ಹೋಗಿ ತಮ್ಮ ಕಷ್ಟವನ್ನು ಹೇಳಿಕೊಂಡರು. ಸಿದ್ಧಪುರುಷನಾದ ಆ ಸಾಧು ಹಾವಿನ ಬಳಿಗೆ ಹೋಗಿ ಅದರ ಭಾಷೆಯಲ್ಲೇ ಮಾತನಾಡಿ ಅದಕ್ಕೆ ಬುದ್ಧಿ ಹೇಳಿದ. ಮುಂದೆ ಯಾರನ್ನಾದರೂ ವಿನಾಕಾರಣ ಕಚ್ಚಬಾರದೆಂದು ತಾಕೀತು ಮಾಡಿದ. ಅವನ ಮಾತಿಗೆ ಬೆಲೆಕೊಟ್ಟು ಆ ಹಾವು ತನ್ನ ಹಿಂಸಾಪ್ರವೃತ್ತಿಯನ್ನು ಬಿಟ್ಟು ಸಾಧುಸ್ವಭಾವದ್ದಾಗಿ ಪರಿವರ್ತನೆಗೊಂಡಿತು. ತಾನು ಮತ್ತೆ ತಿರುಗಿಬರುವುದಾಗಿ ಹೇಳಿ ಸಾಧು ಮುಂದೆ ಹೊರಟುಬಿಟ್ಟ.

ಕ್ರಮೇಣ ಜನರಿಗೂ ಅದರ ಪರಿವರ್ತನೆಯ ಅರಿವಾಗಿ ಎಲ್ಲರೂ ನಿರ್ಭೀತರಾದರು. ಆಟವಾಡಲು ಬರುವ ಮಕ್ಕಳು ಅದರ ಮೇಲೆ ಕಲ್ಲು ಎಸೆಯತೊಡಗಿದರು. ಕೆಲವರು ಅದನ್ನು ಅನಾಮತ್ತಾಗಿ ಎತ್ತಿ ಕೆರೆಗೆ ಎಸೆಯುವರು, ತಿರುಗಿ ಬಂದರೆ ಮತ್ತೆ ಎಸೆಯುವುದು ಮಾಡತೊಡಗಿದರು. ಮೈಯೆಲ್ಲ ಗಾಯವಾದರೂ ಹಾವು ತೆಪ್ಪಗಿರುತ್ತಿತ್ತು. ಕೆಲವೊಮ್ಮೆ ಹೆಂಗಸರು ಅದನ್ನೇ ಬಟ್ಟೆಯಂತೆ ಸುತ್ತಿ ತಲೆಯ ಮೇಲೆ ಇಟ್ಟುಕೊಂಡು ಮೇಲೆ ಭಾರವಾದ ಕೊಡವನ್ನು ಹೊತ್ತುಕೊಳ್ಳತೊಡಗಿದರು. ಹಾವಿನ ಗೋಳು ಹೇಳತೀರದಾಯಿತು. ದಷ್ಟಪುಷ್ಟವಾಗಿದ್ದ ಅದು ಸೊರಗಿ ಸಾಯುವಂತಾಯಿತು. ಕೆಲದಿನಗಳ ನಂತರ ಸಾಧು ಸಂಚಾರ ಮುಗಿಸಿ ತಿರುಗಿ ಅದೇ ಊರಿಗೆ ಬಂದು ತಂಗಿದನು. ಹಾವಿನ ಬಗ್ಗೆ ಅವನಿಗೂ ಕುತೂಹಲವಿತ್ತಲ್ಲ, ಕೆರೆಗೆ ಹೋಗಿ ನೋಡಿದನು. ಹಾವು ಗುರುತೇ ಸಿಗದಷ್ಟು ಬಡಕಲಾಗಿತ್ತು. ಮೈಯೆಲ್ಲ ಹುಣ್ಣುಗಳು ತುಂಬಿಹೋಗಿದ್ದವು. ಕನಿಕರಗೊಂಡು ಸಾಧು ಅದರ ಆರೈಕೆ ಮಾಡಿದನು. ಅವನ ಸ್ಪರ್ಶದಿಂದ ಅದರ ಗಾಯಗಳೆಲ್ಲ ವಾಸಿಯಾದವು. ಕ್ರಮೇಣ ಶಕ್ತಿ ಬರತೊಡಗಿತು. ಸಾಧು ಕೇಳಿದ "ಹೇಳು ನಿನಗೆ ಈ ಸ್ಥಿತಿ ಹೇಗೆ ಬಂದಿತು?" ಎಂದು. ಹಾವು ತನ್ನ ಕಥೆಯನ್ನು ಹೇಳಿತು.

ಆಗ ಸಾಧುವೆಂದ "ನಾನು ನಿನಗೆ ವಿನಾಕಾರಣ ಜನರಿಗೆ ಕಚ್ಚಬೇಡವೆಂದು ಹೇಳಿದ್ದೆ. ನಿನಗೆ ತೊಂದರೆ ಕೊಡಲು ಬಂದವರಿಗೆ ಬುಸುಗುಡುವುದನ್ನಾಗಲೀ, ನಿನ್ನನ್ನು ಸಾಯಿಸಲು ಬಂದವರಿಗೆ ಕಚ್ಚುವದನ್ನಾಗಲೀ ಮಾಡಬೇಡವೆಂದು ನಾನು ನಿನಗೆ ಹೇಳಿರಲಿಲ್ಲವಲ್ಲ? ಇನ್ನುಮೇಲೆ ನಿನ್ನ ರಕ್ಷಣೆ ಮಾಡಿಕೊಳ್ಳಲು ನೀನು ಬುಸುಗುಡುತ್ತ ಜನರನ್ನು ಹೆದರಿಸುತ್ತಿರು" ಎಂದು ಹೇಳಿ ಮುಂದೆ ಸಾಗಿದ. ಸಾಧು ಹೇಳಿದಂತೆ ಮಾಡಿದ ಹಾವು ಅಲ್ಲಿಯೇ ಸುಖವಾಗಿತ್ತು.

ನಮ್ಮ ಜೀವನದಲ್ಲಿಯೂ ಹಾಗೆ ಅಲ್ಲವೇ? ವಿನಾಕಾರಣ ಹಗೆತನ ಸಾಧಿಸುವುದು ತಪ್ಪು, ಆದರೆ ನಮ್ಮ ರಕ್ಷಣೆಯನ್ನು ನಾವು ಧೈರ್ಯದಿಂದ ಮಾಡಿಕೊಳ್ಳಬೇಕಲ್ಲವೇ? ಅಷ್ಟೇ ಅಲ್ಲ, ನಮ್ಮ ಮಾತೃಭೂಮಿ, ಮಾತೃಭಾಷೆ, ಸಂಸ್ಕೃತಿಗಳ ಘನತೆಗೆ ವಿನಾಕಾರಣ ನಿಂದನೆಗಳು ಬಂದಾಗ ಶಾಸನದ ಚೌಕಟ್ಟಿನಲ್ಲಿದ್ದುಕೊಂಡು ಅವುಗಳನ್ನು ವಿರೋಧಿಸುವುದು ನಮ್ಮೆಲ್ಲರ ಧರ್ಮವಲ್ಲವೇ?



# ಇಚಪ್ಪ

**ಪ್ರಶಾಂತ್ ಮುರುಗೇಂದ್ರಪ್ಪ,** ನ್ಯೂ ಜೆರ್ಸಿ

**ಭಾ**ದ್ರಪದ ಶುಕ್ಲದ ಚೌತಿಯಂದು ಗಜಮುಖನೇ, ಗಣಪತಿಯೇ ನಿನಗೆ ವಂದನೆ ಎಂದು ನಾವೆಲ್ಲರೂ ಪ್ರತಿ ವರ್ಷ ವಿನಾಯಕ ಚತುರ್ಥಿಯನ್ನು ಬಹು ವಿಜೃಂಭಣೆಯಿಂದ ಆಚರಿಸುತ್ತೇವೆ. ಈ ಹಬ್ಬದಲ್ಲಿ ನಮ್ಮ ಮನೆಯಲ್ಲಿ ಇನ್ನೊಂದು ಸಂಪ್ರದಾಯದ ಆಚರಣೆಯಿದೆ. ನಾವು ವಿನಾಯಕ ಮೂರ್ತಿಯ ಬದಲಿಗೆ, ಮೂಷಕ ವಾಹನ "ಇಚಪ್ಪ" (ಇಲಿರಾಯ )ನನ್ನು ಪೂಜಿಸುತ್ತೇವೆ. ಹೌದು!! ಇದು ತಮಾಷೆಯಲ್ಲ, ಮಧ್ಯ ಮತ್ತು ಉತ್ತರ ಕರ್ನಾಟಕದ ಬಹಳಷ್ಟು ಕುಟುಂಬಗಳಲ್ಲಿ ಇದನ್ನು ಆಚರಿಸುವ  ವಾಡಿಕೆಯಿದೆ.

ಹಬ್ಬದ ದಿವಸ, ಪೇಟೆಯಲ್ಲಿ ಗಣಪತಿ ಮೂರ್ತಿಯ ಜೊತೆಗೆ ಇಚಪ್ಪನ ಮೂರ್ತಿಗಳು ನಮ್ಮ ಮನೆಗೆ ಬರಲು ತಯಾರಾಗಿ  ಕೈಬೀಸಿ ಕರೆಯುತ್ತವೆ. ಗಣಪನ ಮೂರ್ತಿಗೆ ಸರಿಸಮವಾಗಿ ಸಿಂಹಾಸನದಲ್ಲಿ ಕುಳಿತುರುವ ಇಚಪ್ಪ , ನಿಂತು ಕಡುಬನ್ನು ಆಸ್ವಾದಿಸುತ್ತಿರುವ ಇತ್ಯಾದಿ ವಿವಿಧ ವೇಷ -ಭೂಷಣಗಳಲ್ಲಿ ಇಚಪ್ಪನ ಮೂರ್ತಿಗಳು ಲಭ್ಯ.

ಗೌರಿ ಜೊತೆಗೆ, ಬೆಳ್ಳಿಯ ಗಣಪತಿಯ ಮುಂದೆ ಇಚಪ್ಪನನ್ನು ಪ್ರತಿಷ್ಠಾಪನೆ ಮಾಡಿ ಪೂಜೆ ಮಾಡುತ್ತೇವೆ. ರಾತ್ರಿ ಹಬ್ಬದ ಊಟ ಮಾಡಿದ ಮೇಲೆ, ಗಣಪತಿ ವಿಸರ್ಜನೆಯ ತರಹ, ಹತ್ತಿರದ ಕಾಲುವೆಯಲ್ಲಿ ಸಕಲ ಪೂಜೆಗಳೊಂದಿಗೆ ಇಚಪ್ಪನ ವಿಸರ್ಜನೆಯನ್ನೂ  ಮಾಡಿ ಬರುತ್ತೇವೆ.









# ದೋಣಿ ತೆರವು (ಬೋಟ್ ಲಿಫ್ಟ್)

**ಚಂದ್ರ,** ನ್ಯೂ ಜರ್ಸಿ

**ಅ**ದೊಂದು ಸಾಮಾನ್ಯ ದಿನ. ನಾನು ಮತ್ತು ನನ್ನ ಸಹೋದ್ಯೋಗಿಗಳು ನಮ್ಮ ನಮ್ಮ ಆ ದಿನದ ಕೊನೆಯ ಕೆಲಸವನ್ನ ಮುಗಿಸಿ ಮನೆಗೆ ತೆರಳುವ ತಯಾರಿಯಲ್ಲಿದ್ದೆವು. ಅಂದಿಗೆ, ನಮ್ಮದೊಂದು ಚಿಕ್ಕ ಸಾಫ್ಟ್ವೇರ್ ಸಂಸ್ಥೆ, ಆಗತಾನೇ ಶುರುಮಾಡಿದ್ದೆವು. ನಾನು ಸಂಸ್ಥೆಗೆ ಸೇರಿ ಕೇವಲ ಕೆಲವು ವಾರಗಳು ಕಳೆದಿದ್ದವು, ಅಷ್ಟೆ. ಸಂಸ್ಥೆ ಹೊಸದಾದ್ದರಿಂದ, ನಾವು ಸ್ವಲ್ಪ ಹೆಚ್ಚು ಸಮಯವನ್ನ ಕಛೇರಿಯಲ್ಲಿ ಕಳೆಯುತ್ತಿದದ್ದು ಸಾಮಾನ್ಯವಾಗಿತ್ತು. ಹೆಚ್ಚು ಕೆಲಸ ಮಾಡಿ, ಬೇಗ ಗುರಿ ಮುಟ್ಟಿ, ಗ್ರಾಹಕರನ್ನ ಮೆಚ್ಚಿಸಿ ಹೆಚ್ಚು ಹೆಚ್ಚು ಕೆಲಸ ಗಿಟ್ಟಿಸುವ ಪ್ರಯತ್ನವಾಗಿತ್ತು.

ಸಂಸ್ಥೆ ಚಿಕ್ಕದಾಗಿದ್ದರಿಂದ, ಸಂಸ್ಥೆಯ ಕಚೇರಿಯೂ ಚಿಕ್ಕದಾಗಿ ಒಂದೇ ಒಂದು ಮಹಡಿಯಲ್ಲಿತ್ತು. ಸಂಸ್ಥೆಯಲ್ಲಿ ಕೇವಲ ಎರಡು ಕೊಠಡಿಯಿದ್ದು, ಒಂದು ಸಭೆ ಕೊಠಡಿ ಹಾಗು ಇನ್ನೊಂದು ಸಂಸ್ಥೆಯ ಮುಖ್ಯಸ್ಥರ ಕೊಠಡಿಯಾಗಿತ್ತು. ಮಾತಾಡಿದರೆ ಎಲ್ಲರ ದನಿ ಎಲ್ಲರಿಗು ಬಹು ನಿಖರವಾಗಿ ಕೇಳುತಿತ್ತು. ಜೋರಾಗಿ ಮಾತನಾಡುವ, ಅಥವಾ ಕೂಗಿ ಕರೆಯುವ ಅನಿವಾರ್ಯತೆ ಇರಲಿಲ್ಲ. ಹಾಗಾಗಿ ನಾವೆಲ್ಲರು ಸಾಮಾನ್ಯವಾಗಿ ಮೆದು ಧ್ವನಿಯಲ್ಲೇ ಮಾಡುತ್ತಿದ್ದೆವು.

ಆಗ ಸುಮಾರು ಆರೂವರೆ - ಏಳು ಗಂಟೆ ಇರಬಹುದು. ನನ್ನ ಸಂಸ್ಥೆಯ ಮುಖ್ಯಸ್ಥರು ದಿಢೀರ್ ಅಂತ ಬಾಗಿಲು ತೆಗದು ಏರು ದನಿಯಲ್ಲಿ ಏನನ್ನೋ ಹೇಳಿದರು. ನಾನು, ನನ್ನ ಕೆಲಸದಲ್ಲಿ ಮಗ್ನನಾಗಿದ್ದರಿಂದ ನನಗೆ ಅವರು ಹೇಳಿದ ವಿಷಯ ಪೂರ್ತಿ ತಲುಪಲಿಲ್ಲ. ಅಷ್ಟು ಹೊತ್ತಿಗೆ, ಪ್ರತಿಯೊಬ್ಬರು ಎದ್ದುನಿಂತು ಏನು ಮಾತಾಡದೆ ಸ್ತಬ್ಧ ಸ್ಥಿತಿಯಲ್ಲಿ ಒಬ್ಬರನೊಬ್ಬರು ನೋಡುತ್ತ ಗುಂಪಾಗಿ ನಿಂತಿದ್ದಿರು. ನಾನೂ ಎದ್ದು ನನ್ನ ಸ್ಥಳ ಬಿಟ್ಟು, ಗುಂಪಿಗೆ ಸೇರಿ, ಪಕ್ಕದಲ್ಲಿದ್ದ ನನ್ನ ಸಹೋದ್ಯೋಗಿಯತ್ತ ನೋಡಿ 'ಏನ್ ಬಾಸ್ ಹೇಳಿದ್ದು?' ಅಂತ ಪ್ರಶ್ನಿಸಿದೆ. ಅವನು ನನ್ನ ಕಿವಿಯ ಹತ್ತಿರ ಬಂದು, ಅಮೆರಿಕದ ವರ್ಲ್ಡ್ ಟ್ರೇಡ್ ಸೆಂಟರ್ (WTC) ಬಿದ್ದು ಹೋಯಿತಂತೆ ಅಂತ ಹೇಳಿ, ಅವನು ಇತರರೊಂದಿಗೆ ಮಾತನಾಡಲು ಶುರುಮಾಡಿದ. ಅವನ ಮುಖದಲ್ಲಿ ಏನೋ ಅಸಮಾಧಾನ, ದುಃಖ ಕಾಣಿಸುತ್ತಿತ್ತು. ನಾನು ನನ್ನ ದೃಷ್ಟಿಯನ್ನ ನನ್ನ ಸಂಸ್ಥೆ ಮುಖ್ಯಸ್ಥರ ಕಡೆಗೆ ಹಾಯಿಸಿದೆ. ಅವರಲ್ಲೂ ಅದೇ ತರಹದ ಅಸಮಾಧಾನ ಕಾಣುತ್ತಿತ್ತು.

ಅವರು ಸ್ವಲ್ಪ ಸಮಯದ ನಂತರ ಏನು ಹೇಳದೆ ಮತ್ತೆ ತಮ್ಮ ಕೊಠಡಿಯೊಳಕ್ಕೆ ನಡೆದರು. ಇದನ್ನು ನೋಡಿ ನಾನು ಗುಂಪಿನ ಒಳಗೆ ಸೇರಿ ಕೆಲವು ಮಾಹಿತಿ ಕಲೆ ಹಾಕುವ ಮನಸ್ಸು ಮಾಡಿದೆ. ಕಾರಣ, ಆ ದಿನಕ್ಕೆ ನನಗೆ ವರ್ಲ್ಡ್ ಟ್ರೇಡ್ ಸೆಂಟರ್ ಅನ್ನುವ ಕಟ್ಟಡ ಇದೆ ಹಾಗು ಎಲ್ಲಿದೆ ಎಂದೂ ತಿಳಿದಿರಲಿಲ್ಲ. ನನ್ನ ಬಹುದೊಡ್ಡ ಪ್ರಶ್ನೆ, ಅಲ್ಲೆಲ್ಲಿಯೋ ಬಿದ್ದ ಕಟ್ಟಡ ಇವರಿಗೇಕೆ ಇಷ್ಟು ನೋವು ತಂದಿದೆ ಅನ್ನೋದು. ಹಾಗೇ ಮಾತು ಮುಂದುವರಿಸಿದಾಗ , ನನಗೆ ತಿಳಿದದ್ದು ಕೆಲ ನನ್ನ ಸಹುದ್ಯೋಗಿಗಳು ವರ್ಲ್ಡ್ ಟ್ರೇಡ್ ಸೆಂಟರ್ ಕಟ್ಟಡಗಳಲ್ಲಿ ಕೆಲಸ ಮಾಡುತಿದ್ದರು ಭಾರತಕ್ಕೆ ಹಿಂತಿರುಗುವ ಮುನ್ನ, ಅನ್ನುವುದು. ಕೇವಲ ಕೆಲಸ ಮಾಡಿದ ಮಾತ್ರಕ್ಕೆ ಕಟ್ಟಡದ ಪರಿಸ್ಥಿತಿ ತಿಳಿದು ಇವರು ಇಷ್ಟೊಂದು ಅಸಮಾಧಾನಗೊಳ್ಳಲು ಸಾಧ್ಯವೇ ಅನ್ನುವ ಪ್ರಶ್ನೆ ನನಗೆ ಕಾಡಿತ್ತು.

ಮತ್ತೆ ದಿಢೀರ್ ಅಂತ ನನ್ನ ಸಂಸ್ಥೆಯ ಮುಖ್ಯಸ್ಥರು, ತಮ್ಮ ಕೊಠಡಿಯ ಬಾಗಿಲು ತೆಗೆದು ಹೊರಬಂದು, ಕಟ್ಟಡದ ಉತ್ತರ ಗೋಪುರಕ್ಕೂ ವಿಮಾನ ಅಪ್ಪಳಿಸಿತು ಅಂತ ತಂಬಾ ಅಸಮಾಧಾನದ ಸ್ಥಿತಿಯಲ್ಲಿ ನಿಂತಿದ್ದ ನಮಗೆ ತಿಳಿಸಿ, 'ನಾನು ಮತ್ತಷ್ಟು ವಿಷಯ ತಿಳಿಯುತ್ತೇನೆ' ಅಂತ ಹೇಳಿ ಮತ್ತೆ ತಮ್ಮ ಕೊಠಡಿಯೊಳಕ್ಕೆ ನಡೆದು ಕದ ಮುಚ್ಚಿದರು. ಆಗತಾನೇ ಅವರು ತಿಳಿಸಿಹೋದ ವಿಷಯದಿಂದ ನನಗೆ ತಿಳಿದಿದ್ದು ಆ ಎರಡೂ ಕಟ್ಟಡಕ್ಕೆ ವಿಮಾನ ಅಪ್ಪಳಿಸಿದೆ ಎಂದು. ಇದನ್ನು ತಿಳಿದ ನನಗೆ ಮತ್ತಷ್ಟು ಕುತೂಹಲ ಹೆಚ್ಚಿ, ನೀವೆಲ್ಲ ಇಷ್ಟೊಂದು ಅಸಮಾಧಾನ ಮತ್ತು ದುಃಖ ತೋರಲು ಕಾರಣ ಏನು, 'ನಿಮ್ಮ ಸ್ನೇಹಿತರಿಗೆ ಅಥವಾ ಸಂಬಂಧಿಕರಿಗೆ ತೊಂದರೆಯಾಗಿದೆಯೇ?', ಅಂತ ಪ್ರಶ್ನೆ ಮಾಡಿದೆ. ನನ್ನ ಸಹುದ್ಯೋಗಿಗಳು ತಿಳಿದವರಲ್ಲಿ ಯಾರೊಬ್ಬರೂ ಅವತ್ತಿಗೆ ಆ ಕಟ್ಟಡದಲ್ಲಿ ಕೆಲಸ ಮಾಡುತ್ತಿರಲಿಲ್ಲ. ಎಲ್ಲರೂ ಬೇರೆ ಬೇರೆ ಸಂಸ್ಥೆ ಸೇರಿ ಅಲ್ಲಿಂದ ಸ್ಥಳಾಂತರಗೊಂಡಿದ್ದರು.

ಅದಾಗಲೇ ತಂಬಾ ಹೊತ್ತಾಗಿದ್ದರಿಂದ ನಾವೆಲ್ಲರೂ ನಮ್ಮ ಕಚೇರಿ ಚೀಲ ತೆಗೆದುಕೊಂಡು ಮನೆ ಕಡೆಗೆ ಹೊರಟೆವು. ಒಂದಂತೂ ನಿಜ, ಎಲ್ಲರ ಮುಖದಲ್ಲಿನ ಅಸಮಾಧಾನ ಹಾಗೆ ಇತ್ತು. ಮನೆಗೆ ಹೋದ ನನಗೆ ಮೊದಲು ತೋಚಿದ್ದು ಟಿವಿಯಲ್ಲಿ ಸಮಾಚಾರ ನೋಡಲು. ಆಗ ನಾನು ಹೆಚ್ಚು "NDTV" ನೋಡುತಿದ್ದೆ, ಅದೇ ಚಾನೆಲ್ ಹಾಕಿದ ತಕ್ಷಣ ಕಾಣಿಸಿದ್ದು ಆ ಘೋರ ದೃಶ್ಯ. ಒಂದರ ಹಿಂದೆ ಒಂದು ವಿಮಾನ ಎರಡು ಕಟ್ಟಡವನ್ನು ಅಪ್ಪಳಿಸಿತ್ತಿರುವುದು. ಮತ್ತೆ ಮತ್ತೆ ಅದೇ ಚಿತ್ರವನ್ನ ತೋರಿಸುತ್ತಿದ್ದರು. ನಾನು ಅದನ್ನೇ ನೋಡುತ್ತಾ ಭಾವುಕನಾದೆ. ಕೆಲವು ನಿಮಿಷಗಳು ಕಳೆದ ನಂತರ, ಇದೊಂದು ಭಯೋತ್ಪಾದಕ ಕೃತ್ಯ ಎಂಬುವ ಸುದ್ದಿ ಬಿತ್ತರವಾಯಿತು. ಆಗ ನನಗೆ ಅನಿಸಿದ್ದು ಇಂತಹದೊಂದು ಕೃತ್ಯ ಎಸಗುವ ವಿಚಾರವಾದರೂ ಹೇಗೆ ಬರುತ್ತೆ ಅನ್ನೋದು.

ಅಂತಹದೊಂದು ದುರ್ಘಟನೆ ನಡೆದು ಇಂದಿಗೆ ಇಪ್ಪತ್ತು ವರುಷಗಳು ಕಳೆದು ಹೋಯಿತು. ಘಟನೆ ನಡೆದದ್ದು ಸೆಪ್ಟೆಂಬರ್ ೧೧ ೨೦೦೧. ಮೊನ್ನೆ ಈ ಘೋರ ಘಟನೆಯನ್ನು ಸ್ಮರಿಸಲಾಯಿತು. ಪ್ರತಿಯೊಂದು ಟಿವಿಯಲ್ಲಿ ಸ್ಮರಣೆಯ ನೇರಪ್ರಸಾರ ಮಾಡಿ, ಜೀವತೆತ್ತ ಪ್ರತಿಯೊಬ್ಬರ ಹೆಸರನ್ನು ಓದಲಾಯಿತು.

'WTC' ಕಟ್ಟಡ ಕುಸಿತದಿಂದ ಸತ್ತವರ ಸಂಖ್ಯೆ ಸುಮಾರು ೧೭೦೦, ಒಟ್ಟು ಸತ್ತವರ ಸಂಖ್ಯೆ ಸುಮಾರು ೩೦೦೦ ಮಂದಿ. ಇವರೆಲ್ಲರೂ ಶ್ರೀಸಾಮಾನ್ಯರು. ತಮ್ಮ ಪಾಡಿಗೆ ಕೆಲಸ ಮಾಡಿಕೊಂಡು ಜೀವನ ಸಾಗಿಸಿಕೊಂಡಿದ್ದವರು.

ಈ ಸಲದ ಇಪ್ಪತ್ತು ವರ್ಷದ ಸ್ಮರಣಾರ್ಥಕ ದಿನದ ಸಲುವಾಗಿ ನನ್ನ ಈಗಿನ ಸಂಸ್ಥೆ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿತ್ತು. ನಾನು ಕೆಲವು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದೆ. ಒಂದು ಕಾರ್ಯಕ್ರಮದ ವಿಷಯ ಬಹಳ ಭಿನ್ನವಾಗಿತ್ತು ಹಾಗು ನನಗೆ ಅಂದಿನವರೆಗೆ ತಿಳಿಯದಾಗಿತ್ತು. ಅದೇನೆಂದರೆ, ಹೇಗೆ ಆ ಒಂದು ಕರಾಳ ದಿನ ಇಡೀ ನ್ಯೂ ಯಾರ್ಕ್ ನಗರದ ಜನತೆಯನ್ನು ಒಂದುಗೂಡಿಸಿತು ಮತ್ತು ಪರಸ್ಪರ ಸ್ಪಂದನೆಗೆ ಕಾರಣವಾಯಿತು ಎಂದು. ಪ್ರತಿ ದಿನದಂತೆ ಅದೊಂದು ಸಾಮಾನ್ಯ ದಿನವಾಗಿ ಶುರುವಾದ ಆ ದಿನ ಇಷ್ಟೊಂದು ಕೆಟ್ಟದಾಗಿ ಪರಿವರ್ತನೆಗೊಳ್ಳುವ ನಿರೀಕ್ಷೆ ಯಾರಿಗೂ ಇರಲಿಲ್ಲ.

ಅವರನ್ನು ಸ್ವದೇಶಕ್ಕೆ ವಿವಿಧ ವಿಧಾನ ಉಪಯೋಗಿಸಿ ಕರೆತರಲಾಗುತ್ತೆ. ಏರ್ ಲಿಫ್ಟ್ ವಿಧಾನವೂ ಒಂದು. ಇಂತಹದೊಂದು ಪ್ರಯತ್ನ ಆ ಹೊತ್ತಿನ ಪರಿಸ್ಥಿತಿಗೆ ಬೇಕಾಗಿತ್ತು, ಏಕೆಂದರೆ ವರ್ಲ್ಡ್ ಟ್ರೇಡ್ ಸೆಂಟರ್ ಇದ್ದದ್ದು ನ್ಯೂ ಯಾರ್ಕ್ ನಗರದ ಕೆಳಗಿನ ಮ್ಯಾನ್ ಹ್ಯಾಟನ್ ನಲ್ಲಿ, ಹಾಗೆ ನೋಡಿದರೆ, ಇಡೀ ಮ್ಯಾನ್ ಹ್ಯಾಟನ್ ಒಂದು ದ್ವೀಪ, ಸುತ್ತಲೂ ನದಿ ಹರಿಯುತ್ತೆ. ತುಂಬಾ ದಟ್ಟನೆಯ ಅತಿ ಎತ್ತರದ ಕಟ್ಟಡಗಳುಳ್ಳ ಚಿಕ್ಕ ಭೂ ಪ್ರದೇಶ ಇದು.

ಪ್ರತೀ ದಿನ ಸಾವಿರಾರು ಜನರು ಕೆಲಸಕ್ಕೆ ಮ್ಯಾನ್ ಹ್ಯಾಟನ್ ಗೆ ಬರುತ್ತಾರೆ. ಇವರಲ್ಲಿ ಬಹುತೇಕ ಮಂದಿ ದೋಣಿ ಉಪಯೋಗಿಸುವುದು ಸರ್ವೇ ಸಾಮಾನ್ಯ. ಹೀಗಾಗಿ ನೀವು ಅಲ್ಲಲ್ಲಿ ದೋಣಿಗಳನ್ನು ನೋಡಬಹುದು.



ಎಳ್ಳಷ್ಟೂ ಮುನ್ಸೂಚನೆ ಇಲ್ಲದೆ ನಡೆದ ಆಕ್ರಮಣದಿಂದ ಶ್ರೀಸಾಮಾನ್ಯರನ್ನು ಮತ್ತು ಅಂದಿನ ಸರ್ಕಾರವನ್ನ ತಬ್ಬಿಬ್ಬಿನ ಪರಿಸ್ಥಿತಿಗೆ ದೂಡಿತ್ತು. ಹೊರಗಿದ್ದವರಿಗೆ, ಮನೆಯೊಳಗಿದ್ದವರಿಗೆ ಒಂದೇ ಚಿಂತೆ, ನಮ್ಮ ಮೇಲೆ ಯಾವುದೋ ದೇಶ ಮುನ್ಸೂಚನೆ ಇಲ್ಲದೆ ಯುದ್ಧ ಸಾರಿದೆ. ನಾವು ಇಲ್ಲಿಂದ ಪಾರಾಗಿ ಹೋಗುವುದಾದರೂ ಎಲ್ಲಿಗೆ ಅನ್ನುವುದು. ಇದರ ಯೋಚನೆಯಲಿದ್ದ ಕೆಲವರಿಗೆ ನಾನು ಹೇಗೆ ಈ ಪರಿಸ್ಥಿತಿಯಿಂದ ಇತರರನ್ನ ಪಾರಾಗಿಸೋದು, ನನ್ನಿಂದ ಏನಾದರೂ ಸಹಾಯವಾಗಬಹುದೇ? ಅನ್ನುವ ಪ್ರಶ್ನೆ ಕಾಡುತ್ತಿತ್ತು. ಅವರು ಪ್ರಶ್ನೆಯೊಂದಿಗೆ ಸುಮ್ಮನೆ ಕೂರದೇ, ಸಹಾಯಕ್ಕೆ ಧಾವಿಸಿದರು.

ಅಂದು, ಹಲವು ಜೀವಗಳನ್ನು ಕಾಪಾಡುವ ಕೆಲಸದಲ್ಲಿ ನೆರವಾಗಿದ್ದು ದೋಣಿ ತೆರವು (Boat Lift)! ನೀವು ಏರ್ ಲಿಫ್ಟ್(Air Lift) ಕೇಳಿರಬಹುದು. ಭಾರತ ಹಲವು ಸಾರಿ ತಮ್ಮ ಪ್ರಜೆಗಳನ್ನು ಇತರ ದೇಶಗಳಿಂದ ಏರ್ ಲಿಫ್ಟ್ ಮಾಡಿದೆ. ಪ್ರಜೆಗಳು ಹೊರಗಿನ ದೇಶದಲ್ಲಿ ಸುರಕ್ಷಿತರಲ್ಲ ಅನಿಸಿದಾಗ

ಜನರು ದಿಕ್ಕಾಪಾಲಾಗಿ ಓಡುವುದನ್ನು ನೋಡಿ ಅಲ್ಲೇ ಇದ್ದ ಕೆಲವು ದೋಣಿಗಳ ಚಾಲಕರು ಜನರನ್ನು ಇನ್ನೊಂದು ಕಡೆಯ ತೀರಕ್ಕೆ ತಲುಪಿಸುವ ಕೆಲಸ ಮಾಡಲು ಶುರುಮಾಡಿದರು. ಈ ಸುದ್ದಿ ಬಹುತೇಕ ದೋಣಿ ನಡೆಸುವರಿಗೆ ಮುಟ್ಟಲು ಅತೀ ಹೆಚ್ಚು ಸಮಯ ಬೇಕಾಗಿರಲಿಲ್ಲ. ಇಡೀ ನಗರದಲ್ಲಿದ್ದ ಎಲ್ಲಾ ದೋಣಿಗಳು ಕಿಂಚಿತ್ತೂ ಸಮಯ ಹಾಳು ಮಾಡದೆ ಸಹಾಯಕ್ಕೆ ಧಾವಿಸಿದರು. ಗಾಬರಿಯಲ್ಲಿದ್ದ ಜನ ತಮ್ಮನ್ನು ಅಲ್ಲಿಂದ ದೂರ ಕರೆದುಕೊಂಡು ಹೋಗಲು ಕೇಳಿದಷ್ಟು ಹಣ ಕೊಡಲು ಸಿದ್ಧರಿದ್ದರು. ಆದರೆ ಯಾವುದೇ ದೋಣಿ ಚಾಲಕರು ಹಣದ ಕಡೆ ಗಮನ ಕೊಡದೆ ಸಮಯಪ್ರಜ್ಞತೆ ತೋರಿ, ಎಷ್ಟು ಆಗುತ್ತೋ ಅಷ್ಟು ಜನರನ್ನು ಸಾಗಿಸುವ ಧೋರಣೆ ಹೊಂದಿ ಸುಮಾರು ಐದು ಲಕ್ಷಕ್ಕೂ ಹೆಚ್ಚು ಮಂದಿಯನ್ನು ಸಾಗಿಸಿ, ಆ ಸಮಯದಲ್ಲಿ ತಮ್ಮ ಸಾಮಾಜಿಕ ಜಬಾಬ್ದಾರಿ ನಿಭಾಯಿಸಿದರು ಎನ್ನಲಾಗುತ್ತೆ.



# ಕಾಳಿದಾಸನ ಖಂಡಕಾವ್ಯಗಳು

ಎಸ್. ರಂಗನಾಥ್

## ಮೇಘದೂತ

**ಕಾ**ಳಿದಾಸನ ಮೇಘದೂತ ಕಾವ್ಯ ಪರಂಪರೆಯನ್ನೇ ಸಂಸ್ಕೃತ ಸಾಹಿತ್ಯಕ್ಕೆ ಕೊಟ್ಟಿತು. ಇದು ವರಕವಿ ಕಾಳಿದಾಸನ ಅಮರ ಭಾವಗೀತೆ. ಸುಮಧುರ ವಿರಹಭಾವ ಹೃದಯದಾಳದಿಂದ ಚಿಮ್ಮಿ ಹರಿದು ವಾಚಕಲೋಕವನ್ನು ತನ್ಮಯ ಗೊಳಿಸುತ್ತದೆ. ಇಲ್ಲಿ ದೊರೆಯುವ ಆನಂದ ವಿಗಲಿತವೇದ್ಯಾಂತರ. ಕವಿ ಬಳಸಿರುವ ಮಂದಾಕ್ರಾತ ವೃತ್ತ ವಿರಹಕ್ಕೆ ಗಾನ ರೂಪ ತಂದಿದೆ. ಮಲ್ಲಿನಾಥ ಮೊದಲಾದವರ 40 ವ್ಯಾಖ್ಯಾನದ ಈ ಕೃತಿ ಸಂಸ್ಕೃತದಲ್ಲಿದೆ. ಕಾವ್ಯವು ಪೂರ್ವ ಮೇಘ 67 ಶ್ಲೋಕಗಳು ಹಾಗೂ ಉತ್ತರ ಮೇಘ 56 ಶ್ಲೋಕಗಳು ಎಂದು ವಿಭಜಿತವಾಗಿವೆ.

1. ಯಕ್ಷನು ಮೇಘಕ್ಕೆ ಈ ರೀತಿ ಸಂಬೋಧಿಸುತ್ತಾನೆ - ಎಲೈ ಮೇಘವೇ, ನೀನು ಪ್ರಯಾಣ ಮಾಡುವ ಸಮಯದಲ್ಲಿ ಗಾಳಿಯು ನಿನ್ನನ್ನು ಮೆಲ್ಲಮೆಲ್ಲನೆ ಪ್ರೇರಿಸುತ್ತದೆ ಮತ್ತು ನಿನ್ನ ಎಡಭಾಗದಲ್ಲಿ ಗರ್ವದಿಂದ ಕೂಡಿದ ಚಾತಕ ಪಕ್ಷಿಯು ಕಿವಿಗಳಿಗೆ ಇಂಪಾಗುವಂತೆ ಶಬ್ದಮಾಡುತ್ತದೆ. ಬಲಾಹಕ ಪಕ್ಷಿಗಳು ನಿರಂತರವಾಗಿ ಗರ್ಭ ಧರಿಸುವುದರಿಂದ, ಆ ಪಕ್ಷಿಗಳ ಗರ್ಭದಾನದಿಂದ ಉಂಟಾದ ಪರಿಚಯ ನಿನ್ನನ್ನು ಅಂತರಿಕ್ಷ ಮಾರ್ಗದಲ್ಲಿ ಸೇವಿಸುವುವು. ಹಿಂಭಾಗದಲ್ಲಿ ಗಾಳಿ ಮೆಲ್ಲನೆ ಬೀಸಿದಾಗ ಚಾತಕ ಪಕ್ಷಿಯು ಎಡ ಭಾಗದಲ್ಲಿ ಮಧುರವಾಗಿ ಧ್ವನಿ ಮಾಡದೆ ಇದ್ದಾಗ ಬಲಾಹಕಗಳು ಅಭಿಮುಖವಾಗಿ ಬಂದಾಗ ಶುಭ ಶಕುನವಾಗಿ ನೀನು ಹೋಗುವ ಮಾರ್ಗ ಪ್ರಯಾಸವಿಲ್ಲದೆ ನೆರವೇರುವುದು.

*ಮಂದಂ ಮಂದಂ ನುದತಿ ಪವನಶ್ಚಾನುಕೂಲೋ ಯಥಾ ತ್ವಾಂ*
*ವಾಮಶ್ಚಾಯಂ ನದತಿ ಮಧುರಂ ಚಾಕತಸ್ತೇ ಸಗಂಧಃ।*
*ಗರ್ಭಾಧಾನಕ್ಷಣಪರಿಚಯಾನ್ನೂನಮಾಬದ್ಧಮಾಲಾಃ*
*ಸೇವಿಷ್ಯಂತೇ ನಯನಸುಭಗಂ ಖೇ ಭವಂತಂ ಬಲಾಕಾಃ॥ (ಪೂ.ಮೇ. 9)*

2. ಎಲೈ ಮೇಘವೇ ನೀನು ಪ್ರಯಾಣ ಮಾಡುವ ಕಾಲದಲ್ಲಿ ರಾಜಹಂಸಗಳು ಭೂಮಿಯನ್ನು ನಾಯಿಕೊಡೆಗಳಿಂದ ವ್ಯಾಪ್ತವಾದದ್ದನ್ನಾಗಿಯೂ ಫಲ ಸಹಿತವಾದುದನ್ನಾಗಿ ಮಾಡುವ ಕಿವಿಗೆ ಸುಖಕರವಾದ ನಿಮ್ಮ ಗುಡುಗನ್ನು ಕೇಳಿ ಮಾನಸ ಸರೋವರಕ್ಕೆ ಹೊರಡಲಪೇಕ್ಷೆ ಉಳ್ಳವುಗಳಾಗಿ ಮತ್ತು ಕಿಸಲಯಗಳೇ ಅವುಗಳಿಗೆ ಆಹಾರವಾದ್ದರಿಂದ, ಆ ತಾವರೆ ಚಿಗುರುಗಳೆಂಬ ಬುತ್ತಿಯಿಂದ ಕೂಡಿದವುಗಳಾಗಿ ಅಂತರಿಕ್ಷದಲ್ಲಿ ಕೈಲಾಸ ಪರ್ವತದವರೆಗೂ ನಿನಗೆ ಜೊತೆಯಾಗಿರುವುವು.

*ಕರ್ತುಂ ಯಚ್ಚ ಪ್ರಭವತಿ ಮಹೀಮುಚ್ಛಿಲೀಂದ್ರಾಮವಂಧ್ಯಾಂ*
*ತಚ್ಛ್ರುತ್ವಾ ತೇ ಶ್ರವಣಸುಭಗಂ ಗರ್ಜಿತಂ ಮಾನಸೋತ್ಕಾಃ।*
*ಆಕೈಲಾಸಾದ್ಬಿಸಕಿಸಲಯಚ್ಛೇದಪಾಥೇಯವಂತಃ*
*ಸಂಪತ್ಸ್ಯಂತೇ ನಭಸಿ ಭವತೋ ರಾಜಹಂಸಾಃ ಸಹಾಯಾಃ॥ (ಪೂ.ಮೇ. 11)*

3. ಎಲೈ ಮೇಘವೇ! ನೀನು ಹೋಗುವಾಗ ಮಳೆಹನಿಗಳು ಬೀಳುವುದರಿಂದ ಆ ಹನಿಗಳನ್ನು ಕುಡಿಯುವುದಕ್ಕೆ ಬಂದ ಚಾತಕ ಪಕ್ಷಿಗಳನ್ನು ನೋಡುತ್ತಾ ವರ್ಷಾ ಕಾಲವೆಂಬ ಭ್ರಾಂತಿಯಿಂದ ಸಾಲುಸಾಲಾಗಿ ಓಡಿ ಹೋಗುತ್ತಿರುವ ಹೆಣ್ಣು ಕೊಕ್ಕರೆ ಪಕ್ಷಿಗಳನ್ನು ಎಣಿಸುತ್ತಿರುವವರಾದ ಸಿದ್ಧ ಸ್ತ್ರೀಯರು, ನೀನು ಗುಡುಗುವ ಶಬ್ದವನ್ನು ಕೇಳಿ ಮಳೆಗಾಲವೆಂದು ಅವಸರದಿಂದ ಗಂಡಂದಿರನ್ನು ತಬ್ಬಿಕೊಳ್ಳಲು, ಆ ಸುಖವು ನಿನ್ನಿಂದುಂಟಾಯಿತೆಂದು ತಿಳಿದು, ಸಿದ್ಧರು ನಿನಗೆ ಮರ್ಯಾದೆ ಮಾಡುವರು.

*ಅಂಬೋಬಿಂದುಗ್ರಹಣಚತುರಾಃ ಚಾತಕಾನ್ ವೀಕ್ಷಮಾಣಾ*
*ಶ್ರೇಣೀಭೂತಾಃ ಪರಿಗಣನಯಾ ನಿರ್ದಿಶಂತೋ ಬಲಾಕಾಃ।*
*ತ್ವಾಮಾಸಾದ್ಯ ಸ್ತನಿತಸಮಯೇ ಮಾನಯಿಷ್ಯಂತಿ ಸಿದ್ಧಾ -*
*ಸ್ಸೋತ್ಕಂಠಾನಿ ಪ್ರಿಯಸಹಚರೀ ಸಂಭ್ರಮಾಲಿಂಗಿತಾನಿ॥ (ಪೂ.ಮೇ. 22)*

4. ಎಲೈ ಮೇಘವೇ! ನೀನು ಹೋಗುವ ದಾರಿಯಲ್ಲಿ ದಶಾರ್ಣಗಳೆಂಬ ದೇಶವಿರುತ್ತದೆ. ಈ ದೇಶದಲ್ಲಿ ತಾಳೆಗಿಡಗಳು ವಿಶೇಷವಾಗಿರುವುದರಿಂದ ಅವು ಗ್ರೀಷ್ಮಾಂತ್ಯದಲ್ಲಿ ಅರಳುವುದರಿಂದಲೂ ಆ ಹೂಗಳ ಕಾಂತಿಯಿಂದ ಬೇಲಿಗಳೆಲ್ಲಾ ಬೆಳ್ಳಗೆ ಕಾಣುತ್ತದೆ. ಅಲ್ಲದೆ ಮಳೆಗಾಲ ಬಂತೆಂದು ಕಾಗೆ ಗುಬ್ಬಿ ಮೊದಲಾದ ಊರಲ್ಲಿರುವ ಪಕ್ಷಿಗಳು ಬೀದಿಗಳಲ್ಲಿ ಇರುವ ಮರಗಳಲ್ಲಿ ಗೂಡುಗಳನ್ನು ಕಟ್ಟುವುದಾಗಿ ತುಂಬಿಕೊಳ್ಳುತ್ತದೆ ಮತ್ತು ನೇರಳೆ ಮರಗಳಲ್ಲಿ ಹಣ್ಣುಗಳು ಬಿಟ್ಟು ತೋಪೆಲ್ಲವೂ ಕಪ್ಪಗೆ ಕಾಣುತ್ತದೆ ಮತ್ತು ಹಂಸಗಳೆಲ್ಲಾ ಓಡಿಹೋಗುವುದಕ್ಕೆ ಪ್ರಯತ್ನ ಮಾಡುತ್ತದೆ. ಅಂದರೆ ಆ ಗುಣಗಳೆಲ್ಲಾ ವರ್ಷಾಕಾಲದ ಪ್ರಾರಂಭದಲ್ಲಿ ಸ್ವಾಭಾವಿಕವಾಗಿ ಉಂಟಾಗುವುವು. ಅದರಂತೆ ಆ ದೇಶದಲ್ಲೂ ಆಗುತ್ತದೆ.

*ಪಾಂಡುಚ್ಛಾಯೋಪವನವೃತಯಃ ಕೇತಕೈಃ ಸೂಚಿಭಿನ್ನೈಃ*
*ನೀಡಾರಂಭೇ ಗೃಹಬಲಿಭುಜಾಮಾಕುಲಾಗ್ರಾನಚೈತ್ಯಾಃ।*
*ತ್ವಯ್ಯಾಸನ್ನೇ ಪರಿಣತಫಲಶಯಾಂಮಜAಬೂವನಾAತಾಃ*
*ಸಂಪತ್ಸ್ಯಂತೇ ಕತಿಪಯದಿನಸ್ಥಾಯಿಹಂಸಾ ದಶಾರ್ಣಾಃ॥ (ಪೂ.ಮೇ.24)*

5. ಉಜ್ಜಯಿನಿ ಪಟ್ಟಣಕ್ಕೆ ಹೋಗುವ ದಾರಿಯಲ್ಲಿ ನಿರ್ವಿಂಧ್ಯಾ ನದಿಯ ವರ್ಣನೆ ಹೀಗಿದೆ: ಲೋಕದಲ್ಲಿ ಸ್ತ್ರೀಯರು ತಮಗೆ ಇಷ್ಟರಾದವರನ್ನು ಹೊಂದುವುದಕ್ಕಾಗಿ ಡಾಬಿನಲ್ಲಿರುವ ಗೆಜ್ಜೆಗಳು ಸದ್ದು ಮಾಡುವಂತೆ ಎಡವುತ್ತಾ, ನಾಭಿಯನ್ನು ತೋರಿಸಿ ಹೇಗೆ ಶೃಂಗಾರದ ರಸಗಳಿಂದ ಪುರುಷರನ್ನು ಅಂತರಂಗವುಳ್ಳವನನ್ನಾಗಿ ಮಾಡಿಕೊಳ್ಳುತ್ತಾರೆಯೋ ಹಾಗೆಯೇ ಹಂಸವೇ

ಮೊದಲಾದ ಪಕ್ಷಿಗಳ ಶಬ್ದವೆಂಬ ಡಾಬಿನ ಶಬ್ದದಿಂದಲೂ ಧುಮುಕಿ ಧುಮುಕಿ ಹರಿಯುವ ಎಡೆಯಿಂದ ಸುಳಿ ಎಂಬ ಹೊಕ್ಕಳುಗಳಿಂದಲೂ ಕೂಡಿದ ನಿರ್ವಿಂಧ್ಯಾ ನದಿಯೊಡನೆ ಸೇರಿ ನೀರೆಂಬ ಶೃಂಗಾರಾದಿರಸವನ್ನು ಹಂಚಿಕೊಳ್ಳುವವನಾಗು.

*ವೀಚಿಕ್ಷೋಭಸ್ತನಿತವಿಹಗಶ್ರೇಣಿಕಾಂಚೀಗುಣಾಯಾಃ*
*ಸಂಸರ್ಪಂತ್ಯಾಃ ಸ್ಖಲಿತಸುಭಗಂ ದರ್ಶಿತಾವರ್ತನಾಭೇಃ |*
*ನಿರ್ವಿಂಧ್ಯಾಯಾಃ ಪಥಿ ಭವ ರಸಾಭ್ಯಂತರಃ ಸನ್ನಿಪತ್ಯ*
*ಸ್ತ್ರೀಣಾಮಾದ್ಯಂ ಪ್ರಣಯವಚನಂ ವಿಭ್ರಮೋ ಹಿ ಪ್ರಿಯೇಷು || (ಪೂ.ಮೇ.29)*

6.ವಿಶಾಲಾ ನಗರದ ವರ್ಣನೆ ಇಂತಿದೆ - ದಿವ್ಯಾನಂದಾಲಂಕೃತವಾದ ಆಲಿಂಗನಾದಿಗಳಿಂದ ಸ್ತ್ರೀಗೆ ಹಿತವಾಗಿರುವ ಹಾಗೆ ಶರೀರ ಸ್ಪರ್ಶವನ್ನು ಮಾಡುತ್ತಾ ಚಮತ್ಕಾರಿಯಾದ ಪತಿಯು ಒಂದಾವರ್ತಿ ಭೋಗಿಸಿದ ನಂತರ ಪುನಶ್ಚ ಒಳ್ಳೆಯ ಮಾತುಗಳಿಂದ ಸ್ತ್ರೀಯನ್ನು ಸಮಾಧಾನ ಮಾಡಿ ಮೊದಲು ಸಂಭೋಗದಿಂದಾದ ಶರೀರಾಯಾಸವನ್ನು ಪರಿಹಾರ ಮಾಡಿ ತನ್ನ ಇಷ್ಟಾರ್ಥವನ್ನು ಹೇಗೆ ನೇರವೇರಿಸಿಕೊಳ್ಳುತ್ತಾನೆಯೋ, ಅದರಂತೆ ಪ್ರಾತಃಕಾಲದಲ್ಲಿ ಉಜ್ಜಯಿನಿ ಸಮೀಪದಲ್ಲಿರುವ ಶಿಪ್ರಾ ನದಿಯ ಮೇಲೆ ಬೀಸಿಕೊಂಡಿರುವುದರಿಂದ ತಣ್ಣಗಿರುವುದಾಗಿಯೂ ಅವ್ಯಕ್ತ ಮಧುರವಾದ ಹಂಸ ಪಕ್ಷಿಗಳ ಶಬ್ದವನ್ನು ದೂರ ಕೇಳಿಸುವಂತೆ ಮಾಡುವ ಗಾಳಿಯು ಬೀಸಿದ ಹಾಗೆಲ್ಲಾ ಶಬ್ದವು ದೂರವಾಗಿ ಕೇಳಿಸುವುದು.

*ದೀರ್ಘೀಕುರ್ವನ್‌ಪಟು ಮದಕಲಂ ಕೂಜಿತಂ ಸಾರಸಾನಾಂ*
*ಪ್ರತ್ಯೂಷೇಷು ಸ್ಫುಟಿತಕಮಲಾಮೋದಮೈತ್ರೀಕಷಾಯಃ |*
*ಯತ್ರ ಸ್ತ್ರೀಣಾಂ ಹರತಿ ಸುರತಗ್ಲಾನಿಮಂಗಾನುಕೂಲ*
*ಶಿಪ್ರಾವಾತಃ ಪ್ರಿಯತಮ ಇವ ಪ್ರಾರ್ಥನಾಚಾಟುಕಾರಃ || (ಪೂ.ಮೇ.32)*

7. ಹಿಮವತ್ ಪರ್ವತದ ಹತ್ತಿರದ ತಪ್ಪಲಲ್ಲಿರುವ ಆಯಾಯಾ ನೋಡತಕ್ಕ ವಿಶೇಷಾಶ್ಚರ್ಯಗಳನ್ನು ನೋಡಿಕೊಂಡು ಅಲ್ಲಿಂದ ಮುಂದಕ್ಕೆ ಹೋದರೆ ಪೂರ್ವದಲ್ಲಿ ಈಶ್ವರನ ಸಮೀಪದಲ್ಲಿ ಪರಶುರಾಮ ವಿದ್ಯಾಭ್ಯಾಸ ಮಾಡುತ್ತಿದ್ದ ಕಾಲದಲ್ಲಿ ಕುಮಾರಸ್ವಾಮಿಗೂ, ಪರಶುರಾಮನಿಗೂ ಸ್ಪರ್ಧೆ ಉಂಟಾದಾಗ, ಪರಶುರಾಮನು ಕ್ರೌಂಚಪಕ್ಷಿಯನ್ನು ತೀವ್ರವಾದ ಬಾಣದಿಂದ ಪುಡಿಪುಡಿ ಮಾಡಿ ಅದರಲ್ಲಿ ಒಂದು ರಂಧ್ರವನ್ನು ಮಾಡಿದ್ದರಿಂದ ಪರಶುರಾಮನಿಗೆ ಯಶಸ್ಸು ಉಂಟಾಯಿತು. ಮಾನಸ ಸರೋವರಕ್ಕೆ ಹಂಸಗಳು ಹೋಗುವುದಕ್ಕೆ ದಾರಿಯಾದ ಆ ಕ್ರೌಂಚಪರ್ವತದ ಸಂದಿನಲ್ಲಿ ನೆಟ್ಟಗೆ ಹೋಗುವುದಕ್ಕೆ ಆಗದ್ದರಿಂದ ಅಡ್ಡವಾಗಿ ತಿರುಗಿಕೊಂಡು ಉದ್ದವಾಗಿ ಹೋಗತಕ್ಕ ಕಾಲದಲ್ಲಿ ಬಲಿಚಕ್ರವರ್ತಿಯನ್ನು ಶಿಕ್ಷಿಸುವುದಕ್ಕಾಗಿ ತ್ರಿವಿಕ್ರಮ ಅವತಾರವನ್ನು ಮಾಡಿದ ವಿಷ್ಣುವಿನ ಪಾದದ ಹಾಗೆ ಕಾಣುತ್ತಿತ್ತು.

*ಪ್ರಾಲೇಯಾದ್ರೇರುಪತಟಮತಿಕ್ರಮ್ಯ ತಾಂಸ್ತಾನ್ವಿಶೇಷಾನ್*
*ಹಂಸದ್ವಾರಂ ಭೃಗುಪತಿಯಶೋವರ್ತ್ಮ ಯತ್ಕ್ರೌಂಚರಂಧ್ರಂ |*
*ತೇನೋದೀಚೀಂ ದಿಶಮನುಸರೇಸ್ತಿರ್ಯಗಾಯಾಮಶೋಭೀ*
*ಶ್ಯಾಮಃ ಪಾದೋ ಬಲಿನಿಯಮನಾಭ್ಯುದ್ಯತಸ್ಯೇವ ವಿಷ್ಣೋಃ || (ಪೂ.ಮೇ.61)*

## ಉತ್ತರ ಮೇಘ

8. ಅಲಕಾಪಟ್ಟಣದಲ್ಲಿ ಋತು ಭೇದವಿಲ್ಲದೆ ಯಾವಾಗಲೂ ಹೂಗಳು ಇರುವುದರಿಂದ ಅದಕ್ಕಾಗಿ ದುಂಬಿಗಳು ಬಂದು ಹೋಗುತ್ತಿರುತ್ತವೆ. ಕಮಲದ ಬಳ್ಳಿಗಳು ಶರದೃತುವಲ್ಲದ ಕಾಲದಲ್ಲಿ ತಾವರೆ ಹೂಗಳಿಂದ ಕೂಡಿರುವುದರಿಂದ ಈ ಬಳ್ಳಿಗಳ ಸುತ್ತಲೂ ಹಂಸ ಪಕ್ಷಿಗಳು ಬಂದು ಕುಳಿತುಕೊಂಡಿರುತ್ತವೆ. ಮನೆಯಲ್ಲಿರುವ ನವಿಲುಗಳು ವರ್ಷಕಾಲವಲ್ಲವಾದಾಗ್ಯೂ ರೆಕ್ಕೆಗಳನ್ನು ಅಗಲಿಸಿಕೊಂಡು ಕತ್ತನ್ನು ಮೇಲಕ್ಕೆತ್ತಿ ಕೂಗಿಕೊಳ್ಳುತ್ತಿರುತ್ತದೆ ಮತ್ತು ರಾತ್ರಿಗಳಲ್ಲಿ ಬೆಳದಿಂಗಳಿರುವುದರಿಂದ ಕತ್ತಲೆ ಇಲ್ಲದೆ ಸೊಗಸಾಗಿರುತ್ತದೆ. ಆದ್ದರಿಂದ ಅಲಕೆಯಲ್ಲಿ ಋತು ಭೇದವಿಲ್ಲ.

ಅಲಕಾ ಪಟ್ಟಣದಲ್ಲಿ ಋತು ಬೇಧವಿಲ್ಲವೆಂಬ ಸಂಗತಿಯನ್ನು ಇಲ್ಲಿ ಪ್ರತಿನಿಧಿಸಲಾಗಿದೆ :


*ಯತ್ರೋನ್ಮತ್ತಭ್ರಮರಮುಖರಾಃ ಪಾದಪಾನಿತ್ಯಪುಷ್ಪಾಃ*
*ಹಂಸಶ್ರೇಣೀರಚಿತರಶನಾ ನಿತ್ಯಪದ್ಮಾನಳಿನ್ಯಃ |*
*ಕೇಕೋತ್ಕಂಠಾಭವನ ಶಿಖಿನೋ ನಿತ್ಯಭಾಸ್ವತ್ಕಲಾಸಾ*
*ನಿತ್ಯಜ್ಯೋತ್ಸ್ನಾಃ ಪ್ರತಿಹತತಮೋ ವೃತ್ತಿರಮ್ಯಾಃ ಪ್ರದೋಷಾಃ || (ಉ.ಮೇ.೩)*

9. ನಮ್ಮ ಮನೆಯಲ್ಲಿ ಗಾರುಡ ಪಚ್ಚೆಗಳಿಂದ ಕಟ್ಟಿದ ಮೆಟ್ಟಿಲುಗಳುಳ್ಳದ್ದಾಗಿರುವ ಮತ್ತು ವೈಢೂರ್ಯದ ದಂಟುಗಳಿಂದ ಮಾಡಿ ಬಂಗಾರದ ಅರಳಿದ ತಾವರೆ ಹೂಗಳ ಕೊಳವಿದೆ. ಆ ಕೊಳದಲ್ಲಿ ವಾಸಮಾಡುವ ಹಂಸ ಪಕ್ಷಿಗಳು ಮಳೆಗಾಲವಿದ್ದಾಗ್ಯೂ ನೀರು ಕಲಕದೆ ಸ್ವಚ್ಛವಾಗಿರುವುದರಿಂದ ಆ ಕೊಳವನ್ನು ಬಿಟ್ಟು ಸಮೀಪದಲ್ಲಿರುವ ಮಾನಸ ಸರೋವರಕ್ಕೆ ಹೋಗಲು ಸುಲಭವಾಗಿದ್ದಾಗ್ಯೂ ಹೋಗುವುದಿಲ್ಲ.

ತನ್ನ ಮನೆಯಲ್ಲಿರುವ ನೀರಿನ ಕೊಳದ ನೀರು ಮಾನಸ ಸರೋವರದ ನೀರಿಗಿಂತ ಸ್ವಚ್ಛ ಎಂಬುದನ್ನು ಇಲ್ಲಿ ಉತ್ಪ್ರೇಕ್ಷಿಸಲಾಗಿದೆ :

*ವಾಪೀ ಚಾಸ್ಮಿನ್ಮರಕತಶಿಲಾಬದ್ಧಸೋಪಾನಮಾರ್ಗಾ*
*ಹೈಮೈಶ್ಛನ್ನಾ ವಿಕಚಕಮಲೈಃ ಸ್ನಿಗ್ಧವೈಡೂರ್ಯನಾಳೈಃ |*
*ಯಸ್ಯಾಸ್ತೋಯೇ ಕೃತವಸತಯೋ ಮಾನಸಂ ಸಂನ್ನಿಕೃಷ್ಟಂ*
*ನಾಧ್ಯಾಸ್ಯಂತಿ ವ್ಯಪಗತಶುಚಸ್ತ್ವಾಮಪಿ ಪ್ರೇಕ್ಷ್ಯ ಹಂಸಾಃ || (ಉ.ಮೇ.15)*

10. ಎರಡು ಮರಗಳ ನಡುವೆ ನನ್ನ ಮನೆಯಲ್ಲಿ ಹಸಿ ಬಿದಿರಿನ ಹಾಗೆ ಕಾಂತಿಯುಳ್ಳ ಮರಕತ ಮಣಿಗಳಿಂದ ಮಾಡಲ್ಪಟ್ಟ ಜಗಲಿಯಲ್ಲಿ ಹೊಳೆಯುವ ಸ್ಪಟಿಕದ ಹಲಗೆಯುಳ್ಳ ಒಂದು ಬಂಗಾರದ ತುಂಡಿದೆ. ಆ ತುಂಡಿನ ಮೇಲೆ ಹಗಲೆಲ್ಲ ಬಳೆಗಳ ಸದ್ದಿನೊಡಗೂಡಿದ ಚಪ್ಪಾಳೆಗಳಿಂದ ನನ್ನ ಹೆಂಡತಿಯಿಂದ ಆಡಿಸಲ್ಪಟ್ಟ ನವಿಲು, ಸಂಜೆ ಅದರ ಮೇಲೆ ಕುಳಿತು ವರ್ಷಕಾಲ ನೋಡಿ ಕುಣಿಯುವುದು.



*ತನ್ಮಧ್ಯೇ ಚ ಸ್ಪಟಿಕಫಲಕಾ ಕಾಂಚನೀ ವಾಸಯಷ್ಠಿ*
*ರ್ಮೂಲೇ ಬದ್ಧಾ ಮಣಿಭಿರನತಿಪ್ರೌಢವಂಶಪ್ರಕಾಶ್ಯೈಃ /*
*ತಾಲೈಃ ಶಿಂಜಾವಲಯಸುಭಗ್ಯೈರ್ನರ್ತಿತಃ ಕಾಂತಯಾ ಮೇ*
*ಯಾಮಧ್ಯಾಸ್ತೇ ದಿವಸವಿಗಮೇ ನೀಲಕಂಠಃ ಸ್ಸುಹೃದ್ವಃ // (ಉ.ಮೇ.18)*

11. ಎಲೈ ಮೇಘವೇ, ನೀನು ನನ್ನ ಪತ್ನಿಯನ್ನು ನೋಡುವ ಕಾಲದಲ್ಲಿ ಆ ಸ್ತ್ರೀಯು ತನ್ನ ಪತಿಯೊಡನೆ ಸಮಾಗಮ ಉಂಟಾಗುವುದಕ್ಕೆ ನನ್ನ ಇಷ್ಟದೇವತೆಗಳನ್ನು ಪೂಜೆ ಮಾಡುತ್ತಿದ್ದರೂ ಇರಬಹುದು. ವಿರಹದಿಂದ ಕೃಶವಾಗಿರುವುದರಿಂದ ನೋಡಿದ್ದಾದರೂ ಈಗ ಊಹಿಸಬೇಕಾಗಿರುವ ನನ್ನ ಶರೀರದ ಸ್ಥಿತಿಯನ್ನು ಆಲೋಚಿಸಿ ಅದಕ್ಕೆ ತಕ್ಕಂತೆ ನನ್ನ ಚಿತ್ರವನ್ನು ನೋಡಿ ಹಲಗೆಯ ಮೇಲೆ ಬರೆಯುತ್ತಿದ್ದರೂ ಇರಬಹುದು ಅಥವಾ ಪಂಜರದಲ್ಲಿರುವ ಮುದ್ದಾಗಿ ಮಾತನಾಡುವ ಹೆಣ್ಣು ಗಿಣಿಯನ್ನು ಹಿಡಿದು ನನ್ನ ಪತಿಯನ್ನು ನಿನ್ನ ಪ್ರೇಮಿಯೆಂದು ನೆನಪಿಸಿಕೊಳ್ಳುತ್ತೀಯೋ ಎಂದು ಕೇಳುತ್ತಲೂ ಇರಬಹುದು.

*ಆಲೋಕೇ ತೆ ನಿಪತತಿ ಪುರಾ ಸಾ ಬಲಿವ್ಯಾಕುಲಾ ವಾ*
*ಮತ್ಸಾದೃಶ್ಯಂ ವಿರಹತನುವಾ ಭಾವಗಮ್ಯಂ ಲಿಖಂತೀ /*
*ಪೃಚ್ಛಂತೀ ವಾ ಮಧುರವಚನಾಂ ಶಾರಿಕಾಂ ಪಂಜರಸ್ತಾA*
*ಕಚ್ಚಿದ್ಭರ್ತುಃ ಸ್ಮರಸಿ ರಸಿಕೆ ! ತ್ವಂ ಹಿ ತಸ್ಯ ಪ್ರಿಯೇತಿ // (ಉ.ಮೇ.24)*

**ಮುಂದಿನ ಭಾಗದಲ್ಲಿ ಋತು ಸಂಹಾರ....**



# ಆಂಗ್ಲಭಾಷೆಯಲ್ಲೂ ಬೆರಕೆ!

**ಶ್ರೀಲಕ್ಷ್ಮಿ** *ಬೆಂಗಳೂರು*

ಇದು ವಿಶಾಲವಾದ ಭೂಮಂಡಲವಾದರೂ ಸಹ 'It's a small world' ಎಂದು ಹೇಳುವ ಕಾಲಘಟ್ಟದಲ್ಲಿ ನಾವಿದ್ದೇವೆ. ಈ ಪ್ರಪಂಚದಲ್ಲಿ 196 ದೇಶಗಳಿದ್ದು 7000ಕ್ಕೂ ಹೆಚ್ಚು ಭಾಷೆಗಳು ಕೇಳಸಿಗುವುದು. ಇವುಗಳಲ್ಲಿ ಹೆಚ್ಚಾಗಿ ಮಾತನಾಡುವ ಭಾಷೆ ಇಂಗ್ಲೀಷ್ ಆದುದರಿಂದ ಇದನ್ನು ಅಂತರರಾಷ್ಟ್ರೀಯ ಭಾಷೆ ಎಂದು ಕರೆಯಲಾಗುವುದು.

ತಂತ್ರಜ್ಞಾನ ಬೆಳೆದಂತೆಲ್ಲಾ ಭಾಷೆಯೂ ಸಹ ತನ್ನ ಚೌಕಟ್ಟು ಮೀರಿ ಅತ್ತಿತ್ತ ಹೋಗಿ ಬಳಕೆಯಾಗುವ ಪ್ರಯತ್ನಕ್ಕೆ ಮುಂದಾಗಿದೆ. ನಮಗೆ ತಿಳಿದೂ ತಿಳಿಯದೆ ಇರುವ ರೀತಿಯಲ್ಲಿ ಹೊಸ ಹೊಸ ಪದಬಳಕೆಗೆ ಒಗ್ಗಿಬಿಡುತ್ತೇವೆ. ಇನ್ನು ಈ ಇಂಟರ್ನೆಟ್, ಮೊಬೈಲ್ ತಂತ್ರಜ್ಞಾನದಿಂದಾಗಿ ಇನ್ನೊಂದಿಷ್ಟು ಹೊಸ ಭಾಷಾ ಪದಪ್ರಯೋಗಕ್ಕೆ ಅವಕಾಶ ಸಿಕ್ಕಂತಾಗಿದೆ. ಆಂಗ್ಲಭಾಷೆ ಎಂದೇ ತಿಳಿದು ಒಂದಿಷ್ಟು ಅನ್ಯದೇಶೀಯ ಭಾಷೆಗಳನ್ನು ಬಳಸುತ್ತೇವೆ. ಈ ಪದಗಳ ಅರ್ಥ ಆ ಸಂಧರ್ಭಕ್ಕೆ ಸರಿ ಇದ್ದರೂ ಸಹ ಈ ಪದದ ಮೂಲ ಬೇರೆ ಭಾಷೆಯದ್ದಾಗಿರುತ್ತದೆ. ಇಂತಹ ಒಂದಿಷ್ಟು ಪದಗಳನ್ನು ಈಗ ನೋಡೋಣ.

ಹಾಡಿನ ಸಾಹಿತ್ಯರಹಿತ ವಾದ್ಯಸಂಗೀತವನ್ನು karaoke ಎನ್ನಲಾಗುವುದು. ಈ ಕರೋಕೆ ಬಳಸಿಕೊಂಡು ಹಾಡುವುದು ಈಗ ಹೆಚ್ಚು ಪ್ರಚಲಿತವಾಗಿದೆ. ಇದು ಒಂದು ಜಪಾನೀಸ್ ಪದ. 2004ನೇ ಇಸವಿಯಲ್ಲಿ ಭಾರತವನ್ನು ಅಪ್ಪಳಿಸಿದ Tsunami ಪ್ರವಾಹವನ್ನು ಮರೆಯುವಂತಿಲ್ಲ. ಈ ಜಪಾನೀಸ್ ಪದದಲ್ಲಿ 't' ಸೈಲೆಂಟ್ ಲೆಟರ್ ಆಗಿ ಪರಿಗಣಿಸಿ ಸುನಾಮಿ ಎಂದು ಉಚ್ಚರಿಸುತ್ತಾರಾದರೂ ಜಪಾನೀಸ್ ಭಾಷೆಯಲ್ಲಿ ಅದರ ಉಚ್ಚಾರಣೆ ತ್ಸುನಾಮಿ ಎಂದೇ ಇದೆ. ಈಗೆಲ್ಲಾ ಸಾಮಾಜಿಕ ಜಾಲತಾಣಗಳಲ್ಲಿ ನಮ್ಮ ಅನಿಸಿಕೆಗಳನ್ನು ಚಿಕ್ಕ ಚಿತ್ರ ಚಿಹ್ನೆಯ ಮೂಲಕ ವ್ಯಕ್ತಪಡಿಸುತ್ತೇವೆ. ಇದನ್ನು emoji ಎಂದು ಕರೆಯಲಾಗುವುದು. ಇದು ಜಪಾನೀಸ್ ಪದವೇ. Origami (ಆರಿಗಾಮಿ, ಕಾಗದದಿಂದ ಮಾಡುವ ವಿಶಿಷ್ಟ ಕಲೆ), bonsai (ಬೋನ್ಸಾಯ್, ಕುಬ್ಜವಾಗಿ ಬೆಳೆಸುವ ಮರಗಳು), sudoku (ಸುಡೋಕು, ಸಂಖ್ಯೆಗಳ ಪದಬಂಧ) ಹೀಗೆ ಇನ್ನೊಂದಿಷ್ಟು ಜಪಾನೀಸ್ ಪದಗಳು ಇಂಗ್ಲೀಷಿನೊಂದಿಗೆ ಬೆರೆತುಹೋಗಿವೆ.

Plaza ಎಂದರೆ ಅಂತರ್ನಿರ್ಮಿತ ಪ್ರದೇಶದಲ್ಲಿ ಸಾರ್ವಜನಿಕ ಚೌಕ, ಹೆಚ್ಚಾಗಿ ಬಿಸಿನೆಸ್ ಕಾಂಪ್ಲೆಕ್ಸ್ ಅಥವ ಶಾಪಿಂಗ್ ಮಾಲ್ ಗಳಿಗೆ ಈ ಪ್ಲಾಜಾ ಎಂದು ಕರೆಯುತ್ತೇವೆ. ಇದು ಸ್ಪ್ಯಾನಿಷ್ ಪದವಾಗಿದ್ದು, ಇಂಗ್ಲೀಷ್ ನಲ್ಲಿ 'z' ಎಂದು ಬಳಸುವ ಅಕ್ಷರವನ್ನು ಸ್ಪ್ಯಾನಿಷ್ 'th' (platha) ಎಂದು ಉಚ್ಚರಿಸುತ್ತಾರೆ. ಅದೇ ರೀತಿಯೇ Savvy (ಸ್ಯಾವಿ, ತಿಳಿದಿರುವವರು. ಉದಾಹರಣೆಗೆ Tech Savvy ಎಂದರೆ ಟೆಕ್ನಾಲಜಿ ತಿಳಿದಿರುವವ ಎನ್ನುವ ಅರ್ಥ), Cafeteria (ಕೆಫಿಟೇರಿಯಾ, ಕಾಫಿ ಶಾಪ್) ಎನ್ನುವುದು ಸಹ ಸ್ಪ್ಯಾನಿಷ್ ಪದಗಳೇ.

ಈಗೆಲ್ಲಾ ಇಟಾಲಿಯನ್ ಖಾದ್ಯ ಎಲ್ಲರಿಗೂ ಅಚ್ಚುಮೆಚ್ಚಾದುದರಿಂದ Pizza, Pasta ಹೆಸರುಗಳು ಎಲ್ಲರಿಗೂ ತಿಳಿದಿರುತ್ತದೆ. Broccoli (ಬ್ರೊಕೊಲಿ, ಹಸಿರು ಬಣ್ಣದ ಕೋಸಿನ ತಳಿಯ ಒಂದು ತರಕಾರಿ), Cappuccino (ಕ್ಯಾಪುಚಿನೊ, ಹಾಲಿನ ನೊರೆಯಿಂದ ಮಾಡುವ ಒಂದು ಬಗೆಯ ಕಾಫಿ) ಪದಗಳು ಸಹ ಇಂಗ್ಲೀಷ್‌ನಂತೆಯೇ ಬಳಸುವ ಇಟಲಿ ಮೂಲದ ಪದಗಳು.

ಹಲವು ಫ್ರೆಂಚ್ ಪದಗಳನ್ನು ಸಹ ನಾವು ದಿನನಿತ್ಯ ನಮ್ಮ ಮಾತಿನಲ್ಲಿ ಬಳಸುತ್ತಿರುತ್ತೇವೆ. Bon voyage (ಬಾನ್ ವೋಯಾಜ್, ಶುಭ ಪ್ರಯಾಣ ಎಂದು ಹೇಳುವ ಪದ), Fiance/ Fiancee (ಫಿಯಾನ್ಸ್ /ಫಿಯಾನ್ಸಿ, ನಿಶ್ಚಿತ ವರ/ನಿಶ್ಚಿತ ವಧು) Souvenir (ಸೊವೆನಿರ್, ಸ್ಮರಣೆಯ ವಸ್ತು) Bouquet (ಬೊಕೆ, ಪುಷ್ಪ ಗುಚ್ಛ) ಇವು ಒಂದಿಷ್ಟು ಫ್ರೆಂಚ್ ಪದಗಳು.




ಜರ್ಮನ್ ಭಾಷೆಯ ಪದಗಳನ್ನು ನೋಡುವುದಾದರೆ, Kindergarten (ಕಿಂಡರ್ಗಾರ್ಟೆನ್, ಶಿಶು ವಿಹಾರ) ನಮ್ಮ LKG, UKG ಎನ್ನುವ ಹೆಸರುಗಳಲ್ಲಿಯೂ ಸಹ ಇದೇ ಪದ ಸೇರಿಹೋಗಿದೆ. Fest (ಫೆಸ್ಟ್, ಒಂದು ನಿರ್ದಿಷ್ಟ ಚಟುವಟಿಕೆಗೆ ಮೀಸಲಾಗುವ ಹಬ್ಬ ಅಥವ ಸಭೆ). ವಾಹನ ಕಂಪನಿಗಳು ಸೇರಿದಂತೆ ಹಲವು ಕಂಪನಿಗಳು ತಮ್ಮ ಉತ್ಪನ್ನಗಳಿಗೆ ಅನ್ಯದೇಶೀಯ ಭಾಷೆಗಳ ಹೆಸರುಗಳನ್ನು ಇಡುವುದು ಈಗ ಟ್ರೆಂಡ್ ಆಗಿದೆ. ಇದರಿಂದಲೂ ಒಂದಿಷ್ಟು ಪದಗಳನ್ನು ಇಂಗ್ಲೀಷ್ ಪದಗಳೆಂದೇ ಭಾವಿಸಿಬಿಡುತ್ತೇವೆ.

ಬೇರೆ ದೇಶದ ಭಾಷಾ ಕಲಿಕೆಗೆ ಈಗ ಹೆಚ್ಚು ಬೇಡಿಕೆ ಇದೆ. ಆದ್ದರಿಂದಲೇ ಬಹಳ ಶಾಲಾ ಕಾಲೇಜುಗಳು ಫಾರಿನ್ ಭಾಷೆಗಳ ಕಲಿಕೆಗೆ ಪ್ರೋತ್ಸಾಹ ನೀಡುತ್ತಿವೆ. ಪಕ್ಕದ ರಾಜ್ಯದ ಅಥವಾ ಪಕ್ಕದ ಊರಿನ ಭಾಷೆ ಕಲಿಯುವಷ್ಟು ಸುಲಭವಾಗಿ ಅನ್ಯದೇಶೀಯ ಭಾಷೆಗಳನ್ನು ಕಲಿಯಲಾಗುತ್ತಿದೆ. ಈ ಕಲಿಕೆ ಎಷ್ಟೋ ಕಡೆಯಲ್ಲಿ ಅನಿವಾರ್ಯತೆಯೂ ಹೌದು.

ಹೇಗೆ ಕನ್ನಡ ಭಾಷೆಯೊಂದಿಗೆ ಎಷ್ಟೋ ಇಂಗ್ಲೀಷ್ ಹಾಗು ಇತರೆ ಭಾಷೆಗಳ ಪದಗಳು ಸೇರಿ ಹೋಗಿದೆಯೋ, ಹಾಗೆಯೇ ಇಂಗ್ಲೀಷ್ ಭಾಷೆಗೂ ಸಹ ಒಂದಿಷ್ಟು ಅನ್ಯದೇಶೀಯ ಭಾಷೆಯ ಪದಗಳ ಬೆರಕೆಯಾಗಿದೆ.



# ಶಿಕ್ಷಕರ ದಿನಾಚರಣೆಯ ಮಹತ್ವ

ಆರ್. ಶ್ರೀಧರ್

ಶಿಕ್ಷಣ ಎಂಬುದು ಎಲ್ಲರಿಗೂ ಬೇಕಾದ ಅತ್ಯಂತ ಮೂಲಭೂತ ಮತ್ತು ಪ್ರಮುಖವಾದ ಅಂಶ. ಸಮಾಜದ ಏಳಿಗೆಗಾಗಿ ಪ್ರತಿಯೊಂದು ದೇಶ ತನ್ನ ಎಲ್ಲ ನಾಗರಿಕರನ್ನು ಸುಶಿಕ್ಷತರನ್ನಾಗಿಸುವುದಕ್ಕೆ ಅಗತ್ಯವಾದ ಎಲ್ಲ ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಹಾಗಾದರೆ ಎಂತಹ ಶಿಕ್ಷಣ ಬೇಕು ಎಂದರೆ, ಶಿಕ್ಷಣ ವ್ಯಕ್ತಿಯ ಮಾನಸಿಕ, ದೈಹಿಕ, ಭೌದ್ಧಿಕ ಮಟ್ಟವನ್ನು ಹೆಚ್ಚಿಸಿ ಅರೋಗ್ಯವಂತ ಮತ್ತು ಪರಿಪೂರ್ಣ ವ್ಯಕ್ತಿಯಾಗಿ ಮಾಡುವುದು. ಶಿಕ್ಷಣ ಎಂದರೆ ವ್ಯಕ್ತಿತ್ವದ ನೈಜ ಅನಾವರಣ ಮಾಡುವುದು ಇನ್ನು ಮುಂತಾದ ಹಲವಾರು ಕಾರಣಕ್ಕಾಗಿ ಶಿಕ್ಷಣ ಒಂದು ಮೂಲಭೂತ ಹಕ್ಕಾಗಿದೆ. ಇನ್ನೊಂದು ವಿಷಯವೆಂದರೆ ಎಲ್ಲರಿಗೂ ಸಮಾನವಾದ ಶಿಕ್ಷಣ ಸಿಗುವುದು ಒಂದು ಪ್ರಮುಖ ಕಾರ್ಯವಾಗುತ್ತದೆ. ಒಳ್ಳೆಯ ಗುಣಮಟ್ಟದ ಶಿಕ್ಷಣ ಒಂದು ಪರಿಪೂರ್ಣ ವ್ಯಕ್ತಿತ್ವ ನಿರ್ಮಾಣ ಮಾಡಲು ಸಹಾಯ ಮಾಡಬೇಕು.

ಇದನ್ನು ಕಾರ್ಯಗತ ಮಾಡಬೇಕಾದರೆ ಕಲಿಯುವ ವಿಷಯ ಬಹಳ ಮುಖ್ಯವಾಗುತ್ತದೆ ಮತ್ತು ಉತ್ತಮ ಶಿಕ್ಷಣ ನೀಡುವ ಶಿಕ್ಷಕರು. ಮಕ್ಕಳಿಗೆ ಹೇಗೆ ತಂದೆ ತಾಯಿ ತುಂಬ ಮುಖ್ಯರಾಗುತ್ತಾರೋ ಅಂತೆಯೇ ಶಿಕ್ಷಕರು ಸಹ. ಏನೂ ತಿಳಿಯದ ಮಗುವಿನ ಮೊದಲ ಶಿಕ್ಷಣ ಮನೆಯಲ್ಲೆ ಆಗುತ್ತದೆ ಎಂದು ನಮಗೆ ತಿಳಿದಿದೆ. ತಾಯಿಯೇ ಮೊದಲ ಗುರು ಮನೆಯೇ ಮೊದಲ ಪಾಠ ಶಾಲೆ.

ಮಗು ಬೆಳೆಯುತ್ತಿದ್ದಂತೆ ಸಮಾಜಮುಖಿಯನ್ನಾಗಿಸಲು ಮತ್ತು ಹೆಚ್ಚಿನ ಕಲಿಕೆಯನ್ನು ಮುಂದುವರೆಸಲು ಶಾಲೆಯ ಪಾತ್ರ ತುಂಬ ಪ್ರಮುಖವಾಗುತ್ತದೆ. ಶಾಲೆಯಲ್ಲಿ ಮಕ್ಕಳು ಇತರೆ ಮಕ್ಕಳ ಜೊತೆ ಬೆರೆತು ಒಂದು ಹೊಸ ಸನ್ನಿವೇಶದಲ್ಲಿ ಕಲಿಕೆಯನ್ನು ಮುಂದುವರೆಸುತ್ತಾರೆ. ಶಾಲೆಯಲ್ಲಿ ಸಿಗುವ ಒಳ್ಳೆಯ ಕಲಿಕೆಯ ಅನುಭವ, ಒಳ್ಳೆಯ ಸ್ನೇಹಿತರು ಮತ್ತು ಅದಕ್ಕಿಂತ ದೊಡ್ಡದು ಉತ್ತಮ ಗುರುಗಳು.

ನಮ್ಮ ದೈನಂದಿನ ಪ್ರಾರ್ಥನೆಯಾದ "ಗುರು ಬ್ರಹ್ಮ, ಗುರು ವಿಷ್ಣು, ಗುರುದೇವೋ ಮಹೇಶ್ವರ, ಗುರುಸಾಕ್ಷಾತ್ ಪರಬ್ರಹ್ಮ ತಸ್ಮೈಶ್ರೀ ಗುರವೇ ನಮ:" ಹೇಳುವಂತೆ ಗುರುಗಳ ಮಹತ್ವವನ್ನು ತಿಳಿಸುತ್ತದೆ. ಗುರುವನ್ನು ಬ್ರಹ್ಮನಿಗೆ ಹೋಲಿಸಿರುವುದು ಅವರ ಹೊಸತನ, ಹೊಸಪರಿಸರ ಮತ್ತು ಕಲಿಕೆಗೆ ಅನುಕೂಲವಾಗುವ ಸನ್ನಿವೇಶ ಸೃಷ್ಟಿಮಾಡುವ ಚೈತನ್ಯವುಳ್ಳವರಾಗಿದ್ದಾರೆ ಎಂದು. ಇನ್ನು ವಿಷ್ಣುವಿಗೆ ಹೋಲಿಸಿರುವುದು ಹೇಗೆ ತಾವು ಕಲಿಸುವ ಪ್ರಕ್ರಿಯೆಯಲ್ಲಿ ನಿರಂತರತೆಯನ್ನು ಕಾಪಾಡಿಕೊಂಡು, ನಾವಿನ್ಯವಾದ, ತರ್ಕಬದ್ದವಾದ, ಸೃಜನಶೀಲ ಗುಣಗಳನ್ನು ಮಕ್ಕಳಲ್ಲಿ ಬೆಳೆಸುತ್ತಾರೆ ಎಂದು. ಇನ್ನು ಮಹೇಶ್ವರನಿಗೆ ಹೋಲಿಸಿರುವುದು ಶಿವನ ಎರಡು ಗುಣಗಳಿಗಾಗಿ ಅದೇನೆಂದರೆ ಶಿವನು ದಯಾಮಯ, ಕರುಣಾಶಾಲಿ ಅದೇ ರೀತಿ ಶಿಕ್ಷಕರು ಸಹ ವರ್ತಿಸಬೇಕು ಎಂದು. ಮತ್ತೊಂದು ಶಿವನು ರೌದ್ರನೂ ಹೌದು, ಅದೇ ರೀತಿ ಶಿಕ್ಷಕರು ಸಹ ಮಕ್ಕಳನ್ನು ಸರಿದಾರಿಗೆ ತರಲು ಕೆಲವೊಮ್ಮ ಶಿಕ್ಷೆಯನ್ನು ಅಸ್ತ್ರವಾಗಿ ಬಳಸಬೇಕಾಗುತ್ತದೆ ಅನಿವಾರ್ಯ ಸಂದರ್ಭಗಳಲ್ಲಿ ಇದನ್ನು ಬಳಸುವುದು ಮಕ್ಕಳನ್ನು ಸರಿದಾರಿಗೆ ತರಲು ಮಾತ್ರ.

ಪ್ರಸಕ್ತ ಶಾಲೆಗಳಲ್ಲಿ ಸೆಪ್ಟಂಬರೆ 5 ರಂದು ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಗುತ್ತದೆ. ಇದರ ಮುಖ್ಯ ಉದ್ದೇಶ ನಮಗೆ ಅಕ್ಷರ ಜ್ಞಾನವನ್ನು ನೀಡಿ ನಮ್ಮನ್ನು ಕತ್ತಲೆಯ ಲೋಕದಿಂದ ಬೆಳಕಿಗೆ ತರುವ ಗುರುಗಳ ಗೌರವಾರ್ಥವಾಗಿ ನಮ್ಮ ಭಾರತದಲ್ಲಿ ಶಿಕ್ಷಕರ ದಿನಾಚರಣೆಯನ್ನು ಡಾ. ಸರ್ವಪಲ್ಲಿ ರಾಧಾಕೃಷ್ಣನ್ ರವರ ಜನ್ಮದಿನದಂದು ಆಚರಿಸಲಾಗುತ್ತದೆ. ಡಾ. ರಾಧಾಕೃಷ್ಣನ್ ಭಾರತ ಕಂಡ ಅಗ್ರ ಗಣ್ಯ ಶಿಕ್ಷಕರಲ್ಲಿ ಪ್ರಮುಖರಾಗಿದ್ದಾರೆ. ಸ್ವತ: ಶಿಕ್ಷಕರಾಗಿದ್ದ ಇವರು ಶಿಕ್ಷಣದ ಬಗ್ಗೆ ಅತ್ಯಂತ ಗೌರವ, ಪ್ರೀತಿ, ನಿಷ್ಠೆಯನ್ನು ಹೊಂದಿದ್ದರು. 1962ರಲ್ಲಿ ಭಾರತದ ರಾಷ್ಟ್ರಪತಿಯಾದಾಗ ಇವರು, ಶಿಷ್ಯರು ಮತ್ತು ಸ್ನೇಹಿತರು ಸೆಪ್ಟಂಬರ್ 5ರಂದು ತಮ್ಮ ಹುಟ್ಟಿದ ದಿನವನ್ನು ಬೇರೆಯಾಗಿಯೇ ಆಚರಿಸದೇ, ಸೆಪ್ಟಂಬರ್ 5ನ್ನು "ಶಿಕ್ಷಕರ ದಿನವನ್ನಾಗಿ" ಆಚರಿಸಲು ಹೇಳಿದರು. ಅಂದಿನಿಂದ (1962) ಅವರ ಜನ್ಮ ದಿನವನ್ನು ಶಿಕ್ಷಕರ ದಿನವನ್ನಾಗಿ ಆಚರಿಸುತ್ತಾ ಶಿಕ್ಷಣ ಕ್ಷೇತ್ರಕ್ಕೆ ಮತ್ತು ಅವರಿಗೆ ಗೌರವ ಸಲ್ಲಿಸುತ್ತಿದ್ದೇವೆ. ಅದಲ್ಲದೆ, ವಿಶ್ವದ ಎಲ್ಲ ದೇಶಗಳಲ್ಲಿ ಶಿಕ್ಷಕರ ದಿನವನ್ನು



ಬೇರೆ ಬೇರೆ ದಿನಾಂಕಗಳಂದು ಆಚರಿಸಲಾಗುತ್ತಿದ್ದರೂ, ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳಲ್ಲಿ ಪ್ರತಿ ವರ್ಷ ಅಕ್ಟೋಬರ್ 5ರಂದು **ವಿಶ್ವ ಶಿಕ್ಷಕರ ದಿನ**ವನ್ನಾಗಿ ಆಚರಿಸಬೇಕೆಂದು "ಯುನೆಸ್ಕೋ" ಕರೆ ನೀಡಿದೆ. 1966ರ ಅಕ್ಟೋಬರ್ 5 ರಂದು ಯುನೆಸ್ಕೋ ಮತ್ತು ವಿಶ್ವ ಕಾರ್ಮಿಕ ಸಂಸ್ಥೆಯ ನಡುವಿನ ಒಪ್ಪಂದದ ಪ್ರಕಾರ 1994ರಿಂದ ಪ್ರತಿ ಅಕ್ಟೋಬರ್ 5ನ್ನು "ವಿಶ್ವ ಶಿಕ್ಷಕರ ದಿನ"ವನ್ನಾಗಿ ಆಚರಿಸಲಾಗುತ್ತದೆ. ಇದು ವಿಶ್ವಾದ್ಯಂತ ಶಿಕ್ಷಕರಿಗೆ ನೀಡುವ ಗೌರವ.

ನಮ್ಮ ಶಾಲೆಗಳಲ್ಲಿ ಈ ದಿನವನ್ನು ತುಂಬ ಸರಳವಾಗಿ ಆಚರಿಸಲಾಗುತ್ತದೆ, ಮತ್ತು ಎಲ್ಲ ಮಕ್ಕಳಿಗೂ ಅಂದಿನ ದಿನದ ಮಹತ್ವವನ್ನು ಹೇಳಲಾಗುತ್ತದೆ. ಸರ್ಕಾರವು ತಾಲ್ಲೂಕು, ಜಿಲ್ಲಾ ಮತ್ತು ರಾಜ್ಯ ಹಂತಗಳಲ್ಲಿ ಕಾರ್ಯಕ್ರಮಗಳನ್ನು ನಡೆಸುತ್ತದೆ ಹಾಗು ಉತ್ತಮ ಸಾಧನೆ ಮಾಡಿದ ಶಿಕ್ಷಕರನ್ನು ಅಂದು ಸನ್ಮಾನಿಸಲಾಗುತ್ತದೆ. ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಶಿಕ್ಷಕರ ಪಾತ್ರ ಎಂತಹುದು ಎಂಬುದು ನಮಗೆ ತಿಳಿಯುತ್ತದೆ ಮತ್ತು ಶಿಕ್ಷಕರ ಜವಾಬ್ದಾರಿಯನ್ನು ಹೆಚ್ಚಿಸುತ್ತದೆ. ಏನೂ ತಿಳಿಯದ ಮಗುವನ್ನು ಪರಿಪೂರ್ಣ ವ್ಯಕ್ತಿಯನ್ನಾಗಿಸಿ ಉತ್ತಮ ನಾಗರಿಕನನ್ನಾಗಿಸುವುದು ಒಂದು ಗುರುತರ ಜವಾಬ್ದಾರಿಯಾಗಿದೆ ಇಂತಹ ಕ್ಲಿಷ್ಟಕರ ವೃತ್ತಿಯನ್ನು ನಿಭಾಯಿಸುವುದು ಒಂದು ಸವಾಲೇ ಸರಿ.



ಶಿಕ್ಷಕ ವೃತ್ತಿ ಕೇವಲ ಒಂದು ವೃತ್ತಿಯಾಗದೇ ಅದೊಂದು ಶಕ್ತಿಯಾಗಬೇಕು. ಶಿಕ್ಷಣ ಎಂದರೆ ಬರೀ ಪಾಠ ಮಾಡುವುದು, ಪರೀಕ್ಷೆ ಮಾಡುವುದು ಮಾತ್ರವಲ್ಲ, ಶಿಕ್ಷಕ ಒಬ್ಬ ತಾಯಿಯಾಗಿ ತಮ್ಮ ವಿದ್ಯಾರ್ಥಿಗಳನ್ನು ಪೋಷಿಸಬೇಕು, ತಂದೆಯಾಗಿ ರಕ್ಷಿಸಬೇಕು, ಸ್ನೇಹಿತನಾಗಿ ತಿದ್ದಬೇಕು ಇನ್ನು ಹಲವಾರು ರೀತಿಯಲ್ಲಿ ವರ್ತಿಸಿ ತಮ್ಮ ವಿದ್ಯಾರ್ಥಿಗಳ ಮನಗೆದ್ದು ಅವರನ್ನು ಸರಿದಾರಿಗೆ ಕರೆದ್ಯೊಯುವ ಸದಾ ಸ್ಪೂರ್ತಿಯ ಚಿಲುಮೆಯಾಗಬೇಕು ಮತ್ತು ಸದಾ ಬೆಳಗುವ ಜ್ಯೋತಿಯಾಗಬೇಕು. ತಾನು ಸರಿದಾರಿಯಲ್ಲಿ ನಡೆದು ತನ್ನ ವಿದ್ಯಾರ್ಥಿಗಳನ್ನು ಪ್ರೇರೇಪಿಸಬೇಕು ಆಗ ಮಾತ್ರ ಉತ್ತಮ ನಾಗರೀಕರಿಂದ ತುಂಬಿದ ಸಮಾಜವನ್ನು ನಿರ್ಮಿಸಲು ಸಾಧ್ಯವಾಗುತ್ತದೆ.

ಶಾಲೆಗೆ ಬರುವ ಪ್ರತಿಯೊಂದು ಮಗುವಿನ ಮನಸ್ಸು ಒಂದು ಬಿಳಿ ಹಾಳೆಯಂತಿರುತ್ತದೆ. ಇಂತಹ ನಿಶ್ಕಲ್ಮಶವಾದ ಮುದ್ದು ಮಕ್ಕಳ ಮನಸ್ಸಿನ ಸುಂದರ ಹಾಳೆಯನ್ನು ರಂಗು ರಂಗಾಗಿ ಹಸನುಗೊಳಿಸುವುದು ಶಿಕ್ಷಕರ ಕೆಲಸವಾಗಬೇಕು. ಮಕ್ಕಳಲ್ಲಿ ಒಳ್ಳೆಯದು, ಕೆಟ್ಟದು, ಸತ್ಯ, ಧರ್ಮಗಳ ಅರಿವನ್ನು ಬಿತ್ತಿ ಸಮಾಜದಲ್ಲಿ ಬದುಕಲು ಬೇಕಿರುವ ನೈತಿಕತೆ ಬೆಳೆಸುವುದು, ಎಲ್ಲರೂ ಒಂದೆ ಮತ್ತು ಎಲ್ಲರೂ ಸಮಾನರು ಎಂಬ ಭಾವ ಮೂಡಿಸಿ ಮೇಲು ಕೀಳುಗಳನ್ನು ತೊರೆದು ಭಾವೈಕ್ಯತೆಯನ್ನು ಬೆಳೆಸಿ ವಿಶ್ವವನ್ನು "ವಸುದೇವ ಕುಟುಂಬಕಂ" ಎಂಬಂತೆ ಬೆಳಸುವುದು ಸಹ ಶಿಕ್ಷಕರ ಗುರಿಯಾಗಬೇಕು ಇದರ ಜೊತೆಗೆ ಅಂಧಕಾರವನ್ನು ತೊಡೆದು, ಮೂಢನಂಬಿಕೆಗಳನ್ನು ಅಳಿಸಿ, ಅಧರ್ಮದ ಹಾದಿ ತುಳಿಯದೆ, ಸುಸಂಸ್ಕೃತ ಪರಿಪೂರ್ಣ ನಾಗರೀಕರನ್ನಾಗಿಸಿದರೆ ಶಿಕ್ಷಕರ ಕಾರ್ಯ ಪರಿಪೂರ್ಣವಾಗುತ್ತದೆ ಎಂದು ನನ್ನ ಅನಿಸಿಕೆ.

ಪ್ರಸಕ್ತ ಸಮಾಜದಲ್ಲಿ ನಡೆಯುತ್ತಿರುವ ಕ್ರೌರ್ಯ, ಭಯೋತ್ಪಾದನೆ, ಯುದ್ಧ, ಕೊಲೆ ದರೋಡೆಗಳನ್ನು ತಪ್ಪಿಸಲು ಎಲ್ಲರಿಗೂ ಉತ್ತಮ ಶಿಕ್ಷಣದ ಅವಶ್ಯಕತೆ ಇದೆ. ಆದರೆ ಎಷ್ಟೋ ಮಕ್ಕಳಿಗೆ ಇನ್ನೂ ಕೂಡ ಉತ್ತಮ ಶಿಕ್ಷಣ ಕೊಡುವಲ್ಲಿ ಎಷ್ಟೋ ಸರ್ಕಾರಗಳು ವಿಫಲವಾಗುತ್ತಿವೆ ಪರಿಣಾಮ ನಮ್ಮ ಕಣ್ಣ ಮುಂದೆ ಇದೆ. ಯಾವುದೆ ಸಮಾಜದ ನೈತಿಕತೆಯ ಉಳಿವು ಅಲ್ಲಿ ಸಿಗುವ ಉತ್ತಮ ಶಿಕ್ಷಣದಿಂದ ಮಾತ್ರ ಸಾಧ್ಯ. ಇದನ್ನು ಎಲ್ಲರೂ ಮನಗಾಣಬೇಕು. ಶಿಕ್ಷಕರ ದಿನಾಚರಣೆಯ ಈ ಶುಭ ದಿವಸದಂದು ನಾವೆಲ್ಲ ಈ ಧೃಢ ಸಂಕಲ್ಪವನ್ನು ತೆಗೆದುಕೊಂಡು ಅರೋಗ್ಯವಂತ ಸಮಾಜ ಕಟ್ಟುವುದೇ ನಮ್ಮ ಗುರಿಯಾದಾಗ ಮಾತ್ರ ಶಿಕ್ಷಕರ ದಿನಾಚರಣೆಗೆ ಒಂದು ಪರಿಪೂರ್ಣತೆ ಬರುತ್ತದೆ ಎಂಬುದು ನನ್ನ ನಂಬಿಕೆಯಾಗಿದೆ.





# RV ಅರಿವು

**ಅನಿಲ್ ಭಾರದ್ವಾಜ್,** ನ್ಯೂ ಜರ್ಸಿ

**ಹ**ಲವಾರು ವರ್ಷಗಳಿಂದ ನಾನು ಹಾಗು ಲಕ್ಷ್ಮಿ, ದೂರದ ಪ್ರವಾಸ ಮಾಡುವಾಗಲೆಲ್ಲಾ, ಹೆದ್ದಾರಿಗಳಲ್ಲಿ RV ನಮ್ಮ ಮುಂದೆ ಹಾದುಹೋದಾಗಲೆಲ್ಲಾ, "RV ಬಾಡಿಗೆಗೆ ತೊಗೊಂಡು coast-to-coast drive ಮಾಡಿದ್ರೆ ಎಷ್ಟು ಚೆನ್ನಾಗಿರತ್ತೆ ಅಲ್ವಾ? ಪ್ರಯಾಣ luxurious ಮತ್ತೆ ಹಾಯಾಗಿ ಇರತ್ತೆ ಅನ್ಸತ್ತೆ," ಅಂತ ಯೋಚಿಸುತ್ತಿದ್ದೆವು. ಅದನ್ನು ಆಲೋಚನೆಯೆಂದೋ, ಬಯಕೆಯೆಂದೋ ಏನಾದರೂ ಕರೆಯಿರಿ, ಆದರೆ ಅದನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುವ ದಿಕ್ಕಿನಲ್ಲಿ ನಾವು ಮನಸ್ಸು ಮಾಡಿರಲಿಲ್ಲ, ಕಾಲ ಕೂಡಿಬಂದಿರಲಿಲ್ಲ. ಮಕ್ಕಳಾದ ಮೇಲಂತೂ, ಅವರು ಮೂಳೆರಹಿತ ಬೊಂಬೆಗಳಂತೆ ಕಾರಿನ ಹಿಂದಿನ ಸೀಟುಗಳಲ್ಲಿ, ವಕ್ರ ಭಂಗಿಗಳಲ್ಲಿ ಮಲಗಿರುವುದನ್ನು ನೋಡಿ, "I hate to see kids like this during long drives!," ಎಂದು ಹೆತ್ತ ಕರುಳು ವಿಷಾದಿಸಿದ್ದೂ ಉಂಟು. ಹುಡುಗರು ಸ್ವಲ್ಪ ಬೆಳೆದ ಮೇಲೆ ಅವರಿಂದ ಪದೇಪದೇ ಹೊರಬರುತ್ತಿದ್ದ "RV (Are we) there yet ?!" ಗೊಣಗಾಟಕ್ಕೆ ಈ RV ಯೇ ಒಂದು ರಾಮಬಾಣವಾಗಬಹುದೇ ಎಂದು ನಮ್ಮ ಮನಸ್ಸು ಪ್ರಶ್ನಿಸುತ್ತಿತ್ತು.

ಈ ದೃಶ್ಯದಲ್ಲಿ ಪ್ರವೇಶ ಮಾಡಿತು ಕರೋನ ವೈರಾಣುವಿನ ವಿಶ್ವವ್ಯಾಪಿ ವಿಪತ್ತು! ೨೦೧೯ ರಲ್ಲಿ ಶುರುವಾದ ನಮ್ಮೆಲ್ಲರ ಈ ವ್ಯಥೆ, ಅಲೆಅಲೆಗಳಲ್ಲಿ ನಮ್ಮನ್ನು ಬಾಧಿಸಿತು. ಕೊನೆಗೂ, ೨೦೨೧ ರ ಏಪ್ರಿಲ್ ಹೊತ್ತಿಗೆ, ನಮಗೆಲ್ಲ ಲಸಿಕೆ ಪಡೆಯುವ ಅವಕಾಶ ದೊರೆತಾದ, 'ನಾ ಮುಂದು ತಾ ಮುಂದು' ಎಂಬಂತೆ ಬಹುತೇಕ ದೇಸಿ ಜನರು ಚುಚ್ಚಿಸಿಕೊಂಡು ಬಂದೆವು. ವಿಶಿಷ್ಟವಾಗಿ, ನಮ್ಮ ಮನೆಯಲ್ಲಿ, ಜನಸಂಪರ್ಕ ಸಂಪೂರ್ಣ ರದ್ದುಮಾಡಿಕೊಂಡಿದ್ದ ನಾವು, ಕ್ರಮೇಣ, ಪುಕ್ಕಲಿಂದಲೇ ಜನರನ್ನು ಭೇಟಿಮಾಡಲು ಆರಂಭಿಸಿದೆವು. ಪ್ರತೀ ವರುಷ ಏನಾದರೊಂದು 'outdoor adventure' ಮಾಡಿಕೊಂಡೇ ಬರುತ್ತಿದ್ದ ನಮಗೆ ೨೦೨೧ ಬೇಸಿಗೆ ಹೇಗೆ ಕಳೆಯಬೇಕೆಂಬ ಸವಾಲೊಡ್ಡಿತು. ಭಾರತದಲ್ಲಿ delta variant ನ ವಿಕೋಪಕ್ಕೆ ತತ್ತರಿಸಿದ್ದ ನಮ್ಮ ಬಹಳಷ್ಟು ಕುಟುಂಬದ ಸದಸ್ಯರುಗಳ ಶೋಕದ ಕತ್ತಲು, ನಮ್ಮ ಭರವಸೆಯ ಬೆಳಕನ್ನು ಆಗಿಂದಾಗ್ಗೆ ಕಸಿಯುತ್ತಿತ್ತು. ಕೊನೆಗೂ, ಯಾವುದಾದರು ರಾಷ್ಟ್ರೀಯ ಉದ್ಯಾನವನಕ್ಕೆ ಹೋಗುವುದು, ಆದಷ್ಟು ಬಾಹ್ಯ ಚಟುವಟಿಕೆಗಳನ್ನೇ ಮಾಡುವುದು ಎಂದು ನಿರ್ಧಾರ ಮಾಡಿದೆವು. ಆದರೆ 'ಸುಮಾರು ಒಂದು ವಾರಗಳ ಕಾಲ ಎಲ್ಲಿ ತಂಗುವುದು? ' ಎಂಬ ಪ್ರಶ್ನೆಗೆ ಇನ್ನು ಉತ್ತರ ಇರಲಿಲ್ಲ. ಏಕೆಂದರೆ, ಕೋವಿಡ್ ಪರಿಸ್ಥಿತಿಯಲ್ಲಿ ಹೋಟೆಲುಗಳ ರೂಮುಗಳಲ್ಲಿ ಮಲಗುವುದಕ್ಕೆ ನಮ್ಮ ಮನಸ್ಸು ಅಷ್ಟು ಒಪ್ಪುತ್ತಿರಲಿಲ್ಲ. ಆಗ ಹಿಂದೆಲ್ಲೋ ಅಡಗಿದ್ದ ನಮ್ಮ RV ಬಾಡಿಗೆಗೆ ತೆಗೆದುಕೊಂಡು ಅದರಲ್ಲಿ ಪ್ರಯಾಣ ಮಾಡುವ, ತಂಗುವ ಯೋಚನೆ ಥಟ್ಟನೆ ಮುಂಬದಿಗೆ ಬಂತು. ಅಲ್ಲಿಂದ ಶುರುವಾಯಿತು ನಮ್ಮ RV ಪ್ರಯಾಣ.

ಕೆಲವಷ್ಟು ದಿನ ಈ RV ಸಾಹಸದ ಕಾರ್ಯ ಸಾಧ್ಯತೆಯ ಬಗ್ಗೆಯೇ ನಾನು ಸ್ವಲ್ಪ ಆಳವಾಗಿ ಸಂಶೋಧಿಸಲು ಶುರುಮಾಡಿದೆ. ಮೊದಲಿಗೆ, RV ಎಂದರೆ 'Recreational Vehicle' - ಜನರು ತಮ್ಮ ವಿಹಾರ ಅಥವಾ ವಿನೋದಕ್ಕೆ ಬಳಸುವ ಒಂದು ರೀತಿಯ ವಾಹನ ಎಂದರ್ಥ. ಇದರಲ್ಲಿ ಬಹಳಷ್ಟು ವಿಧವಾದ ವಾಹನಗಳಿವೆ. Motorized RVs ಮತ್ತು Towable RVs ಮೂಲ ವಿಧಗಳು. Motorized RVs ಸಂಪೂರ್ಣ ವಾಹನ RVಯಾಗಿರುತ್ತದೆ. Towable RVs ನಲ್ಲಿ ಬೇರೊಂದು ವಾಹನ RV ರೀತಿಯ ಒಂದು ಭಾಗವನ್ನು ತನ್ನ ಹಿಂದೆ ಎಳೆದುಕೊಂಡು ಹೋಗುತ್ತದೆ. ತಮ್ಮ ವಾಹನದ ಹಿಂದೆ trailer ಅಥವಾ ಇನ್ನಾವ ವಾಹನವನ್ನು tow ಮಾಡಿಕೊಂಡು ಓಡಾಡಿರದವರಿಗೆ Towable RVs ತುಸು ಕಷ್ಟವಾಗುತ್ತದೆ. Motorized RVs ಗಳಲ್ಲಿ ಅವುಗಳ ಗಾತ್ರಕ್ಕನುಗುಣವಾಗಿ ಹೆಸರಿಟ್ಟಿದ್ದಾರೆ. Class A ಬಸ್ ನಷ್ಟು ದೊಡ್ಡವು - ಕ್ರೀಡಾ ತಂಡಗಳು, ದೊಡ್ಡ ನಟ-ನಟಿಯರು, ಪಾಪ್ ಸ್ಟಾರ್ ಗಳು ತಮ್ಮ ಪ್ರವಾಸಗಳಿಗೆ ಈ ರೀತಿಯ ವಾಹನಗಳನ್ನು ಬಳಸುತ್ತಾರೆ. Class B ಕನಿಷ್ಠ ಗಾತ್ರದ್ದಾಗಿದ್ದು, ೪-೫ ಜನ ಮಲಗುವಷ್ಟು ಜಾಗವಿರುತ್ತದೆ. Class C ಸುಮಾರು ಎಂಟು ಜನರು ಮಲಗುವಷ್ಟು ದೊಡ್ಡದಿರುತ್ತದೆ. ಹಾಗಾಗಿ, ೪ ಜನರ ನಮ್ಮ ಸಂಸಾರಕ್ಕೆ Class B RV ಸೂಕ್ತ ಎಂಬ ನಿರ್ಣಯಕ್ಕೆ ಬಂದೆ. Google ಮತ್ತು Youtube ಬೃಹಸ್ಪತಿಗಳ ಸಹಾಯದಿಂದ ಈ ವಾಹನ ಓಡಿಸುವ ವಿಧಾನ, ಎದುರಿಸಬಹುದಾದ ತೊಂದರೆಗಳು ಇತ್ಯಾದಿಗಳ ಬಗ್ಗೆ ಹೆಚ್ಚಿನ ಮಾಹಿತಿ ಸಂಗ್ರಹಿಸಿದೆ. UHaul ವ್ಯಾನ್ ಅಥವಾ Honda Odyssey ಯಂಥ ದೊಡ್ಡ Family van ಓಡಿಸಿರುವ ಅನುಭವ ಇದ್ದರೆ, Class B RV ಓಡಿಸುವುದು ಹೆಚ್ಚೇನು ಕಷ್ಟವಾಗುವುದಿಲ್ಲ ಎಂಬ ಅನಿಸಿಕೆಗಳನ್ನು ಓದಿ ಸ್ವಲ್ಪ ಉತ್ತೇಜನ ಬಂದಂತಾಯಿತು. ಅದನ್ನೇ ಬಾಡಿಗೆಗೆ ತೆಗೆದುಕೊಳ್ಳುವ ನಿರ್ಧಾರ ಮಾಡಿದೆವು.



ಮುಂದಿನ ಪ್ರಶ್ನೆ, 'ಅದನ್ನು ಎಲ್ಲಿ ಬಾಡಿಗೆಗೆ ತೆಗೆದೊಕೊಳ್ಳುವುದು?' ಎಂದು. www.rvshare.com , www.outdoorsy.com ಮುಂತಾದ website ಗಳು airbnb ತರಹದ private owner rental marketplace ಗಳು. ವಿಭಿನ್ನವಾದ, RV ಗಳು ಇಲ್ಲಿ ಬಾಡಿಗೆಗೆ ದೊರೆಯುತ್ತದೆ. ಆದರೆ RV ಪ್ರಪಂಚದ ಅರಿವು ಬಹಳ ಕಡಿಮೆಯಿದ್ದ ನಮಗೆ ಈ Wild West ಗೆ ಧುಮುಕುವುದು ಸರಿ ಎನಿಸಲಿಲ್ಲ. 'ನಮಗೆ ವಾಹನದ ಚಾಲನೆಯಲ್ಲಿ ಕಷ್ಟವಾದರೆ ಸಹಾಯ ಮಾಡಲು ಯಾರಾದರೂ ಇರುತ್ತಾರೆಯೇ?', 'ಈ ಖಾಸಗಿ ವಾಹನಗಳನ್ನು ಕಾಲಕಾಲಕ್ಕೆ service ಮಾಡಿರುತ್ತಾರೆಯೇ?', 'ಕೋವಿಡ್ ನ ಈ ಸಮಯದಲ್ಲಿ ಈ ವಾಹನಗಳನ್ನು ಅವರು professional-grade ನಲ್ಲಿ ಶುದ್ಧಿ ಮಾಡಿ ನಮಗೆ ಕೊಡುತ್ತಾರೆಯೇ?' ಇಂಥ ಹಲವಾರು ಪ್ರಶ್ನೆಗಳು ನಮ್ಮನ್ನು ಅವರಿಂದ ದೂರ ಸರಿಸಿ professional RV rental company ಗಳತ್ತ ನೋಡುವಂತೆ ಮಾಡಿತು. www.cruiseamerica.com ಮತ್ತು www.elmonterv.com ನನ್ನ ಗಮನ ಸೆಳೆಯಿತು. ವಿಶಿಷ್ಟವಾಗಿ, www.cruiseamerica.com ಅವರ website ಪಕ್ವಾವಾದಂತೆ ಕಂಡು, ಅಲ್ಲಿಂದ ಹಲವಾರು RV ೧೦೧ ವಿಡಿಯೋಗಳು, ಅವರ ೨೪/೭ customer support ಇತ್ಯಾದಿ ಅಲ್ಲೇ ಬಾಡಿಗೆಗೆ ಕೊಳ್ಳುವ ನಿರ್ಧಾರಕ್ಕೆ ಸಹಾಯ ಮಾಡಿತು.



Acadia national park ಗೆ ಹೋಗಬೇಕೆನ್ನುವ ಮುಂದಿನ ಹಂತ RV ಕಲ್ಪನೆಗೆ ಬರುವ ಬಹು ಮುನ್ನವೇ ನಿರ್ಧಾರವಾಗಿತ್ತು. RV ಗಳನ್ನು ಬಿಡಾರ ಹೂಡಲು RV park ಮತ್ತು campground ಗಳು ಇರುತ್ತವೆ. ಎಲ್ಲಾ campground ಗಳಲ್ಲಿ RV ಬಿಡಾರಗಳು ಇರುವುದಿಲ್ಲ. ನನ್ನ ಮುಂದಿನ ಸಂಶೋಧನೆ ಈ ಬಿಡಾರಗಳ ನಿಟ್ಟಿನಲ್ಲಿ. ಖಾಸಗಿ RV park ಮತ್ತು campground ಗಳು ಸೌಕರ್ಯಗಳಲ್ಲಿ, ರಾಷ್ಟ್ರೀಯ ಉದ್ಯಾನವನಗಳಿಗಿಂತ ಮುಂದುವರೆದಿದ್ದರೂ, ಅವರ ಜಾಗ ಚಟುವಟಿಕೆಗಳಿಂದ ದೂರವಿದ್ದು, ನಿವೇಶನಗಳು ಒಂದಕ್ಕೊಂದು ಬಹಳ ಹತ್ತಿರವಿದ್ದು, ಮರ-ಗಿಡಗಳು ಕಡಿಮೆ ಇದ್ದು, ಒಂದು ದೊಡ್ಡ parking lot ನಂತೆ ಇರುವುದೇ ಹೆಚ್ಚು ಕಂಡುಬಂದವು. ಆದರೆ, ರಾಷ್ಟ್ರೀಯ ಉದ್ಯಾನವನಗಳ ಸೀಮಿತ ಮತ್ತು ಆಡಳಿತದಲ್ಲಿರುವ campground ಗಳು ನಿಸರ್ಗದ ಮಡಿಲಲ್ಲೇ ಇದ್ದು, ಸಮುದ್ರ, ನದಿ, hiking trail ಮುಂತಾದವುಗಳಿಗೆ ಹತ್ತಿರದಲ್ಲೇ ಇದ್ದವು. ರಾಷ್ಟ್ರೀಯ ಉದ್ಯಾನವನದಲ್ಲಿ ಬಿಡಾರ ಹೂಡಲು ಕೊಡಬೇಕಾದ ಆರ್ಥಿಕ ಬೆಲೆ ಕಡಿಮೆ ಇದ್ದರೂ, RV campground ದೃಷ್ಟಿಯಿಂದ ಅದು ಮತ್ತೊಂದು ದೊಡ್ಡ ಸವಾಲೊಡ್ಡಿತು.

RV ಯನ್ನು ನಾಲ್ಕಾರು ಚಕ್ರಗಳ ಮೇಲಿರುವ ಒಂದು ಚಿಕ್ಕದಾದ, ಚೊಕ್ಕವಾದ ಮನೆಯೆಂದು ಪರಿಗಣಿಸಬೇಕು. ಎಲ್ಲ ಮನೆಗಳಂತೆ, ಈ ಮನೆಯಲ್ಲೂ ವಿದ್ಯುತ್ ಸಲಕರಣೆಗಳನ್ನು ನಡೆಸಲು ವಿದ್ಯುಚ್ಛಕ್ತಿ, ಅಡಿಗೆ ಮಾಡಲು ನೀರಿನ ವ್ಯವಸ್ಥೆ, ಉಪಯೋಗಿಸಿದ ಬಚ್ಚಲ ನೀರು, ಮಲ-ಮೂತ್ರ ವಿಸರ್ಜನೆಗಳು ಎಲ್ಲಾ ಸರಾಗವಾಗಿ ನಡೆಯಬೇಕು. campground ನಲ್ಲಿ ಇಲ್ಲದಿದ್ದಾಗ ವಿದ್ಯುಚ್ಛಕ್ತಿಗೆ generator ಮತ್ತು ದೀಪಗಳಿಗೆ battery ಯು,ಶುದ್ಧ ನೀರಿನ tank, ವಿವಿಧ ಕೊಳಚೆ ನೀರನ್ನು ಸಂಗ್ರಹಿಸಲು gray water (ಅಡುಗೆ, ಸ್ನಾನದ ನೀರು ) ಮತ್ತು black water (ಶೌಚಾಲಯದ ವಿಸರ್ಜನೆಗಳು) tanks ಇರುತ್ತವೆ. ಸಂಚಾರದಲ್ಲಿರುವಾಗ ನಿಯಮಿತವಾಗಿ ಈ ಸೌಲಭ್ಯಗಳನ್ನು ಉಪಯೋಗಿಸುವ ಕಷ್ಟವಾದ ಅಭ್ಯಾಸವನ್ನು RV ನಮಗೆ ಕಲಿಸುತ್ತದೆ. ನಮ್ಮ ಮನೆಯಲ್ಲಿ ಉಪಯೋಗಿಸುವಂತೆ ಇವುಗಳನ್ನೇನಾದರೂ ದುಂದು ವೆಚ್ಚ ಮಾಡಿದರೆ, ಪ್ರವಾಸದ ಮಧ್ಯೆಯೇ ಯಾವುದಾದರು RV park ಗೆ ಹೋಗಿ ಈ tank ಗಳನ್ನು ತುಂಬಿಸುವ/ಖಾಲಿಮಾಡುವ ಪರಿಸ್ಥಿತಿ ಬರುತ್ತದೆ. ದಿನಗಟ್ಟಲೆ ಮಾಡುವ ಪ್ರಯಾಣವಿದ್ದರೆ, ಈ ಘಟನೆಗೆ ಸಜ್ಜಾಗಿರಬೇಕು. ಇದೇ ಪ್ರಸಂಗದಲ್ಲಿದ್ದಾಗ, RV campground ಸೌಕರ್ಯಗಳ ಬಗ್ಗೆ ವಾಪಸ್ ಬರೋಣ.

ರಾಷ್ಟ್ರೀಯ ಉದ್ಯಾನವನದ RV campgroundಗಳಲ್ಲಿ, ಬಹುತೇಕವಾಗಿ, RV ಯನ್ನು electricity, water ಮತ್ತು sewer hookup ಇರುವುದಿಲ್ಲ. campgroundನಲ್ಲಿರುವ dumping station ಗಳಲ್ಲಿ ಮೇಲೆ ತಿಳಿಸಿದ tank ಗಳ ಸರಿದೂಗಿಕೆ ಮಾಡಬೇಕು. generator ಬೇಕಾಗುವ microwave, Air conditioner ಮುಂತಾದವು ಬೆಳಗ್ಗೆ ಮತ್ತು ಸಂಜೆ ಎರಡು ತಾಸಿನ ಪರಿಮಿತ ಅವಧಿಯಲ್ಲೇ ನಡೆಸಬೇಕು. ಅಮೆರಿಕನ್ ಫೆಡರಲ್ ಸರ್ಕಾರದ www.recreation.gov website ಒಂದು ಮಾಹಿತಿಯ ಆಗರ. ಇಲ್ಲಿ ಎಲ್ಲಾ ಉದ್ಯಾನವನಗಳ ಮಾಹಿತಿ, ಮೀಸಲು ಮಾಡಲು ಸರಳವಾದ ಈ-ಸಲಕರಣೆಗಳು ಇತ್ಯಾದಿ ಬಹಳ ಅಚ್ಚುಕಟ್ಟಾಗಿವೆ. ರಾಷ್ಟ್ರೀಯ ಉದ್ಯಾನವನದ campground ನಿವೇಶನಗಳು best Black friday deals ಗಿಂತ ವೇಗವಾಗಿ ಮಾಯವಾಗುವುದರಿಂದ, ಮೀಸಲು ಕೆಲಸವನ್ನು ಮುಂದಾಲೋಚನೆಯಿಂದ ಕೆಲವು ತಿಂಗಳುಗಳ ಮುಂಚಿತವೇ ಆಯೋಜಿಸಬೇಕು.

RV ಬಾಡಿಗೆ ಕಂಪನಿಗಳು ಅಡುಗೆಮನೆಯ ಸಣ್ಣ ಪಾತ್ರೆ-ಚಮಚಗಳು, ಮಲಗುವ ಹಾಸಿಗೆಗೆ ಬೇಕಾದ ಮಗ್ಗಲು ಹಾಸಿಗೆ ಇತ್ಯಾದಿ ಪ್ರತ್ಯೇಕ ಬಾಡಿಗೆಗೆ ಕೊಟ್ಟರೂ, ನಾವು ನಮ್ಮದೇ ಸಾಮಗ್ರಿ ತೆಗೆದುಕೊಂಡು ಹೋದೆವು. ಅರ್ಧ ಮನೆಯನ್ನೇ ಈ ಸಂಚಾರಿ ಮನೆಗೆ ಸಾಗಿಸಿದಂತಿತ್ತು.

ಈ ಬಹುದಿನಗಳ ಸುದೀರ್ಘ ಆಯೋಜನೆಯ ಫಲಸಾಧನೆಯ ದಿನ ಬಂದೇಬಿಟ್ಟಿತ್ತು. ಹಿಂದಿನ ದಿನ ಹೋಗಿ RVಯನ್ನು ಹತ್ತಿರದ ಕೇಂದ್ರದಿಂದ ನಾನು ಚಾಲನೆ ಮಾಡಿಕೊಂಡು ಬಂದೆ. ಹಿನ್ನೋಟದ ಕನ್ನಡಿ ಇಲ್ಲದೆ, ಬರೀ ಎಡ-ಬಲದ ಕನ್ನಡಿಗಳನ್ನೇ ಉಪಯೋಗಿಸಿ ವಾಹನ ಚಾಲನೆ ಮಾಡುವುದು ಶುರುವಿನಲ್ಲಿ ಸ್ವಲ್ಪ ಕಷ್ಟವೆನಿಸಿತು. Lane ಬದಲಾವಣೆ ಮಾಡುವಾಗ ಬಹಳ ಜಾಗರೂಕವಾಗಿರಬೇಕು. ಏಕೆಂದರೆ ನಮಗೆ ಪಕ್ಕದಲ್ಲಿರುವ ವಾಹನವು ಎಳ್ಳಷ್ಟೂ ಕಾಣುವುದಿಲ್ಲ. ಅದಕ್ಕೆ ಪಕ್ಕದ ಕನ್ನಡಿಯ ಒಳಗಿನ ಮತ್ತೊಂದು ಸಣ್ಣ ಕನ್ನಡಿಯೇ ನಮ್ಮ ಆಪ್ತ ಮಿತ್ರ. ಮನೆಗೆ ತಂದು ನಿಲ್ಲಿಸುವಷ್ಟರಲ್ಲಿ ಈ ರಾಕ್ಷಸದಂತಿರುವ RV ಓಡಿಸುವ ಧೈರ್ಯ ಸ್ವಲ್ಪ ಬಂದಿತ್ತು. ನನ್ನ ಹೆಂಡತಿ,



ಲಕ್ಷ್ಮಿಗೂ ಆ ದಿನವೇ ನಮ್ಮ ಊರು ಸುತ್ತಲೇ ಓಡಿಸಲು ಹೇಳಿ, ತರಬೇತಿಸಿ, ತಯಾರಿ ಮಾಡಿಸಿದೆ. ರಾತ್ರಿಯೆಲ್ಲಾ ಅದರಲ್ಲಿ ಬೇಕಾದ, ಬೇಡದ ಸಾಮಾನುಗಳನ್ನು ತುಂಬಿಸಿಕೊಂಡು, ಹೊತ್ತಾರೆ ಎದ್ದು, Acadia national park ಕಡೆಗೆ ನಮ್ಮ ಯಾತ್ರೆ ಶುರುವಾಯಿತು.

ಒಂದೆರಡು ವಿಚಾರ ಮಾಮೂಲಿ ಕಾರ್ ಓಡಿಸುವ ನಮಗೆ ಪದೇಪದೇ ಮರೆಯುವಂತೆ ಮಾಡುತ್ತಿದ್ದದ್ದು ಅದರ ಅಸಾಮಾನ್ಯ ಎತ್ತರ ಮತ್ತು ಗಾತ್ರ. ಎಡ -ಬಲಕ್ಕೆ ತಿರುಗುವಾಗ ಅದನ್ನು ವಿಸ್ತರಿಸಿ ಮಾಡುವುದು, tunnel ಗಳಲ್ಲಿ ಈ propane gas ಇರುವ ವಾಹನ ನಿಷೇಧವೇ ಎಂದು ತಿಳಿಯುವುದು, bridge ಗಳ ಕೆಳಗೆ ಇದರ ಎತ್ತರದ ವಾಹನ ಹೋಗುತ್ತದೆಯೇ ಎಂಬ ನಿಗಾ ಇಡುವುದು, tollbooth ಗಳಲ್ಲಿ ಅಗಲದ ಕೊನೆಯ Lane ಗೆ ಹೋಗುವುದು ಹೀಗೆ ಹಲವಾರು ಸಾಧಾರಣ ಚಾಲನೆಯಲ್ಲಿ taken-for-granted ಅದ ವಿಷಯಗಳು ಇಲ್ಲಿ ಅನಾಹುತಕಾರಿಯಾಗುವ ಸಂಭವಗಳಿವೆ.

ಇಷ್ಟೆಲ್ಲಾ ಹರಸಾಹಸದ ನಂತರ ನಮ್ಮ ರಥವನ್ನು ದಟ್ಟ ಕಾಡಿನ ಮಧ್ಯೆ, ಸಮುದ್ರದ ಪಕ್ಕದಲ್ಲೇ ಇರುವ ನಿವೇಶನದಲ್ಲಿ ನಿಲ್ಲಿಸಿ, ನಿಟ್ಟುಸಿರು ತೆಗೆದುಕೊಂಡಾಗ, ಪಟ್ಟ ಕಷ್ಟವೆಲ್ಲಾ ಯೋಗ್ಯವೆನಿಸಿತು. ಅಲ್ಲಿ ಕಂಡ ಕಗ್ಗತ್ತಲು ನಾವು ಇನ್ನೆಲ್ಲಿಯೂ ನೋಡಿಲ್ಲ. ಮೊದಲೆರಡು ದಿನ ನೀಲಿ ಆಕಾಶವಿದ್ದುದರಿಂದ RV ಇಂದ ಹೊರಗೆ ಬಂದು ಕೂತರೆ ಸಾಕು, ರಾತ್ರಿ ಕೋಟ್ಯಾನುಕೋಟಿ ನಕ್ಷತ್ರಗಳ ಜಾತ್ರೆ. ಬೆಳಗಿನ hiking /biking ಮುಂತಾದ ಚಟುವಟಿಕೆಗಳನ್ನು ಮುಗಿಸಿ ಸುಸ್ತಾಗಿ ಬಂದ ನಂತರ, ಹತ್ತಿರದಿಂದಲೇ ತಂದಿದ್ದ ಒಂದೆರಡು ಮಣ ಸೌದೆ ಉಪಯೋಗಿಸಿ, ಪ್ರತಿ ರಾತ್ರಿ campfire, marshmellows, s'mores, grilled sandwich, ತರಕಾರಿ ಸುಟ್ಟು ತಿನ್ನುವ ಸಡಗರ. cellphone reception ಸಂಪೂರ್ಣವಾಗಿ ಶೂನ್ಯವಾಗಿದ್ದ ಈ ಕಾಡಿನಲ್ಲಿ ಮಕ್ಕಳಿಗೆ ಏಳು ದಿನ ಪ್ರಕೃತಿಯ ಒಡನಾಟ ಬಿಟ್ಟರೆ ಬೇರೇನೂ ಇರಲಿಲ್ಲ. ಮರಗಳೆರಡರ ಮಧ್ಯ hammock




ಕಟ್ಟಿಕೊಂಡು ಓಲಾಡುತ್ತಿದ್ದಾಗ, ಬಿಸಿಬಿಸಿಯಾಗಿ ಅಮ್ಮ pancakes ಅಥವಾ ಗಂಡನಿಗೆ ಬಿಸಿ ಕಾಫಿ ಮಾಡಿ, picnic table ಹತ್ತಿರ ಬರಹೇಳಿದರೆ, ಸ್ವರ್ಗಕ್ಕೆ ಅರ್ಧ ಗೇಣಷ್ಟೇ ಅಲ್ಲವೇ? ಪ್ರಕೃತಿಯ ಉಡಿಯಲ್ಲಿ, ಇಷ್ಟು ನಿಕಟವಾಗಿ ಆರೇಳು ದಿನ ಕಾಲ ಕಳೆಯಲು, RV ಇಲ್ಲದಿದ್ದರೆ ಖಂಡಿತ ಸಾಧ್ಯವಾಗುತ್ತಲಿರಲಿಲ್ಲ.

ಈ RV ಸಾಹಸ ನಮಗೊಂದು ಮರೆಯಲಾಗದ, ಅಪೂರ್ವ, ಅಮೋಘ ಅನುಭವ. ಗಮನಕ್ಕಿಟ್ಟುಕೊಳ್ಳಬೇಕಾದ ಒಂದು ಮುಖ್ಯ ವಿಷಯವೆಂದರೆ: ಇಲ್ಲಿ ನಾವು ಬಹಳಷ್ಟು ಕಷ್ಟ ಪಡಬೇಕು. ಇದು ಹೋಟೆಲಿನ ಕೊಠಡಿಯಲ್ಲ; ಮನೆ ನಿಭಾಯಿಸುವ ಕೆಲಸಕ್ಕಿಂತ ಸ್ವಲ್ಪ ಹೆಚ್ಚಿನ ಕೆಲಸವೇ; ಹತ್ತಾರು meter ಗಳನ್ನು ನೋಡಿ ಯಾವುದು ಕಡಿಮೆ-ಜಾಸ್ತಿಯಾಗುತ್ತಿದೆ ಎಂದು ಪರಿಶೀಲಿಸುತ್ತಿರಬೇಕು; ಎಲ್ಲಾ ತರಹದ ಇತಿ-ಮಿತಿಯನ್ನು RV ಕಲಿಸುತ್ತದೆ; ಕೊನೆಗೆ "I need a vacation after this vacation" ಎಂಬ ಮನಃಸ್ಥಿತಿ ಬಂದರೂ, ಅದರ ಅತಿಶಯವಾದ ಅನುಭವ ನಮ್ಮಲ್ಲಿ ಚಿರಸ್ಥಾಯಿಯಾಗಿ ನಿಲ್ಲುವುದು ಖಚಿತ.



# ನನ್ನ ಕವನ

ಮಧುಕರ್ ರಾವ್

## ಶಾಸ್ತ್ರಿಜಿ ನೆನಪು

ಮರೆಯುವುದುಂಟೆ? ನಮ್ಮ ಶಾಸ್ತ್ರಿ ಜಿ,
ನಮ್ಮ ನಿಮ್ಮೆಲ್ಲರ ಪ್ರೀತಿಯ ಲಾಲ್ ಜಿ,
ಶಾಸ್ತ್ರಿ ಜೀ ಜೈ ಜವಾನ್ ಜೈ ಕಿಸಾನ್ ನ ಅಣ್ಣಾ ಜಿ,
ಸರಳ ಸಜ್ಜನಿಕೆಯ ಬಹದ್ದೂರ್ ಜಿ,
ಎಲ್ಲಾ ಕೆಲಸಗಳಲ್ಲಿ ಇತ್ತು ಮುತುವರ್ಜಿ,
ಸರ್ವರಲ್ಲೂ - ವಿಷಯದಲ್ಲೂ ಇತ್ತು ಕಾಳಜಿ.

ಮೂರ್ತಿ ಚಿಕ್ಕದಾದರೇನು ಕೀರ್ತಿ ದೊಡ್ಡದು,
ಕುಳ್ಳಗಿದ್ದರೇನು ಯಾರಿಗೂ ತಲೆಬಾಗದೇ ಲಾಲ್ ತಲೆ ಎತ್ತಿ ಉತ್ತರಿಸಿದ್ದು.
ಎಷ್ಟೇ ದೊಡ್ಡವರಾದರು ತಲೆ ಬಗ್ಗಿಸಿ ಉತ್ತರಿಸಲೇ ಬೇಕಿದ್ದು,
ಹತ್ಯಾರೊಂಕ ಜವಾಬ್, ಹತ್ಯಾರೋಂ ಸೆ ದೇಂಗೆ
ಅಂತ ಕೆಂಪುಕೋಟೆ ಮೇಲೆ ಅಂದಿದ್ದು.
ಇವರಿಂದೇನಾಗುತ್ತೆಂದು ಹಲವರು ಅಂದುಕೊಂಡಿದ್ದು,
17 ತಿಂಗಳಲ್ಲಿ, 17 ವರ್ಷ ಮಾಡಲಾಗದಷ್ಟು ಮಾಡಿದ್ದು,
ಪಾಕಿ ಯುದ್ದ ಘೋಷಣೆ ಮಾಡಿದ್ದು,
ಆಯೂಬ್ ಖಾನ್ ಗೆ ಬೆವರಿಳಿಸಿದ್ದು
ಅಮೆರಿಕಗೆ ಸೆಡ್ಡು ಹೊಡೆದಿದ್ದು,
ಪಾಕ್ ಟ್ಯಾಂಕರ್ ಗಳು ವಶವಾಗಿದ್ದು,
ಸಾಧನೆಯ ಪವರ್ ತೋರಿಸಿದ್ದು
ಇಂದು ಇತಿಹಾಸ ವಾಗಿದ್ದು.
ಮರೆಯಲಾಗದ ಜೀವ ನೀವಾಗಿದ್ದು.
ಪ್ರಾಮಾಣಿಕ ತೆ ನಿಶ್ಕಲ್ಮಶ ಪ್ರೀತಿ ನಿಮ್ಮದು.

ಮರೆಯುವುದುಂಟೆ? ನಿಮ್ಮ ಪ್ರೀತಿ ಋಣವ,
ಜನ ಮನಸಿನ ಬಹದ್ದೂರ್ ನೀವು ಎಂದೆಂದಿಗೂ

## ಕನಸಿನ ದೇಶ

"ಕೆಂಚ" ರನ್ನೋಡಿಸಿ,
"ಖಾದಿ" ಗಳನ್ನು ಕೂರಿಸಿದೆವು
ಸ್ವಾತಂತ್ರ್ಯ ಬಂದ ಬಳಿಕ.
ಗಾಂಧಿ ಕನಸಿನ ರಾಮ ರಾಜ್ಯ,
ನನಸಾಗುವುದೆಂದು.

ತೃಪ್ತಿ ಯಿಲ್ಲದ ತುಷ್ಟಿಗುಣ ಇವರಿಗೆ
ಬರಿದು ಮಾಡುತ್ತಾರೆ ಬೊಕ್ಕಸ
ಮತ್ತೊಬ್ಬರು ಬರುವವರೆಗೆ.

ಕಾನೂನಿನ ಲ್ಲೇ ಕರಿಕಲ್ಲು ನುಂಗಿ
ಎಲ್ಲಾ "ಜಿ" ಗಳೆನ್ನೆಲ್ಲ ಜೀರ್ಣಿಸಿ ಕುಡಿಸಿ, ತಿನ್ನಿಸಿ, ಹಣ ಹೊಡೆಯುವುದಕ್ಕೆ
ಯೋಚಿಸುತ್ತಾರೆ, ಯೋಜನೆಗಳ ರೂಪು ರೇಷೆ ಹಾಕಿ.

ಕಚ್ಚಾಡುವ ರಾಜಕೀಯ ಕಲಾಪಗಳನ್ನ ಬಿತ್ತರಿಸುವ ದೂರದರ್ಶನ,
ನೋಡಿದ್ರೆ, ನಾಚಿಕೊಂಡಾನು ಸಿನಿಮಾ ಖಳನಾಯಕನೂ.
ಕರೋನ ತಡೆಗಟ್ಟಲು ಎಲ್ಲಾ ಒಂದಾಗುವರೇನೋ! ನಂಬೋಣ.

ಖಾದಿ ರಗ್ಗಿನಷ್ಟೇ ಮಂದ ಬುದ್ದಿ ಹಲವು ಮಂದಿಗೆ,
ಗುಂಡು, ತುಂಡು ತಿಂದು, ಗುಂಡಗಾಗುತ್ತಾರೆ,
ಚುನಾವಣೆಯಲ್ಲಿನ ಮೂರು ದಿನ.
ಇನ್ನಾದರೂ ಎಚ್ಚೆತ್ತು ನಡೆಯೋಣ
ಆಮಿಷಗಳಿಗೆ ಕಡಿವಾಣ ಹಾಕೋಣ.

ಇನ್ನೆಲ್ಲಿಯ ರಾಮರಾಜ್ಯ, ಇನ್ನೆಲ್ಲಿಯ ರಾಮ ಅನ್ನೋ ಕಾಲದಿ,
ಕೊನೆಗಾಲದಲ್ಲಿ ಕರೆದರು ಗಾಂಧಿ, "ಹೇ ರಾಮ್", ಎಂದು.
ತಿಳಿದಿತ್ತೇ!!? ಅವರಿಗೆ ರಾಮ ಮಂದಿರ ಕಟ್ಟೋ ನಾಯಕ ಹುಟ್ಟಿ
ಬರುವನೆಂದು?.
ಕಾದು ನೋಡೋಣ ಪ್ರಗತಿ,
ನಿದಾನವಾಗಿ ಪ್ರಧಾನವಾಗಲೆಂದು.



# ದುರ್ಗಾ ಪೂಜೆಯ ವಿಶೇಷ ನೈವೇದ್ಯ

ಕೃಪಾ ಸುರೇಶ್

## ಮುದ್ದೆ ಪರಮಾನ್ನ /ಗುಡಾನ್ನ ಪಾಕವಿಧಾನ

***ಪದಾರ್ಥಗಳು***

ಹಸಿ ಅಕ್ಕಿ- 1/2 ಕಪ್
ಬೆಲ್ಲ- 1 ಕಪ್
ಕರಗಿದ ತುಪ್ಪ- 1/2 ಕಪ್
ಮಾಗಿದ ಬಾಳೆಹಣ್ಣು- 1
ತೆಂಗಿನ ತುರಿ - 1/2 ಕಪ್
ಜೇನುತುಪ್ಪ- 1/4 ಕಪ್
ಏಲಕ್ಕಿ- 2 ಕಾಳುಗಳು
ಗೋಡಂಬಿ- ಕೆಲವು
ಒಣದ್ರಾಕ್ಷಿ- ಕೆಲವು



***ತಯಾರಿಸುವ ವಿಧಾನ***


1.ಬಾಳೆ ಹಣ್ಣಿನ ಸಿಪ್ಪೆ ತೆಗೆದು ಸಣ್ಣ ತುಂಡುಗಳಾಗಿ ಕತ್ತರಿಸಿ. ಏಲಕ್ಕಿಯನ್ನು ನುಣ್ಣಗೆ ಪುಡಿ ಮಾಡಿ ಇಟ್ಟುಕೊಳ್ಳಿ.
2.ತುಪ್ಪದಲ್ಲಿ ಗೋಡಂಬಿ ಮತ್ತು ದ್ರಾಕ್ಷಿಯನ್ನು ಒಂದರ ನಂತರ ಒಂದರಂತೆ ಹುರಿದು ಪಕ್ಕದಲ್ಲಿಡಿ.
3.ಬಾಣಲೆಯಲ್ಲಿ 1.5 ಕಪ್ ನೀರು ಸೇರಿಸಿ ಕುದಿಯಲು ಬಿಡಿ. ನೀರು ಕುದಿಯುವಾಗ, ಅದರಲ್ಲಿ ತೊಳೆದ ಅಕ್ಕಿಯನ್ನು ಸೇರಿಸಿ.ಅಕ್ಕಿ ಮೃದುವಾಗುವವರೆಗೆ ಮಧ್ಯಮ ಉರಿಯಲ್ಲಿ ಬೇಯಲು ಬಿಡಿ.
4.ಒಂದು ಪಾತ್ರೆಯಲ್ಲಿ ಬೆಲ್ಲ ಮುಳುಗುವಷ್ಟು ನೀರು ಹಾಕಿ, ಬೆಲ್ಲ ಕರಗಿದ ನಂತರ , ಸೋಯಿಸಿ ಪಾಕ್ಕಕ್ಕೆ ಬೇಯಿಸಿದ ಅನ್ನ,ತೆಂಗಿನ ತುರಿ ಸೇರಿಸಿ ಚೆನ್ನಾಗಿ ಕಲಕಿ. ಕನಿಷ್ಠ 5 ರಿಂದ 10 ನಿಮಿಷ ಬೇಯಿಸಬೇಕು.
5.ಗುಡಾನ್ನ ಬಾಣಲೆಯನ್ನು ಬಿಟ್ಟು ಗಟ್ಟಿ ಯಾಗಿ ರೂಪುಗೊಂಡಾಗ,ಈ ಹಂತದಲ್ಲಿ ತುಪ್ಪದಲ್ಲಿ ಹುರಿದ ಒಣದ್ರಾಕ್ಷಿ,ಗೋಡಂಬಿ, ಜೇನುತುಪ್ಪ, ಏಲಕ್ಕಿ ಪುಡಿ ಮತ್ತು ಕತ್ತರಿಸಿದ ಬಾಳೆಹಣ್ಣಿನ ತುಂಡುಗಳನ್ನು ಸೇರಿಸಿ ಚೆನ್ನಾಗಿ ಬೆರೆಸಿ.
6.ಗುಡಾನ್ನ/ಗಟ್ಟಿ ಪರಮಾನ್ನ ಬಡಿಸಲು ಸಿದ್ಧವಾಗಿದೆ. ಇದು ದುರ್ಗಾದೇವಿಯ ನೈವೇದ್ಯಕ್ಕೆ ಕಡ್ಡಾಯವಾಗಿ ನೀಡಲಾಗುತ್ತದೆ.
ನಿಮಗೆಲ್ಲರಿಗು ನವರಾತ್ರಿ ಹಬ್ಬದ ಶುಭಾಶಯಗಳು. ದೇವರು ನಿಮ್ಮೆಲ್ಲರನ್ನು ಆಶೀರ್ವದಿಸಲಿ.





# ಮಕ್ಕಳ ಕೈಯಲ್ಲಿ ಅರಳಿದ ಕಲೆ

ಸಿರಿ ತೈಲಿಗೇರಿ



# ಮಕ್ಕಳ ಕೈಯಲ್ಲಿ ಅರಳಿದ ಕಲೆ



ಸಾಚಿ ನಿಂಬೆಕಾಯಿ



# ಮಕ್ಕಳ ಕೈಯಲ್ಲಿ ಅರಳಿದ ಕಲೆ



ದಿಯಾ ರಜನೀಶ











# ಮಕ್ಕಳ ಕೈಯಲ್ಲಿ ಅರಳಿದ ಕಲೆ

ಅನ್ವಿತಾ ಪ್ರಶಾಂತ್







# ಛಾಯಾ ಚಿತ್ರಗಳು

ಮಂಜುನಾಥ್ ಶಂಕರ್







# ಛಾಯಾ ಚಿತ್ರಗಳು

ಮಂಜುನಾಥ್ ಶಂಕರ್

